ಗುರುವಾರ, ಅಕ್ಟೋಬರ್ 28, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಂತಿಮ ಸ್ಪರ್ಶ

ಕಾಳಿ ಪೂಜೆ ಪ್ರಯುಕ್ತ ಕೋಲ್ಕತ್ತದಲ್ಲಿ ಕಾಳಿ ದೇವಿಯ ಮಣ್ಣಿನ ಮೂರ್ತಿಗೆ ಬುಧವಾರ ಕಲಾವಿದರು ಅಂತಿಮ ಸ್ಪರ್ಶ ನೀಡಿದರು

PURVA LAND

A PURAVANKARA® INITIATIVE

PRM/KA/RERA/1251/309/PR/211008/004355

ನಿಮ್ಮ ಕನಸಿನ ಪ್ರತಿಬಿಂಬದ ನಿವೇಶನ.
ಇಟಲಿ ಶೈಲಿಯ ವಿನ್ಯಾಸದಿಂದ ಸ್ಫೂರ್ತಿಗೊಂಡ
ಉದ್ಯಾನಗಳಿಂದ ಆವೃತವಾದ ಸ್ಥಳ.

ನಿಮಗಾಗಿ ಪರಿಚಯಿಸುತ್ತಿದ್ದೇವೆ ಟಿವೋಲಿ ಹಿಲ್ಸ್.

Imagery used is only for representation purpose

ಕಂಗೊಳಿಸುವ ಹಸಿರಿನ ನಡುವೆ ಅಭಿವೃದ್ಧಿಪಡಿಸಲಾಗಿರುವ 60 ಎಕರೆ ವಿಸ್ತೀರ್ಣದಲ್ಲಿರುವ ನಿವೇಶನಗಳು, ಸಂವಹನಕ್ಕೆ ಧಕ್ಕೆಯಾಗದಂಥ ಖಾಸಗಿತನ, ಗೇಟೆಡ್ ಸಮುದಾಯದ ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಸ್ವರ್ಗ, ಉಲ್ಲಾಸದಾಯಕ ವಿನ್ಯಾಸದ ಇಟಲಿ ಪುನರುತ್ಥಾನ ನೆನಪಿಸುವ ಕೃತೋಟ ಮತ್ತು ಉದ್ಯಾನಗಳು. ಸ್ವಚ್ಛ, ಸುಂದರ ಪರಿಸರದ ಹೊಠಾಂಗಣದಲ್ಲಿ ನಲಿಯುತ್ತಾ ಮತ್ತು ಕಂದಕಗಳಲ್ಲಿ ಅಡಗಿರುವ ನಾಗರಿಕ ಸೌಲಭ್ಯಗಳೊಂದಿಗೆ ಅತ್ಯದ್ಭುತ ಮೂಲಸೌಕರ್ಯಗಳನ್ನು ಆಸ್ವಾದಿಸಿ. ಜೀವನದ ಎಲ್ಲಾ ಕನಸುಗಳನ್ನು ನನಸು ಮಾಡಿಕೊಳ್ಳುವ ಜೊತೆಗೆ ತಲೆತಲಾಂತರದವರೆಗೂ ಸುಖಮಯ ಜೀವನ ನಡೆಸಬಹುದಾದ ತಾಣ.

ಆಯಕಟ್ಟಿನ ಸ್ಥಳಗಳಲ್ಲಿ ಇಟಲಿ ಪುರುತ್ಥಾನದಿಂದ ಸ್ಫೂರ್ತಿಗೊಂಡ ಉದ್ಯಾನಗಳು

50+ ಲೈಫ್‌ಸ್ಟೈಲ್ ಸೌಲಭ್ಯಗಳು, 16,000 ಚದರಡಿಯ ಒಂದು ಕ್ಲಬ್ ಹೌಸ್ ಸಹಿತ

ಅತ್ಯದ್ಭುತ ಮೂಲಸೌಕರ್ಯಗಳು

ಸ್ವರ್ಗಸದೃಶ ಬೆಟ್ಟದ ನೋಟ

ಈಗ ಖರೀದಿಸಿ, ಎಂದಿಗಾದರೂ ನಿರ್ಮಿಸಿಕೊಳ್ಳಿ

1,200 ಚದರಡಿ ವಿಸ್ತೀರ್ಣದ ನಿವೇಶನಗಳಿಂದ ಆರಂಭ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 080 4455 5527.

TIVOLI HILLS

PLOTTED DEVELOPMENT | 10 MINS. FROM THE BENGALURU INTERNATIONAL AIRPORT

Terms & Conditions apply | For more information, visit https://rera.karnataka.gov.in.

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

ಗುರುವಾರ, ಅಕ್ಟೋಬರ್ 28, 2021 | ₹ 6.00

www.prajavani.net

/prajavani.net @prajavani / prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಾರ್ಷಿಕೋತ್ಸವ

ಬದ್ಗಾಮ್ ಲ್ಯಾಂಡಿಂಗ್‌ನ 75ನೇ ವಾರ್ಷಿಕೋತ್ಸವ ನಿಮಿತ್ತ ಕಾಶ್ಮೀರದ ಶ್ರೀನಗರದಲ್ಲಿ ಬುಧವಾರ ಭಾರತೀಯ ಸೈನಿಕರು ಪ್ರದರ್ಶಿಸಿದ ಸೈನ್ಯದ ಲ್ಯಾಂಡಿಂಗ್‌ನ ಮರುಸೃಷ್ಟಿಯ ಚಿತ್ರವನ್ನು ಯೋಧರ ಪತ್ನಿಯರು ಮೊಬೈಲ್‌ನಲ್ಲಿ ಸೆರೆಹಿಡಿದರು

ಭೀಮ ಮಹಾ ಉತ್ಸವ್

ಕೊಡುಗೆ ಶೀಘ್ರದಲ್ಲೇ ಕೊನೆಗೊಳ್ಳಲಿದೆ

1925 ರಿಂದ
ನಿಮ್ಮ ವಿಶ್ವಾಸನೀಯ ಭೀಮ ಜ್ಯುವೆಲ್ಲರ್ಸ್
ನಿಂದ ಹಬ್ಬದ ಆಕರ್ಷಕ ಕೊಡುಗೆಗಳ ಮೂಲಕ
ನಿಮ್ಮ ಸಂಪ್ರದಾಯಗಳು
ಇನ್ನಷ್ಟು ಮೆರಗಲಿ

ಖರೀದಿಸಿ BIS 916 ಹಾಲ್ ಮಾರ್ಕ್

ಚಿನ್ನ

ಪ್ರತಿ ಗ್ರಾಂಗೆ

₹3,899/-* ರಷ್ಟು

ಕಡಿಮೆ ಬೆಲೆ ವರೆಗೂ

+

1+1 ಉಚಿತ*

ವಜ್ರ

ಪ್ರತಿ ಕ್ಯಾರಟ್ ಗೆ

₹10,000/-

ದವರೆಗೆ ರಿಯಾಯಿತಿ*

1+1 ಉಚಿತ*

ಹಳೆಯ ಚಿನ್ನಾಭರಣಗಳ ಎಕ್ಸ್‌ಚೇಂಜ್

ಹೆಚ್ಚುವರಿ

₹100/-* ಪ್ರತಿ ಗ್ರಾಂಗೆ

ಬೆಳ್ಳಿ

ತಯಾರಿಕಾ ಶುಲ್ಕದ ಮೇಲೆ

60% ವರೆಗೆ ರಿಯಾಯಿತಿ*

ಅತಿ ದೊಡ್ಡ ಸಿಲ್ವರ್ ಕಲೆಕ್ಷನ್

*ಷರತ್ತುಗಳು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.

BIS 916 ಹಾಲ್ ಮಾರ್ಕ್ ಉತ್ಪನ್ನ

ಪ್ರಮಾಣಿತ ವಜ್ರಗಳು

ಸುಲಭ ಎಕ್ಸ್‌ಚೇಂಜ್ ಮತ್ತು ಹಿಂಪಡೆಯುವಿಕೆ

ಪಾರದರ್ಶಕ ಬಿಲ್ಲಿಂಗ್

BHIMA Helpline Toll Free
1800-121-9076
(10:00am to 7:00pm)

ಇಲ್ಲಿಯೂ ಲಭ್ಯ www.bhimagold.com | amazon.in |

ಬೆಂಗಳೂರು: ಡಿಕನ್ಸನ್ ರಸ್ತೆ · ಕುಂದಲಹಳ್ಳಿ · ಜಯನಗರ · ಕೋರಮಂಗಲ · ರಾಜಾಜಿನಗರ · ಎಚ್ ಬಿ ಆರ್ ಲೇಔಟ್ · ಹೂಡಿ · ಮಲ್ಲೇಶ್ವರಂ.
ಉಡುಪಿ. ಹಾಸನ. ಮಂಗಳೂರು. ಶಿವಮೊಗ್ಗ. ವಿಜಯವಾಡ. ಚೆನ್ನೈ

BHIMA JEWELLERS
GOLD • DIAMONDS • SILVER • PLATINUM

INDIA • UAE
SINCE 1925

₹6000 ಕೋಟಿ ಹಗರಣ ಆರು ಮಂದಿ ಬಂಧನ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಬರೋಡಾದಲ್ಲಿ ನಡೆದಿದೆ ಎನ್ನಲಾದ ₹6,000 ಕೋಟಿ ಮೊತ್ತದ ವಿದೇಶಿ ವಿನಿಮಯ ಪಾವತಿ ಹಗರಣಕ್ಕೆ ಸಂಬಂಧಿಸಿ ಆರು ಜನರನ್ನು ಸಿಬಿಐ ಬುಧವಾರ ಬಂಧಿಸಿದೆ. ಹಗರಣವು 2015ರಲ್ಲಿ ಬಯಲಿಗೆ ಬಂದಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ 14 ಸ್ಥಳಗಳಲ್ಲಿ ಸಿಬಿಐ ಶೋಧ ನಡೆಸಿದೆ. ಸಿಬಿಐ ವಿಶೇಷ ನ್ಯಾಯಾಲಯದಲ್ಲಿ 2015ರ ಡಿಸೆಂಬರ್‌ನಲ್ಲಿ ಆರೋಪ ಪಟ್ಟಿಯನ್ನು ಸಿಬಿಐ ದಾಖಲಿಸಿತ್ತು. ಬ್ಯಾಂಕ್ ಆಫ್ ಬರೋಡಾದ ಆಗಿನ ಎಜಿಎಂ, ವಿದೇಶ ವಿನಿಮಯ ಅಧಿಕಾರಿಯ ವಿರುದ್ಧ ಆರೋಪಪಟ್ಟಿ ದಾಖಲಿಸಲಾಗಿತ್ತು ಎಂದು ಸಿಬಿಐ ವಕ್ತಾರ ಆರ್.ಸಿ.ಜೋಶಿ ತಿಳಿಸಿದ್ದಾರೆ.

ತನುಜ್ ಗುಲಾಟಿ, ಐಶ್ ಭೂತಾನಿ, ಉಜ್ವಲ್ ಸೂರಿ, ಹನಿ ಗೋಯಲ್, ಸಾಹಿಲ್ ವಾಧ್ವಾ ಮತ್ತು ರಾಕೇಶ್ ಕುಮಾರ್ ಬಂಧಿತರು. ಬ್ಯಾಂಕ್ ಆಫ್ ಬರೋಡಾದ ದೆಹಲಿಯ ಅಶೋಕವಿಹಾರ್ ಶಾಖೆಯಲ್ಲಿರುವ 59 ಕರೆಂಟ್ ಅಕೌಂಟ್‌ಗಳಿಂದ ವಿವಿಧ ದೇಶಗಳಲ್ಲಿರುವ ಖಾತೆಗಳಿಗೆ ಸುಮಾರು ₹6,000 ಕೋಟಿಯನ್ನು ಪಾವತಿಸಲಾಗಿತ್ತು. ಬ್ಯಾಂಕ್‌ನ ಹಲವು ಅಧಿಕಾರಿಗಳು ಮತ್ತು ಇತರರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು.

2014ರ ಜುಲೈಯಿಂದ 2015ರ ಜುಲೈ ಅವಧಿಯಲ್ಲಿ ಸುಮಾರು ಎಂಟು ಸಾವಿರ ವಹಿವಾಟುಗಳ ಮೂಲಕ ಈ ಮೊತ್ತವನ್ನು ವರ್ಗಾಯಿಸಲಾಗಿತ್ತು.

ಪ್ರತಿ ವಹಿವಾಟಿನ ಮೊತ್ತವನ್ನು ಒಂದು ಲಕ್ಷ ಡಾಲರ್‌ಗಿಂತ (ಈಗಿನ ಮೌಲ್ಯದಲ್ಲಿ ಸುಮಾರು ₹75 ಲಕ್ಷ) ಕಡಿಮೆ ಇರುವಂತೆ ನೋಡಿಕೊಳ್ಳಲಾಗಿತ್ತು. ಮುಂಗಡವಾಗಿ ಈ ಹಣವನ್ನು ರವಾನಿಸಲಾಗಿತ್ತು. ಎಲ್ಲ ಹಣವೂ ಒಬ್ಬರದೇ ಖಾತೆಗೆ ಜಮಾ ಆಗಿತ್ತು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

'ಅಹವಾಲು ಆಲಿಸಿ ವರದಿ ಸಲ್ಲಿಕೆ; ಏಕಪಕ್ಷೀಯ ಪ್ರಶ್ನೆ ಇಲ್ಲ'

ಚಿಕ್ಕಮಗಳೂರು: 'ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾ ವಿಚಾರಕ್ಕೆ ಸಂಬಂಧಿಸಿದಂತೆ ಅಹವಾಲು, ದಾಖಲೆ ಆಹ್ವಾನಿಸಿ, ಅಭಿಪ್ರಾಯ ಸಂಗ್ರಹಿಸಿ ವಿಚಾರಣೆ ನಡೆಸಿ ಸಮಿತಿಯು ಸರ್ಕಾರಕ್ಕೆ ವರದಿ ನೀಡಿತ್ತು. ಅದು ಏಕಪಕ್ಷೀಯ ಹೇಗಾಗುತ್ತದೆ' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಪ್ರಶ್ನಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ,'ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದ್ದೆವು. ಅದಕ್ಕೆ ಸ್ಪಂದಿಸಿ ಅನೇಕರು ದಾಖಲೆಗಳನ್ನು ನೀಡಿದ್ದರು. ಮೌಖಿಕ ವಿಚಾರಣೆಯನ್ನು ನಡೆಸಿದ್ದೆವು. ಹಲವರು ಅಹವಾಲುಗಳನ್ನು ತಿಳಿಸಿದ್ದರು. ಎಲ್ಲವನ್ನು ಪರಿಗಣಿಸಿ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಏಕಪಕ್ಷೀಯ ವರದಿಯ ಪ್ರಶ್ನೆಯೇ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಅನಧಿಕೃತ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳದ ಬಿಬಿಎಂಪಿ

ಗೌರವ್ ಗುಪ್ತಗೆ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಅನಧಿಕೃತ ಕಟ್ಟಡಗಳ ವಿರುದ್ಧ ಕ್ರಮಕೈಗೊಳ್ಳದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರನ್ನು ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿದೆ.

2019ರಲ್ಲಿ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ಮತ್ತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ಪೀಠ, 'ನಿಮ್ಮನ್ನು ರಕ್ಷಿಸಲು ನಾವಿದ್ದೇವೆ. ಆದರೆ, ಕ್ರಮ ಕೈಗೊಳ್ಳಲು ನೀವು ಹೆದರುವುದೇಕೆ? ನೀವು ಅತೀ ಮುಖ್ಯ ಹುದ್ದೆಯಲ್ಲಿದ್ದೀರಿ ಮತ್ತು ನೀವು ಕೆಲಸ ಮಾಡುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೇವೆ. ಹೋಗಿ ಕೆಲಸ ಮಾಡಿ' ಎಂದು ನ್ಯಾಯಾಲಯಕ್ಕೆ ಹಾಜರಾಗಿದ್ದ ಗೌರವ್ ಗುಪ್ತ ಅವರಿಗೆ ಸೂಚನೆ ನೀಡಿತು.

'ಯೋಜನಾ ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ 4,279 ಕಟ್ಟಡಗಳನ್ನು ಗುರುತಿಸಲಾಗಿದೆ. ಇನ್ನೂ 2,591 ಕಟ್ಟಡಗಳ ಸಮೀಕ್ಷೆ ಬಾಕಿ ಇದೆ' ಎಂದು ಗೌರವ್ ಗುಪ್ತ ಪ್ರಮಾಣ ಪತ್ರ ಸಲ್ಲಿಸಿದರು. ಯೋಜನೆ ರೂಪಿಸದೆ, ಅನುಮತಿ ಪಡೆಯದೆ ನಿರ್ಮಾಣ ಆಗಿರುವ ಕಟ್ಟಡಗಳ ಸಮೀಕ್ಷೆಯನ್ನೇ ನಡೆಸಿಲ್ಲ ಎಂಬುದನ್ನು ಪೀಠ ಗಮನಿಸಿತು.

'ಪ್ರಮಾಣಪತ್ರದಲ್ಲಿ ಇರುವ ಮಾಹಿತಿ ಬಗ್ಗೆ ತೃಪ್ತಿ ಇಲ್ಲ. ಈ ಸಂಬಂಧ 2019ರಲ್ಲೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎರಡು ವರ್ಷ ಕಳೆದರೂ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿತು.

ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದಾಗಿ ಮುಖ್ಯ ಆಯುಕ್ತರು ಭರವಸೆ ನೀಡಿದ ಬಳಿಕ ಪ್ರಕರಣವನ್ನು ಡಿ.9ಕ್ಕೆ ಪೀಠ ಮುಂದೂಡಿತು. 'ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸಿರುವ ಬಗ್ಗೆ ಮುಂದಿನ ವಿಚಾರಣೆ ವೇಳೆಗೆ ವಿವರ ಸಲ್ಲಿಸಬೇಕು' ಎಂದು ಸೂಚಿಸಿತು.

ಅಗ್ನಿ–5 ಕ್ಷಿಪಣಿಯ ಪರೀಕ್ಷೆ ಯಶಸ್ವಿ

ಬಾಲಾಸೋರ್, ಒಡಿಶಾ (ಪಿಟಿಐ): ದೂರದ ಗುರಿಯನ್ನು ಧ್ವಂಸ ಗೊಳಿಸುವ ಸಾಮರ್ಥ್ಯವಿರುವ ಅಗ್ನಿ–5 ಖಂಡಾಂತರ ಕ್ಷಿಪಣಿಯನ್ನು ಒಡಿಶಾದ ಕಡಲ ತೀರದ ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪದಲ್ಲಿ ಬುಧವಾರ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.

ರಾತ್ರಿ ಸುಮಾರು 7.50ರ ಹೊತ್ತಿಗೆ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆ ನಡೆಸಲಾಯಿತು. ಮೂರು ಹಂತದ ಘನ ಇಂಧನ ಎಂಜಿನ್ ಹೊಂದಿರುವ ಕ್ಷಿಪಣಿಯು ಅಣ್ವಸ್ತ್ರ ಸಿಡಿತಲೆ ಹೊತ್ತು 5 ಸಾವಿರ ಕಿ.ಮೀ. ವ್ಯಾಪ್ತಿಯಲ್ಲಿರುವ ಗುರಿ ತಲುಪುವ ಸಾಮರ್ಥ್ಯವನ್ನು ಹೊಂದಿದೆ ಎಂದು ರಕ್ಷಣಾ ಸಚಿವಾಲಯದ ಹೇಳಿಕೆ ತಿಳಿಸಿದೆ.

'ನಿಖರವಾಗಿ ಗುರಿಮುಟ್ಟಬಲ್ಲ ಖಂಡಾಂತರ ಕ್ಷಿಪಣಿಗಳಿಗೆ ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಹೆಚ್ಚಿನ ಮಹತ್ವವಿದೆ' ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಅಗ್ನಿ 5 ಖಂಡಾಂತರ ಕ್ಷಿಪಣಿ ಯೋಜನೆಯನ್ನು ದಶಕದ ಹಿಂದೆಯೇ ಆರಂಭಿಸಲಾಗಿತ್ತು. ಪೂರ್ವ ಲಡಾಖ್‌ನಲ್ಲಿ ಚೀನಾದೊಂದಿಗಿನ ದೀರ್ಘ ಕಾಲದ ಗಡಿ ಬಿಕ್ಕಟ್ಟಿನ ನಡುವೆಯೇ ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ನಿರ್ಮಿಸಿದ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯ ಯಶಸ್ವಿಯಾಗಿ ನಡೆದಿದೆ.

ಅಗ್ನಿ –1ರಿಂದ 4 ಕ್ಷಿಪಣಿಗಳು 700 ಕಿ.ಮೀ. ನಿಂದ 3,500 ಕಿ.ಮೀ ವ್ಯಾಪ್ತಿಯಲ್ಲಿ ಸಾಗುವ ಸಾಮರ್ಥ್ಯ ಹೊಂದಿವೆ.

ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ 1.38 ಲಕ್ಷ ರೇಷ್ಮೆ ಬೆಳೆಗಾರರಿಗೆ ಗುರುತಿನ ಚೀಟಿ ವಿತರಿಸುವ ಕಾರ್ಯಕ್ರಮಕ್ಕೆ ಶುಕ್ರವಾರ ಬಳ್ಳಾರಿಯಲ್ಲಿ ಚಾಲನೆ ನೀಡಲಾಗುವುದು ಎಂದು ರೇಷ್ಮೆ ಸಚಿವ ಕೆ.ಸಿ. ನಾರಾಯಣ ಗೌಡ ತಿಳಿಸಿದರು.

ಬುಧವಾರ ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ಬಳಿಕ ಮಾತನಾಡಿದ ಅವರು, ಗುರುತಿನ ಚೀಟಿ ಹೊಂದಿರುವ ರೇಷ್ಮೆ ಬೆಳೆಗಾರರು ಮಾರುಕಟ್ಟೆಗೆ ಬಂದು ವಹಿವಾಟು ನಡೆಸಲು ಯಾರೂ ತೊಂದರೆ ಮಾಡುವಂತಿಲ್ಲ ಎಂದು ಹೇಳಿದರು.

ಉತ್ತರ ಕರ್ನಾಟಕ ಭಾಗದ 13 ಜಿಲ್ಲೆಗಳ ರೇಷ್ಮೆ ಬೆಳೆಗಾರರಿಗೆ ನೀಡುತ್ತಿರುವ ಸಾಗಾಣಿಕೆ ವೆಚ್ಚವನ್ನು ಇನ್ನೂ ಹತ್ತು ಜಿಲ್ಲೆಗಳ ಬೆಳೆಗಾರರಿಗೆ ನೀಡಲು ರೇಷ್ಮೆ ಇಲಾಖೆ ನಿರ್ಧರಿಸಿದೆ. ಈಗಾಗಲೇ 13 ಜಿಲ್ಲೆಗಳ ರೇಷ್ಮೆ ಬೆಳೆಗಾರರಿಗೆ ಪ್ರತಿ ಕೆ.ಜಿ.ಗೆ ₹ 10 ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ವಿಜಯಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ರೇಷ್ಮೆ ಬೆಳೆಗಾರರಿಗೂ ನೀಡಲಾಗುವುದು. ಇದರಿಂದ ಇಲಾಖೆಗೆ ₹ 50 ಕೋಟಿ ಹೊರೆ ಬೀಳಲಿದೆ' ಎಂದರು.

ಸಿಸಿಟಿವಿ ಕ್ಯಾಮೆರಾ ಅಳವಡಿಕೆ: ರಾಜ್ಯದ 41 ರೇಷ್ಮೆ ಮಾರುಕಟ್ಟೆಗಳ ಪೈಕಿ 28 ಮಾರುಕಟ್ಟೆಗಳಿಗೆ ಇನ್ನೂ ಸಿಸಿಟಿವಿ ಕ್ಯಾಮೆರಾ ಅಳವಡಿಸಿಲ್ಲ. ಈ ಎಲ್ಲ ಮಾರುಕಟ್ಟೆಗಳಿಗೂ ₹ 1.25 ಕೋಟಿ ವೆಚ್ಚದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ತೀರ್ಮಾನಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಜಿ.ಪಂ ಸಿಇಒ ಮೇಲೆ ಹಲ್ಲೆ ಯತ್ನ

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳ ಸಭೆ ನಡೆಸುತ್ತಿದ್ದ ಜಿಲ್ಲಾ ಪಂಚಾಯಿತಿ ಸಿಇಒ ಜಹೀರಾ ನಸೀಮ್ ಮೇಲೆ ಪಿಡಿಒ ಮಂಗಲಾ ಮಂಗಳವಾರ ಹಲ್ಲೆಗೆ ಯತ್ನಿಸಿದ್ದಾರೆ ಎಂದು ಪ್ರಕರಣ ದಾಖಲಾಗಿದೆ.

'ಮಂಗಳವಾರ ಸಂಜೆ 4ಕ್ಕೆ ಅಧಿಕಾರಿಗಳ ಸಭೆ ನಡೆಸುತ್ತಿದ್ದಾಗ ಪೊಲೀಸ್ ಕಾನ್‌ಸ್ಟೆಬಲ್‌ಗಳ ಕಣ್ಣು ತಪ್ಪಿಸಿ ಒಳಗೆ ಬಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಗಲಾ ಕಾಂಬಳೆ, ನನ್ನ ಮೇಲೆ ಹಠಾತ್ ಹಲ್ಲೆ ಮಾಡಲು ಯತ್ನಿಸಿದರು. ಈ ಸಂದರ್ಭದಲ್ಲಿ ನನ್ನ ಕೈಬೆರಳಿಗೆ ಸ್ವಲ್ಪ ಗಾಯವಾಗಿದೆ' ಎಂದು ಸಿಇಒ ಜಹೀರಾ ನಸೀಮ್ ಪೊಲೀಸರಿಗೆ ದೂರು ನೀಡಿದ್ದಾರೆ.

₹ 22 ಕೋಟಿ ವಂಚನೆ ಜಾಲ ಭೇದಿಸಿದ ರೈಲ್ವೆ ಭದ್ರತಾ ಪಡೆ

ನಕಲಿ ನೇಮಕಾತಿ ದಂಧೆ ಬಯಲು

ಪ್ರಜಾವಾಣಿ ವಾರ್ತೆ

ಮೈಸೂರು: ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 400 ಮಂದಿಯಿಂದ ಸುಮಾರು ₹ 22 ಕೋಟಿ ಪಡೆದು ವಂಚಿಸುತ್ತಿದ್ದ ಬೃಹತ್ ಜಾಲವೊಂದನ್ನು ಇಲ್ಲಿನ ರೈಲ್ವೆ ಭದ್ರತಾ ಪಡೆ ಭೇದಿಸಿದೆ.

ಮೈಸೂರಿನ ನಿವಾಸಿ ಚಂದ್ರಗೌಡ ಎಸ್.ಪಾಟೀಲ (44) ಹಾಗೂ ಗದಗ ನಿವಾಸಿ, ರೈಲ್ವೆ ಇಲಾಖೆ ನಿವೃತ್ತ ನೌಕರ ಶಿವಸ್ವಾಮಿ (62) ಬಂಧಿತರು. ಉದ್ಯೋಗಾಂಕ್ಷಿಗಳು ಸಹಿ ಮಾಡಿರುವ 221 ಖಾಲಿ ಚೆಕ್‌ಗಳು, ₹ 4.15 ಲಕ್ಷ ನಗದು, ಆಕಾಂಕ್ಷಿಗಳ ಮೂಲ ದಾಖಲೆಗಳು, ರೈಲ್ವೆ ಇಲಾಖೆಯ 100 ನಕಲಿ ನೇಮಕಾತಿ ಆದೇಶ ಪತ್ರಗಳನ್ನು ಇವರಿಂದ ವಶಪಡಿಸಿಕೊಂಡಿದ್ದಾರೆ.

ರೈಲ್ವೆ ಆಸ್ಪತ್ರೆ ಮುಂದೆ ಕೆಲವರನ್ನು ನಿಲ್ಲಿಸಿ ಆರೋಪಿಗಳು ಛಾಯಾಚಿತ್ರ ತೆಗೆಯುತ್ತಿದ್ದದ್ದನ್ನು ಗಮನಿಸಿದ ಆಸ್ಪತ್ರೆಯ ಮುಖ್ಯ ವೈದ್ಯಕೀಯ ಅಧೀಕ್ಷರು ರೈಲ್ವೆ ಭದ್ರತಾ ಪಡೆಗೆ ಮಾಹಿತಿ ನೀಡಿದರು. ಈ ಮಾಹಿತಿ ಜಾಡು ಹಿಡಿದ ಆರ್‌ಪಿಎಫ್ ಇನ್‌ಸ್ಪೆಕ್ಟರ್ ಸತೀಶ ಹಾಗೂ ನಿಶಾದ್ ನೇತೃತ್ವದ ತಂಡವು ಆರೋಪಿ ಚಂದ್ರೇಗೌಡ ವಾಸವಿದ್ದ ಹೈವೇ ವೃತ್ತ ಸಮೀಪದ ನಿವಾಸದ ಮೇಲೆ ದಾಳಿ ನಡೆಸಿತು.

'ಮೋಸ ಹೋದವರ ಪೈಕಿ ಜಮೀನು ಮಾರಾಟ ಮಾಡಿ, ಹೆಚ್ಚಿನ ಬಡ್ಡಿಗೆ ಕೈಸಾಲ ಪಡೆದು ಹಣ ನೀಡಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗದಗ, ಹಾವೇರಿ, ಹುಬ್ಬಳ್ಳಿ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಹಳ್ಳಿಗಳ ಬಡ ಮತ್ತು ಮಧ್ಯಮವರ್ಗದ ಜನರನ್ನೇ ಆರೋಪಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದ ಅಂಶ ಗೊತ್ತಾಗಿದೆ. 'ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ಪರಿಚಯವಿದ್ದು, ಅವರಿಗೆ ಹೇಳಿ ಕೆಲವೇ ತಿಂಗಳಲ್ಲಿ ಉದ್ಯೋಗ ಕೊಡಿಸುತ್ತೇವೆ' ಎಂಬುದಾಗಿ ನಂಬಿಸುತ್ತಿದ್ದರು. ವೈದ್ಯಕೀಯ ಪರೀಕ್ಷೆಗಾಗಿ ರೈಲ್ವೆ ಆಸ್ಪತ್ರೆಗೆ ಬರುವಂತೆ ಹೇಳುತ್ತಿದ್ದರು. ಛಾಯಾಚಿತ್ರ ತೆಗೆದು, ವೈದ್ಯಕೀಯ ಪರೀಕ್ಷೆಯಲ್ಲಿ ಪಾಸ್ ಮಾಡಿಸುವುದಾಗಿ ಹೇಳಿ ಹಣ ಪಡೆಯುತ್ತಿದ್ದರು. ವಯೋಮಿತಿ ಮೀರಿದ್ದರೂ ಉದ್ಯೋಗ ಕೊಡಿಸುವುದಾಗಿ ನಂಬಿಸಿ, ಅವರಿಂದಲೂ ಹಣ ಪಡೆದಿದ್ದರು' ಎಂದು ಕಾರ್ಯಾಚರಣೆಯಲ್ಲಿ ಭಾಗಿಯಾದ ಇನ್‌ಸ್ಪೆಕ್ಟರ್ ಒಬ್ಬರು ಮಾಹಿತಿ ನೀಡಿದರು.

ಇಲ್ಲಿನ ಮಂಡಿ ಠಾಣೆಯಲ್ಲಿ ರೈಲ್ವೆ ಭದ್ರತಾ ಪಡೆಯು ಪ್ರಕರಣ ದಾಖಲಿಸಿ, ಆರೋಪಿಗಳನ್ನು ವಶಕ್ಕೆ ಪಡೆದಿದೆ.

CONNECT

ಕ್ಲಾಸಿಫೈಡ್ಸ್

AT: 9TH CROSS ROAD, 2ND PHASE JP NAGAR
Special for Deepavali
Rajasthan
HANDLOOM - HANDICRAFTS & JEWELLERY
An Exclusive Exhibition cum Sale of Handloom, Handicrafts, Jewellery & Paintings
AT: NO 919, 9TH CROSS, NEXT TO RELIANCE DIGITAL, 2ND PHASE, J.P. NAGAR DIAGONAL OPP. SSMRV DENTAL COLLEGE BANGALORE
Time: 10.30am to 9.30pm
27th to Oct. to 5th Nov. 2021
Cont: 98412 78707
RAJASTHAN: Block Print, Dress Material, Suit, Top, Bed Sheets, Sanganeri Saree. KOLKATA: Kantha Work, Pashmina, Dhopian, Baluchary, Boutique, Silk Saree. CHHATTISGARH: TUSSAR, MATKA & SILK SAREE. ANDHRA PRADESH: Mangalgiri, Kalamkari, Mangalgiri Saree, Dress Material, Top, Cotton Soft Dress Material. UTTAR PRADESH: Banaras Zamdani, Bed Sheet & Cushion Cover, Silk Sareee, Dress Material. MADHYA PRADESH: Chanderi, Maheshwari Silk Saree, Bagh Print Cotton Work. BIHAR: Tussar Silk Saree, Dress Material & Khadi Silk. GUJARAT: Kachh Bandhini Dress Material, Cotton Work, Patola & Rajkot Silk Saree & much more products

ignou THE PEOPLE'S UNIVERSITY
INDIRA GANDHI NATIONAL OPEN UNIVERSITY
(A Central University, under MOE, Govt. of India)
NAAC Accreditated A++
IGNOU Regional Centre, #70-46-30/11,Ward No. 117, BMTC Old Divisional Office (South), Shanthinagar, Bangalore–560 027
080-29607272 / www.ignou.ac.in / www.ignourcblr.in
LAST & FINAL OPPORTUNITY DURING COVID-19 PANDEMIC FOR ADMISSIONS
IGNOU ADMISSION FOR TEACHERS, STUDENTS, CORPORATES & HOUSEWIVES
The Admission for July 2021 session commenced. Join Mega & World's largest Open University for Higher Education programmes @ Masters & Bachelors, except semester based programmes. Corporate, Working Professionals & Students can enrol to enhance their skills & knowledge. Great opportunity to Housewives, College dropouts & Regular Students for a blended learning during the present COVID-19 Pandemic. Visit www.ignou.ac.in for immediate online registration/admission- ignou.samarth.edu.in or download the form & submit the filled-in application along with relevant documents and fee in person or by post. For free Prospectus & for Last Date of online submission refer IGNOU website www.ignou.ac.in. Contact through e-mail: rcbangalore@ignou.ac.in/ Whatsapp to 9449337272 OR Regional Director, (G.H. Imrapur-9482351935) for further counselling, guidance & free online (internet) service.
Regional Director

ಬೆಂಗಳೂರು ಉತ್ಸವ
Bengaluru Utsava
Grand Flea Market
Karnataka Chitrakala Parishath
Kumara Krupa Road, Bengaluru
(Deepavali Shopping Carnival)
Date: 22nd Oct to 2nd Nov 2021
Timing: 11:00 AM - 7:00 PM
(Art, Craft, Handlooms & Lifestyle Exhibition)
Art & Craft | Handicraft | Clothing
Fashion Accessories | Home Decor & More
FOOD MUSIC
(12 Days Exhibition) 80+ Stalls
Entry Free..!
Your safety is our priority, we have taken precautions & safety measures to prevent the transmission of Covid19
Visit & Shop For 80+ Stalls | Live Performance | Much More..!
Kangilu Kunitha Live
Date: 30th Oct 2021 | Timing: 5 PM - 6:30 PM
Yakshagana Live
Date: 31st Oct 2021 | Timing: 5 PM - 6:30 PM
Home Decors | Handmade Paintings | Lampshades | Ceramic Pots | Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 9611835597 / 6364685716 Entry Free..!
80+ Shopping Stalls | Live Performance | Much More!

ಬೆಂಗಳೂರಿನ ಆರ್.ಆರ್. ನಗರದಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ದೀಪಾವಳಿ ಹಬ್ಬದ ಮಾರಾಟ
ಶ್ರೀ ವಾಸವಿ ಮಹಾಲ್ ಕಲ್ಯಾಣ ಮಂಟಪ
ಐಡಿಯಲ್ ಹೋಮ್ಸ್ ಟೌನ್‌ಶಿಪ್, ಶ್ರೀ ರಾಜರಾಜೇಶ್ವರಿ ನಗರ, ಬೆಂಗಳೂರು-560 098. ಮೊ. : 6385697571
ದಿನಾಂಕ: 28,29,30,31ನೇ ಅಕ್ಟೋಬರ್ & 1,2ನೇ ನವೆಂಬರ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ವಿ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ
ವಿಯಾಯಿತಿ ಸೀರೆಗಳು ಸಹ ಲಭ್ಯವಿದೆ

ಬೆಂಗಳೂರಿನ ಜಯನಗರದಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ದೀಪಾವಳಿ ಹಬ್ಬದ ಮಾರಾಟ
ಹೇಮಚಂದ್ರ ಸಾಗರ ಕಲ್ಯಾಣ ಮಂದಿರ್
ನಂ. 264, ಮರಿಯಪ್ಪ ರಸ್ತೆ, 2ನೇ ವಿಭಾಗ ಜಯನಗರ, ಅಶೋಕ ಪಿಲ್ಲರ್ ಹತ್ತಿರ ಬ

ಗುರುವಾರ, ಅಕ್ಟೋಬರ್ 28, 2021 | ಬೆಂಗಳೂರು | ₹ 6.00 | ಸಂಪುಟ 74| ಸಂಚಿಕೆ 299 | ಪುಟ 18

www.prajavani.net

/prajavani.net @prajavani / prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಮೊದಲೇ ಸಿದ್ಧತೆ ಮಾಡಿಕೊಳ್ಳುವ ಅವಶ್ಯಕತೆ ಇದೆ. ಪರೀಕ್ಷೆಗೆ ಭಾಷಾ ಮಾಧ್ಯಮ ಆಯ್ಕೆ ಹೇಗಿರಬೇಕು?



ಆಳ-ಅಗಲ
ಕೋವಿಡ್ ಪ್ರಕರಣಗಳ ಏರಿಳಿತದ ನಡುವೆ

ನೀರಜ್, ಲವ್ಲಿನಾಗೆ ಖೇಲ್‌ರತ್ನ: ಶಿಫಾರಸು 11

ರೈತರು, ವರ್ತಕರಿಗೆ ವಂಚನೆ: ₹2.68 ಕೋಟಿ ನಗದು ಜಪ್ತಿ 9

ಸೆನ್ಸೆಕ್ಸ್	ನಿಫ್ಟಿ	₹/$
61,143	18,210	75.03



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ

ಲಕ್ಷ ಕಂಠ ಗೀತ ಗಾಯನ

ಇಂದು ಬೆಳಿಗ್ಗೆ ೧೧.೦೦ ಗಂಟೆಗೆ ವಿಧಾನಸೌಧದ ಪ್ರಾಂಗಣದಲ್ಲಿ ಸನ್ಮಾನ್ಯ ವಿಧಾನಸಭಾಧ್ಯಕ್ಷರು, ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಭಾರತೀಯ ಆಡಳಿತ ಸೇವೆ, ಭಾರತೀಯ ಆರಕ್ಷಕ ಸೇವೆ, ಭಾರತೀಯ ಅರಣ್ಯ ಸೇವೆಯ ಅಧಿಕಾರಿಗಳು "ಕನ್ನಡ ಗೀತ ಗಾಯನ" ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಇನೇ ಕರ್ನಾಟಕ ರಾಜ್ಯೋತ್ಸವ ಅಭಿಯಾನ

ಕನ್ನಡಕ್ಕಾಗಿ ನಾವು

ಅಕ್ಟೋಬರ್ ೨೪ ರಿಂದ ೩೦, ೨೦೨೧ರ ವರೆಗೆ

ಮೈತಾಯಿ ಕನ್ನಡ

ಕನ್ನಡ ನಾಡು ನುಡಿಯ ಉತ್ಸವದಲ್ಲಿ ಭಾಗಿಗಳಾಗೋಣ.
ಕನ್ನಡದ ತೇರನ್ನು ಎಳೆಯುವ ಕಾಯಕ ಮಾಡೋಣ.

- ವಿವಿಧೆಡೆ ನಾಟಕ – ಸಂಗೀತ – ನೃತ್ಯ ಕಾರ್ಯಕ್ರಮಗಳು
- ಕನ್ನಡದ ಆಯ್ದ ಮೂರು ಗೀತೆಗಳ ಸಾಮೂಹಿಕ ಗಾಯನ
- ಕನ್ನಡದಲ್ಲೇ ಮಾತು, ಬರವಣಿಗೆ, ಸಹ ಮತ್ತು ಸಂದೇಶ
- ಕನ್ನಡದಲ್ಲಿ ಮಾತನಾಡುವ ಸ್ಪರ್ಧೆ
- ನಾಡಿನ ಗಡಿ ಭಾಗದಲ್ಲಿ ಕನ್ನಡ ಜಾಗೃತಿ ಕಾರ್ಯಕ್ರಮಗಳು
- ಅಕ್ಟೋಬರ್ ೨೯ ರಿಂದ ೩೧, ೨೦೨೧ರ ವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ತಿಂಡಿ/ತಿನಿಸು ಉಡುಪುಗಳ ಪ್ರದರ್ಶನ ಹಾಗೂ ಪುಸ್ತಕೋತ್ಸವ

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು "ಕನ್ನಡಕ್ಕಾಗಿ ನಾವು" ವಿಶೇಷ ಅಭಿಯಾನದ ಲಾಂಛನ ಅಡುಗಡೆ ಮಾಡಿದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಸಚಿವರಾದ ಶ್ರೀ ವಿ. ಸುನಿಲ್ ಕುಮಾರ್ ಉಪಸ್ಥಿತರಿದ್ದರು.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸರ್ಕಾರಿ ನೌಕರರಿಗೆ ಶೇ 3ರಷ್ಟು ತುಟ್ಟಿಭತ್ಯೆ ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ತುಟ್ಟಿಭತ್ಯೆಯನ್ನು ಇದೇ ಜುಲೈ 1ರಿಂದ ಪೂರ್ವಾನ್ವಯ ಆಗುವಂತೆ ಶೇ 3ರಷ್ಟು ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಈ ಹೆಚ್ಚಳದಿಂದ ಮೂಲವೇತನದ ಶೇ 21.50ರಷ್ಟಿದ್ದ ತುಟ್ಟಿಭತ್ಯೆ, ಶೇ 24.50ಕ್ಕೆ ಏರಿಕೆ ಆಗಿದೆ.

ಇದರಿಂದಾಗಿ ಆರು ಲಕ್ಷ ನೌಕರರು, 4.50 ಲಕ್ಷ ಪಿಂಚಣಿದಾರರು ಮತ್ತು ವಿವಿಧ ನಿಗಮ-ಮಂಡಳಿಗಳ 3 ಲಕ್ಷ ನೌಕರರಿಗೆ ಅನುಕೂಲ ಆಗಲಿದೆ. ಕೇಂದ್ರ ಸರ್ಕಾರ ಇತ್ತೀಚೆಗೆ ತನ್ನ ನೌಕರರ ತುಟ್ಟಿಭತ್ಯೆಯನ್ನು ಶೇ 3ರಷ್ಟು ಏರಿಕೆ ಮಾಡಿತ್ತು.

'ಕೇಂದ್ರ ಸರ್ಕಾರ ತನ್ನ ನೌಕರರಿಗೆ ನೀಡಿದ ತುಟ್ಟಿಭತ್ಯೆ ಸರಿಸಮಾನವಾಗಿ ರಾಜ್ಯ ಸರ್ಕಾರಿ ನೌಕರರಿಗೂ ತುಟ್ಟಿಭತ್ಯೆ ನೀಡುವಂತೆ ಸಲ್ಲಿಸಿದ ಮನವಿಗೆ ಕೇವಲ 24 ಗಂಟೆಯ ಒಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಂದಿಸಿದ್ದಾರೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದ್ದಾರೆ.

4ನೇ ಪುಟ ನೋಡಿ

ಸಮಿತಿ ರಚಿಸಿದ ಸುಪ್ರೀಂ ಕೋರ್ಟ್: ನಿವೃತ್ತ ನ್ಯಾಯಮೂರ್ತಿ ನೇತೃತ್ವ

ತಜ್ಞರಿಂದ ಪೆಗಾಸಸ್ ತನಿಖೆ

ನವದೆಹಲಿ (ಪಿಟಿಐ): ಇಸ್ರೇಲ್ ತಯಾರಿಸಿರುವ ಕುತಂತ್ರಾಂಶ ಪೆಗಾಸಸ್ ಬಳಸಿ ಭಾರತದ ರಾಜಕಾರಣಿಗಳು, ಪತ್ರಕರ್ತರು, ನ್ಯಾಯಾಂಗದ ಸದಸ್ಯರು, ಸಾಮಾಜಿಕ ಕಾರ್ಯಕರ್ತರು ಮತ್ತು ಇತರರ ಮೇಲೆ ಬೇಹುಗಾರಿಕೆ ನಡೆಸಿದ ಆರೋಪದ ಬಗ್ಗೆ ತನಿಖೆ ನಡೆಸಲು ಮೂವರು ಸೈಬರ್ ತಜ್ಞರ ಸಮಿತಿಯನ್ನು ಸುಪ್ರೀಂ ಕೋರ್ಟ್ ಬುಧವಾರ ನೇಮಿಸಿದೆ.

ಪ್ರಕರಣದ ತನಿಖೆಗೆ ಪರಿಣತರ ಸಮಿತಿ ರಚಿಸುವುದಾಗಿ ಕೇಂದ್ರವು ಮಂಡಿಸಿದ ಪ್ರಸ್ತಾವವನ್ನು ಕೋರ್ಟ್ ತಿರಸ್ಕರಿಸಿದೆ. 'ನ್ಯಾಯದಾನ ಆಗಬೇಕು ಮಾತ್ರವಲ್ಲ, ನ್ಯಾಯದಾನ ಆಗಿರುವುದು ಸ್ಪಷ್ಟವಾಗಿ ಕಾಣಿಸಬೇಕು' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ಹೇಳಿದೆ. ಕೇಂದ್ರ ಸರ್ಕಾರವೇ ಸಮಿತಿಯನ್ನು ರಚಿಸಲು ಅವಕಾಶ ಕೊಟ್ಟರೆ, ಪೂರ್ವಗ್ರಹದ ವಿರುದ್ಧ ಒಪ್ಪಿತವಾದ ನ್ಯಾಯಾಂಗೀಯ ತತ್ವದ ಉಲ್ಲಂಘನೆಯಾಗುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್ ಅವರ ಉಸ್ತುವಾರಿಯಲ್ಲಿ ಪರಿಣತರ ಸಮಿತಿಯು ತನಿಖೆ ನಡೆಸಲಿದೆ. ಸಮಿತಿಯು ಆದಷ್ಟು ಬೇಗ ವರದಿ ಕೊಡಬೇಕು ಎಂದು ಪೀಠವು ಸೂಚಿಸಿದೆ.

ಬೇಹುಗಾರಿಕೆಯ ಆರೋಪಗಳು ದೇಶದ ಜನರ ಮೂಲಭೂತ ಹಕ್ಕುಗಳ ಸಂಪೂರ್ಣ ಉಲ್ಲಂಘನೆಗೆ ಸಂಬಂಧಿಸಿದ್ದಾಗಿದೆ.

3B ಪುಟ ನೋಡಿ

ಇನ್ನಷ್ಟು ಸುದ್ದಿಗಳು 09

ಸಮಿತಿಯಲ್ಲಿ ಯಾರಿದ್ದಾರೆ?

- ತನಿಖೆಯ ಉಸ್ತುವಾರಿ: ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ವಿ. ರವೀಂದ್ರನ್
- **ತನಿಖೆಗೆ ನೆರವು:** ನಿವೃತ್ತ ಐಪಿಎಸ್ ಅಧಿಕಾರಿ ಅಲೋಕ್ ಜೋಶಿ, ಅಂತರರಾಷ್ಟ್ರೀಯ ಪ್ರಮಾಣೀಕರಣ ಸಂಸ್ಥೆ/ ಅಂತರರಾಷ್ಟ್ರೀಯ ಎಲೆಕ್ಟ್ರೊ-ಟೆಕ್ನಿಕಲ್ ಆಯೋಗದ ಉಪಸಮಿತಿ ಅಧ್ಯಕ್ಷ ಸಂದೀಪ್ ಒಬೆರಾಯ್

ಪರಿಣತರ ತಂಡದ ಸದಸ್ಯರು:

- ನವೀನ್ ಕುಮಾರ್ ಚೌಧರಿ, ಗಾಂಧಿನಗರದ ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯದ ಸೈಬರ್ ಭದ್ರತೆ ಮತ್ತು ಡಿಜಿಟಲ್ ವಿಧಿ ವಿಜ್ಞಾನ ವಿಭಾಗದ ಡೀನ್
- ಪ್ರಭಾಹರನ್ ಪಿ., ಪ್ರಾಧ್ಯಾಪಕ, ಅಮೃತ ವಿಶ್ವವಿದ್ಯಾಪೀಠಂ, ಕೇರಳ
- ಅಶ್ವಿನ್ ಅನಿಲ್ ಗುಮಸ್ತೆ, ಐಐಟಿ ಬಾಂಬೆಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ

ಏನೇನು ತನಿಖೆ?

ಭಾರತೀಯ ಪೌರರ ಮೊಬೈಲ್ ಅಥವಾ ಇತರ ವಿದ್ಯುನ್ಮಾನ ಉಪಕರಣಗಳ ಮೇಲೆ ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಲಾಗಿದೆಯೇ, ಮೊಬೈಲ್ ಮತ್ತು ಇತರ ಸಾಧನಗಳಲ್ಲಿ ಸಂಗ್ರಹಿಸಿದ್ದ ದತ್ತಾಂಶಗಳನ್ನು ಪಡೆದುಕೊಳ್ಳಲಾಗಿದೆಯೇ, ಸಂಭಾಷಣೆಗಳನ್ನು ಕದ್ದಾಲಿಸಲಾಗಿದೆಯೇ, ಇತರ ಯಾವುದೇ ರೀತಿಯಲ್ಲಿ ಯಾವುದೇ ಉದ್ದೇಶಕ್ಕಾಗಿ ಮಾಹಿತಿಯನ್ನು ಅಕ್ರಮವಾಗಿ ಪಡೆದುಕೊಳ್ಳಲಾಗಿದೆಯೇ ಎಂಬುದನ್ನು ಸಮಿತಿಯು ತನಿಖೆಗೆ ಒಳಪಡಿಸಬೇಕು.

3B ಪುಟ ನೋಡಿ

ಸಮೀರ್ ವಿರುದ್ಧ 2 ತನಿಖೆ

ಎನ್‌ಸಿಬಿ, ಮುಂಬೈ ಪೊಲೀಸರಿಂದ ಪ್ರತ್ಯೇಕ ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಂಬೈ: ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಿದ್ದ ಮಾದಕವಸ್ತು ನಿಯಂತ್ರಣ ಬ್ಯೂರೊ (ಎನ್‌ಸಿಬಿ) ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ವಿರುದ್ಧ ಈಗ ಎರಡು ತನಿಖೆಗಳು ಆರಂಭವಾಗಿವೆ.

ಬಾಲಿವುಡ್ ನಟ ಶಾರುಕ್ ಖಾನ್ ಪುತ್ರ, ಡ್ರಗ್ಸ್ ಪ್ರಕರಣದಲ್ಲಿ ಬಂಧಿತನಾಗಿರುವ ಆರ್ಯನ್ ಖಾನ್ ಅನ್ನು ಕೈಬಿಡಲು ಲಂಚ ಕೇಳಿದ ಆರೋಪ ಸಂಬಂಧ ಎನ್‌ಸಿಬಿ ಕೇಂದ್ರ ಕಚೇರಿಯ ಅಧಿಕಾರಿಗಳು ಮತ್ತು ಮುಂಬೈ ಪೊಲೀಸರು ಪ್ರತ್ಯೇಕ ತನಿಖೆ ಆರಂಭಿಸಿದ್ದಾರೆ.

ಈ ಪ್ರಕರಣದ ಮೊದಲ ಸಾಕ್ಷಿಯಾಗಿದ್ದ ಪ್ರಭಾಕರ್ ಸೈಲ್ ಅವರು, ಸಮೀರ್ ಲಂಚ ಕೇಳಿದ್ದಕ್ಕೆ ಸಂಬಂಧಿಸಿ ಬರೆದಿದ್ದ ಪತ್ರವನ್ನು ಎನ್‌ಸಿಬಿ ನೈರುತ್ಯ ವಲಯ ಕಚೇರಿಯು ಸೋಮವಾರವೇ ದೆಹಲಿ ಕೇಂದ್ರ ಕಚೇರಿಗೆ ರವಾನಿಸಿತ್ತು. ಆ ಪತ್ರದ ಆಧಾರದ ಮೇಲೆ ಎನ್‌ಸಿಬಿ ಸಮೀರ್ ವಿರುದ್ಧ ತನಿಖೆ ಆರಂಭಿಸಿತ್ತು.

ತನಿಖೆಯ ಭಾಗವಾಗಿ ಸಮೀರ್ ಮತ್ತು ಇನ್ನೂ ಇಬ್ಬರು ಅಧಿಕಾರಿಗಳನ್ನು ಎನ್‌ಸಿಬಿ ತನ್ನ ಕಚೇರಿಗೆ ಕರೆಸಿಕೊಂಡಿತ್ತು.

ಎನ್‌ಸಿಬಿಯ ಉಪ ಪ್ರಧಾನ ನಿರ್ದೇಶಕ ಧ್ಯಾನೇಶ್ವರ್ ಸಿಂಗ್ ಅವರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಈ ತಂಡವು ಎನ್‌ಸಿಬಿ ಮುಖ್ಯಸ್ಥ ಎಸ್.ಎನ್.ಪ್ರಧಾನ್ ಅವರಿಗೆ ವರದಿ ಮಾಡಿಕೊಳ್ಳಲಿದೆ.

9ನೇ ಪುಟ ನೋಡಿ

'ನಿಜವಾದ ಆರೋಪಿಗಳು ಹೊರಗೆ'

ಮಾದಕವಸ್ತು ದಂದೆಕೋರರು ಐಷಾರಾಮಿ ಹಡಗಿನಲ್ಲಿ ಪಾರ್ಟಿ ನಡೆಸಲು ಕೇಂದ್ರ ಸರ್ಕಾರದ ಹಡಗುಯಾನ ನಿರ್ದೇಶನಾಲಯದಿಂದ ಅನುಮತಿ ಪಡೆದುಕೊಂಡಿದ್ದರು. ಅವರು ಮುಂಬೈ ಸರ್ಕಾರ ಅಥವಾ ಮುಂಬೈ ಪೊಲೀಸರಿಂದ ಅನುಮತಿ ಪಡೆದಿಲ್ಲ ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ಆರೋಪಿಸಿದ್ದಾರೆ.

'ಮಾದಕವಸ್ತು ಪ್ರಕರಣವೊಂದರಲ್ಲಿ ಈ ಹಿಂದೆ ದೆಹಲಿಯ ತಿಹಾರ್ ಜೈಲಿನಲ್ಲಿ ಮತ್ತು ರಾಜಸ್ಥಾನದ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸಿದ್ದ ಅಂತರರಾಷ್ಟ್ರೀಯ ಮಾದಕವಸ್ತು ಜಾಲದ ವ್ಯಕ್ತಿಯೊಬ್ಬ, ಐಷಾರಾಮಿ ಹಡಗಿನಲ್ಲಿ ನಡೆಯುತ್ತಿದ್ದ ಪಾರ್ಟಿಯಲ್ಲಿ ಭಾಗಿಯಾಗಿದ್ದ. ಅದಕ್ಕೆ ಸಂಬಂಧಿಸಿದ ವಿಡಿಯೊಗಳು ಇವೆ. ಆದರೆ ಆ ವ್ಯಕ್ತಿಯನ್ನು ಬಿಟ್ಟು, ಬೇರೆಯವರನ್ನು ಬಂಧಿಸಲಾಗಿದೆ. ಇದೊಂದು ಸುಳ್ಳು ಪ್ರಕರಣ' ಎಂದು ಮಲಿಕ್ ಆರೋಪಿಸಿದ್ದಾರೆ.

'ಮತಾಂತರವಾಗಿಲ್ಲ': 'ಡಾ.ಶಬಾನಾ ಕುರೇಶಿ ಅವರನ್ನು ಮದುವೆಯಾಗುವಾಗ ಮುಸ್ಲಿಂ ಸಂಪ್ರದಾಯದಂತೆ 'ನಿಖಾನಾಮಾ'ಗೆ ಸಮೀರ್ ವಾಂಖೆಡೆ ಸಹಿ ಮಾಡಿದ್ದಾರೆ. ಆದರೆ ಅವರು ಇಸ್ಲಾಂಗೆ ಮತಾಂತರವಾಗಿರಲಿಲ್ಲ. ಅವರು ಹುಟ್ಟಾ ಹಿಂದೂ' ಎಂದು ಸಮೀರ್ ಅವರ ಎರಡನೇ ಪತ್ನಿ ಕ್ರಾಂತಿ ರೇಡ್ಕರ್ ಹೇಳಿದ್ದಾರೆ.

'ಬಿಟ್ ಕಾಯಿನ್: ಪ್ರಭಾವಿ ರಾಜಕಾರಣಿಗಳು ಶಾಮೀಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಪ್ರಭಾವಿ ರಾಜಕಾರಣಿಗಳು ಶಾಮೀಲಾಗಿರುವ ಡ್ರಗ್ಸ್ ಮತ್ತು ಬಿಟ್ ಕಾಯಿನ್ ಹಗರಣವನ್ನು ಮುಚ್ಚಿಹಾಕಲು ಯತ್ನಿಸಲಾಗುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಕುರಿತು ಬುಧವಾರ ಟ್ವೀಟ್ ಮಾಡಿರುವ ಅವರು, 'ಡ್ರಗ್ಸ್ ಹಾಗೂ ಬಿಟ್ ಕಾಯಿನ್ ಹಗರಣದಲ್ಲಿ ರಾಜ್ಯದ ಪ್ರಭಾವಿ ರಾಜಕಾರಣಿಗಳಿದ್ದಾರೆ ಎಂಬ ಮಾಹಿತಿ ಇದೆ. ಇದೇ ಕಾರಣಕ್ಕೆ ತನಿಖಾಧಿಕಾರಿಗಳು ಪ್ರಕರಣ ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆ ಎಂಬ ವರದಿ ಕಳವಳಕಾರಿಯಾದುದು' ಎಂದು ಹೇಳಿದ್ದಾರೆ.

'ಕೇಂದ್ರ ತನಿಖಾ ಸಂಸ್ಥೆಗಳ ಮೇಲೆ ಕೇಂದ್ರದ ಬಿಜೆಪಿ ಸರ್ಕಾರ ಪ್ರಭಾವ ಬೀರಿ ತನಿಖೆಯ ಹಾದಿ ತಪ್ಪಿಸಬಾರದು. ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು. ಆರೋಪಿಗಳು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಚರ್ಚೆಗೆ ಗ್ರಾಸವಾದ ಟ್ವೀಟ್: ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಮತ್ತು ಬಿಟ್ ಕಾಯಿನ್ ಹಗರಣದಲ್ಲಿ ಭಾಗಿಯಾಗಿರುವ ಡ್ರಗ್ಸ್ ಮತ್ತು ಬಿಟ್ ಕಾಯಿನ್ ಹಗರಣದಲ್ಲಿ ರಾಜ್ಯದ 'ಅಧಿಕಾರಸ್ಥ ಪ್ರಭಾವಿ' ಗಳ ನಂಟು ಪತ್ತೆಯಾಗಿದೆ ಎಂಬ ಸುದ್ದಿ ಕೆಲವು ದಿನಗಳಿಂದ ಸದ್ದು ಮಾಡುತ್ತಿದೆ. ಈ ಕುರಿತು ಸಿದ್ದರಾಮಯ್ಯ ಟ್ವೀಟ್ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಹ್ಯಾಕರ್ ಶ್ರೀಕೃಷ್ಣನನ್ನು ಸಿಸಿಬಿ ಪೊಲೀಸರು 2020ರಲ್ಲಿ ಬಂಧಿಸಿದ್ದರು. ಆತನಿಂದ ₹ 9 ಕೋಟಿ ಮೌಲ್ಯದ 31 ಬಿಟ್ ಕಾಯಿನ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ಪೊಲೀಸರು ಹೇಳಿದ್ದರು. ಶ್ರೀಕೃಷ್ಣ ರಾಜ್ಯದ ಇ-ಸಂಗ್ರಹಣಾ ವ್ಯವಸ್ಥೆಯ ಪೋರ್ಟಲ್ ಹ್ಯಾಕ್ ಮಾಡಿ ₹ 11 ಕೋಟಿ ಮೊತ್ತವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿದ್ದ. ಡಾರ್ಕ್ ವೆಬ್ ಮೂಲಕ ಮಾದಕವಸ್ತು ತರಿಸಿ, ಪೂರೈಕೆ ಮಾಡುತ್ತಿದ್ದ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ಬಂಧಿಸಲಾಗಿತ್ತು. ಬಳಿಕ ಹ್ಯಾಕಿಂಗ್ ಮತ್ತು ಬಿಟ್ ಕಾಯಿನ್ ಹಗರಣ ಪತ್ತೆಯಾಗಿತ್ತು.

ಆರೋಪಿಗಳು ವಿವಿಧ ರಾಜ್ಯಗಳ ಪೋರ್ಟಲ್‌ಗಳು ಮತ್ತು ಹಣಕಾಸು ವಹಿವಾಟಿಗೆ ಸಂಬಂಧಿಸಿದ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿರುವುದು ತನಿಖೆ ವೇಳೆ ಬಯಲಾಗಿತ್ತು.

ಇ.ಡಿಯಿಂದ ಶ್ರೀಕೃಷ್ಣ ವಿಚಾರಣೆ

ಹ್ಯಾಕರ್ ಶ್ರೀಕೃಷ್ಣನನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮೂರು ದಿನಗಳಿಂದ ವಿಚಾರಣೆ ನಡೆಸುತ್ತಿದ್ದಾರೆ.

'ಸಿಸಿಬಿ ಮತ್ತು ಸಿಐಡಿ ತನಿಖೆ ನಡೆಸುತ್ತಿರುವ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಆರೋಪಿಯನ್ನು ಇ.ಡಿ ಅಧಿಕಾರಿಗಳು ಅಜ್ಞಾತ ಸ್ಥಳವೊಂದರಲ್ಲಿ ನಿರಂತರ ವಿಚಾರಣೆ ನಡೆಸುತ್ತಿದ್ದಾರೆ. ಹ್ಯಾಕಿಂಗ್ ಹಗರಣದ ಸಮಗ್ರ ಮಾಹಿತಿ ಕಲೆಹಾಕುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಅ.30ರಿಂದ 14 ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಭಾಗ ಸೇರಿದಂತೆ 14 ಜಿಲ್ಲೆಗಳಲ್ಲಿ ಇದೇ 30 ಮತ್ತು 31ರಂದು ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

4

ಒಳ ಪುಟಗಳು 03

ವರ್ಷ ಕಳೆದರೂ ಒಬ್ಬರಿಗೂ ದಕ್ಕಿಲ್ಲ ಪರಿಹಾರ 3

ಶಕ್ತಿ ಪ್ರದರ್ಶಿಸಿದ ಬಿಜೆಪಿ-ಕಾಂಗ್ರೆಸ್ 8

'ಹೆಸರು, ಚಿಹ್ನೆ ಅಂತಿಮ ಗೊಳ್ಳುತ್ತಿದ್ದಂತೆ ಹೊಸ ರಾಜಕೀಯ ಪಕ್ಷ ಘೋಷಣೆ' 10

'ರಾಷ್ಟ್ರೀಯ ಭದ್ರತೆ ನೆಪ ಸದಾ ಸಮ್ಮತವಲ್ಲ' 9

Godrej expert

ಈ ದೀಪಾವಳಿಯಲ್ಲಿ ನಿಮ್ಮ ಕೂದಲಿಗೆ ಹೊಸ ಸ್ಟೈಲಿಶ್ ಲುಕ್ ಕೊಡಿ.

10X ಆಲೊವೇರ*ದಿಂದ ಪುಷ್ಟೀಕರಿಸಲಾದ ಗೋದ್ರೇಜ್ ಎಕ್ಸ್‌ಪರ್ಟ್ ರಿಚ್ ಕ್ರೀಮ್ ಬಿಳಿ ಕೂದಲನ್ನು ಕಲರ್ ಮಾಡುತ್ತದೆ ಮತ್ತು ನಿಮ್ಮ ಕೂದಲನ್ನು ಸಾಫ್ಟ್ ಹಾಗೂ ಶೈನೀ ಆಗಿ ಇಡುತ್ತದೆ.

*ಗೋದ್ರೇಜ್ ಎಕ್ಸ್‌ಪರ್ಟ್ ರಿಚ್ ಕ್ರೀಮ್ ಹೇರ್ ಕಲರ್‌ಗೆ ಹೋಲಿಸಿದಾಗ.
*ಆಫರ್ ಆಯ್ದ ರಾಜ್ಯಗಳಲ್ಲಿ ಸ್ಟಾಕ್ ಇರುವ ವರೆಗೆ ಮಾನ್ಯ. ಈ ಆಫರ್ ಇಲ್ಲದೆಯೂ ಈ ಪ್ರಾಡಕ್ಟ್ ಲಭ್ಯವಿದೆ.

Creativeland Asia

ಟೋಪಿ ಹಾಕಲು ಯ

‘ದಿನೇಶ್ ಗುಂಡೂರಾವ್‌ಗೆ ಕ್ಷೇತ್ರಕ್ಕಿಂತ ಕಾಂಗ್ರೆಸ್ ಉಸ್ತುವಾರಿಯೇ ಮುಖ್ಯ’

ಬೆಂಗಳೂರು: ‘ಗಾಂಧಿನಗರ ಕ್ಷೇತ್ರದಲ್ಲಿ ಗುಂಡಿಗಳಿಂದ ಕೂಡಿದ ರಸ್ತೆಗಳಲ್ಲಿ ಪರದಾಡುತ್ತಿರುವ ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲು ಕ್ಷೇತ್ರದ ಶಾಸಕ ದಿನೇಶ್ ಗುಂಡೂರಾವ್ ಕಾಣೆಯಾಗಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಟೀಕಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದಿನೇಶ್ ಗುಂಡೂರಾವ್ ಅವರು ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳನ್ನು ಸಂಪೂರ್ಣ ಕಡೆಗಣಿಸಿ, ಹೊರ ರಾಜ್ಯಗಳಲ್ಲೇ ವಾಸ್ತವ್ಯ ಹೂಡುತ್ತಿದ್ದಾರೆ. ಅವರಿಗೆ ಶಾಸಕ ಸ್ಥಾನಕ್ಕಿಂತ ಗೋವಾ ಮತ್ತು ತಮಿಳುನಾಡಿನ ಕಾಂಗ್ರೆಸ್ ಉಸ್ತುವಾರಿಯೇ ಮುಖ್ಯವಾಗಿದೆ. ಆದರೆ, ಅವರಿಗೆ ಮತ ನೀಡಿದ ಕ್ಷೇತ್ರದ ಜನ ತೊಂದರೆಗಳಲ್ಲಿ ಸಿಲುಕಿದ್ದಾರೆ’ ಎಂದರು.

‘ನೆರೆ ರಾಜ್ಯಗಳಿಗೆ ಪಲಾಯನ ಮಾಡಿರುವ ಅವರು ಇನ್ನಾದರೂ ವಾಪಸ್ ಬಂದು ಜನರ ಸಮಸ್ಯೆಗಳಿಗೆ ಸ್ಪಂದಿಸಲಿ. ಸಾಧ್ಯವಾಗದಿದ್ದರೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿ’ ಎಂದು ಒತ್ತಾಯಿಸಿದರು.

ಗಾಂಧಿನಗರ ಘಟಕದ ಎಎಪಿ ಅಧ್ಯಕ್ಷ ರಾಜಶೇಖರ್ ದೊಡ್ಡಣ್ಣ, ‘ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಆಟಾಟೋಪ ಮೀತಿಮೀರಿದ್ದು, ಇಲ್ಲಿನ ಸಮಸ್ಯೆ ಪ್ರಶ್ನಿಸುವ ಪಕ್ಷದ ಮುಖಂಡರಿಗೆ ಧಮ್ಕಿ ಹಾಕುತ್ತಿದ್ದಾರೆ’ ಎಂದು ಆರೋಪಿಸಿದರು.

‘ರಸ್ತೆ ಗುಂಡಿಗಳಿಗೆ ಕಾರಣರಾದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಪ್ರಕರಣ ದಾಖಲಿಸಲು 57 ಅನುಭವಿ ವಕೀಲರ ತಂಡ ರಚಿಸಲಾಗಿದೆ. ಕರ್ತವ್ಯದಲ್ಲಿ ಲೋಪ ಹಾಗೂ ಅಕ್ರಮದಲ್ಲಿ ಭಾಗಿಯಾದವರಿಗೆ ಕಾನೂನು ಮೂಲಕವೇ ಉತ್ತರ ನೀಡಲಿದ್ದೇವೆ’ ಎಂದು ಪಕ್ಷದ ವಕೀಲರ ಘಟಕದ ಅಧ್ಯಕ್ಷ ಮಂಜುನಾಥ ಸ್ವಾಮಿ ಹೇಳಿದರು.

ಸಾಂಸ್ಕೃತಿಕ ವಲಯದಲ್ಲಿ ಆಡಳಿತಾಧಿಕಾರಿ ನಡೆಗೆ ವಿರೋಧ • ₹1 ಕೋಟಿ ವೆಚ್ಚದ ಯೋಜನೆ

ಕಸಾಪ: ಕಟ್ಟಡ ನವೀಕರಣ ಚರ್ಚೆಗೆ ಗ್ರಾಸ

• ವರುಣ ಹೆಗಡೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಕಸಾಪ) ಚುನಾವಣೆ ಪ್ರಕ್ರಿಯೆಗಳು ನಡೆಯುತ್ತಿರುವ ಹೊತ್ತಿನಲ್ಲೇ ಆಡಳಿತಾಧಿಕಾರಿ ಕೈಗೆತ್ತಿಕೊಂಡಿರುವ ₹ 1 ಕೋಟಿ ವೆಚ್ಚದ ಕಟ್ಟಡ ನವೀಕರಣ ಯೋಜನೆಯು ಚರ್ಚೆಗೆ ಗ್ರಾಸವಾಗಿದೆ.

ಕಳೆದ ಸೆ.2ರಂದು ಮನು ಬಳಿಗಾರ್ ನೇತೃತ್ವದ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿ ಅಂತ್ಯವಾಗಿತ್ತು. ಸೆ.3ರಿಂದ ಅನ್ವಯವಾಗುವಂತೆ ಆಡಳಿತಾಧಿಕಾರಿಯನ್ನಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್. ರಂಗಪ್ಪ ಅವರನ್ನು ನೇಮಕಮಾಡಿ, ಸರ್ಕಾರ ಆದೇಶ ಹೊರಡಿಸಿತ್ತು.

ಕೋವಿಡ್‌ನಿಂದ ಮುಂದೂಡಲ್ಪಟ್ಟಿದ್ದ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಗಳಿಗೆ ನ. 21ರಂದು ಚುನಾವಣೆ ನಡೆಯಲಿದೆ. ನೂತನ ಕಾರ್ಯಕಾರಿ ಸಮಿತಿ ಅಸ್ತಿತ್ವಕ್ಕೆ ಬರುವವರೆಗೂ ಆಡಳಿತಾಧಿಕಾರಿಯೇ ಪರಿಷತ್ತಿನ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳಲಿದ್ದಾರೆ. ಈ ನಡುವೆ, ಅವರು ಕಟ್ಟಡಗಳ ನವೀಕರಣ, ಸದಸ್ಯತ್ವ ಅಭಿಯಾನ, ದಾಸ್ತಾನಿನಲ್ಲಿ ಇರುವ ಕೆಲವು ಪುಸ್ತಕಗಳ ವಿಲೇವಾರಿಯಂತಹ ನಿರ್ಣಯಗಳನ್ನು ಕೈಗೊಂಡಿದ್ದಾರೆ.

ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ ಪರಿಷತ್ತಿನ ಸಭಾಂಗಣಗಳು ಹಾಗೂ ಅಧ್ಯಕ್ಷರ ಕಚೇರಿಯನ್ನು ನವೀಕರಣ ಮಾಡಲಾಗುತ್ತಿದೆ. ಸಿಎಸ್‌ಆರ್ ನಿಧಿ ಅಡಿಯಲ್ಲಿ ಆರ್ಥಿಕ ನೆರವು ನೀಡಲು ಕೆನರಾ ಬ್ಯಾಂಕ್ ಮುಂದೆ ಬಂದಿದೆ. ಅದರಂತೆ ಈಗಾಗಲೇ ಅಧ್ಯಕ್ಷರ ಕಚೇರಿಯ ನವೀಕರಣ ಕಾರ್ಯ ಪ್ರಗತಿಯಲ್ಲಿದೆ.

‘ನೂತನ ಕಾರ್ಯಕಾರಿ ಸಮಿತಿ ಅಧಿಕಾರ ವಹಿಸಿಕೊಳ್ಳುವವರೆಗೆ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳಬೇಕಾದ ಆಡಳಿತಾಧಿಕಾರಿ, ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದು ಸರಿಯಲ್ಲ. ಪರಿಷತ್ತಿನ ಸಭಾಂಗಣ ಸೇರಿದಂತೆ ಕಟ್ಟಡವನ್ನು ನವೀಕರಣ ಮಾಡುತ್ತಿರುವುದು ಸ್ವಾಗತಾರ್ಹ. ಆದರೆ, ಚುನಾವಣೆ ಪ್ರಕ್ರಿಯೆ ನಡೆಯುತ್ತಿರುವ ಈ ಅವಧಿಯಲ್ಲಿ ಆತುರವಾಗಿ ಏಕೆ ನವೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಿತ್ತು? ಆಡಳಿತಾಧಿಕಾರಿಯಾದವರು ತಮ್ಮ ವ್ಯಾಪ್ತಿ ಮೀರಿ ಕಾರ್ಯನಿರ್ವಹಿಸಬಾರದು’ ಎಂಬ ಆಕ್ಷೇಪ ಸಾಂಸ್ಕೃತಿಕ ವಲಯದಲ್ಲಿ ಕೇಳಿ ಬಂದಿದೆ.

ಪ್ರಜಾವಾಣಿ ವಿಶೇಷ

ಏನಿದು ನವೀಕರಣ ಯೋಜನೆ?

ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರವು ನಗರದ ಅತ್ಯಂತ ಹಳೆಯ ಸಭಾಂಗಣಗಳಲ್ಲಿ ಒಂದಾಗಿದೆ. ಹತ್ತು ವರ್ಷಗಳ ಹಿಂದೆ ಪ್ಲೈವುಡ್‌ನಿಂದ ಸಭಾಂಗಣದ ಗೋಡೆಗಳನ್ನು ಅಂದಗೊಳಿಸಲಾಗಿತ್ತು. ಆದರೆ, ಈಗ ಸಭಾಂಗಣದ ಪ್ಲೈವುಡ್‌ಗಳು ಹಾಳಾಗಿದ್ದು, ಕೆಲವೆಡೆ ಕಿತ್ತು ಹೋಗಿವೆ. ಹಾಗಾಗಿ, ನವೀಕರಣಗೊಳಿಸಿ, ಸ್ಥಿರ ಆಸನಗಳ ಅಳವಡಿಕೆಗೆ ಯೋಜನೆ ರೂಪಿಸಲಾಗಿದೆ. ಅಕ್ಕಮಹಾದೇವಿ ಸಭಾಂಗಣದಲ್ಲಿ ಧ್ವನಿ ವ್ಯವಸ್ಥೆಯ ಸಮಸ್ಯೆ ನಿವಾರಣೆ ಹಾಗೂ ಸ್ಥಿರ ಆಸನಗಳ ಅಳವಡಿಕೆಯೂ ಯೋಜನೆಯಲ್ಲಿ ಸೇರಿದೆ. ಅಧ್ಯಕ್ಷರ ಕಚೇರಿಯನ್ನೂ ನವೀಕರಣ ಮಾಡಲಾಗುತ್ತಿದೆ.

‘ಪರಿಷತ್ತಿನ ಹಣ ಬಳಕೆ ಆಗಿಲ್ಲ’

‘ಪರಿಷತ್ತಿನ ಹಣದಲ್ಲಿ ಸಭಾಂಗಣ ಹಾಗೂ ಕಟ್ಟಡವನ್ನು ನವೀಕರಣ ಮಾಡುತ್ತಿಲ್ಲ. ಸಿಎಸ್‌ಆರ್ ನಿಧಿಯಡಿ ಈ ಕಾರ್ಯವನ್ನು ಮಾಡುತ್ತಿದ್ದೇವೆ. ಹೊಸದಾಗಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು ಎಂದು ಬೈಲಾದಲ್ಲಿ ಪ್ರಸ್ತಾಪವಿಲ್ಲ. ಈ ನವೀಕರಣ ಕಾರ್ಯವು ಹಿಂದೆಯೇ ಆಗಬೇಕಾಗಿತ್ತು. ಇನ್ನಷ್ಟು ದಿನ ಬಿಟ್ಟರೆ ಕಟ್ಟಡವು ಸಂಪೂರ್ಣ ಹಾಳಾಗಲಿದೆ’ ಎಂದು ಆಡಳಿತಾಧಿಕಾರಿ ಎಸ್. ರಂಗಪ್ಪ ತಿಳಿಸಿದರು.

ಆಡಳಿತಾಧಿಕಾರಿ ಆದವರು ದೈನಂದಿನ ಕಾರ್ಯಕ್ರಮಗಳನ್ನು ನಡೆಸಬಹುದು. ಹಣಕಾಸಿನ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು.
ನಲ್ಲೂರು ಪ್ರಸಾದ್, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ

ಆಡಳಿತಾಧಿಕಾರಿ ಆದವರು ಹಣಕಾಸಿಗೆ ಸಂಬಂಧಿಸಿದ ಯೋಜನೆಗಳನ್ನು ಕೈಗೆತ್ತಿಕೊಳ್ಳಬಾರದು ಎಂಬ ಉಲ್ಲೇಖವಿಲ್ಲ
ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ

ಬೈಲಾದಲ್ಲಿ ಪ್ರಸ್ತಾಪವಿಲ್ಲ: ಪರಿಷತ್ತಿನ ಬೈಲಾದಲ್ಲಿ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯ ಅಧಿಕಾರದ ವ್ಯಾಪ್ತಿ, ಕಾರ್ಯವಿಧಾನದ ಬಗ್ಗೆ ತಿಳಿಸಲಾಗಿದೆ. ಆಡಳಿತಾಧಿಕಾರಿ ಹಾಗೂ ಅವರ ಕಾರ್ಯವೈಖರಿಯ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಆದರೆ, ಪರಿಷತ್ತಿನ ಇತಿಹಾಸದಲ್ಲಿ ಆಡಳಿತಾಧಿಕಾರಿಯ ಅವಧಿಯಲ್ಲಿ ಇಷ್ಟು ದೊಡ್ಡ ಯೋಜನೆಯನ್ನು ಕೈಗೆತ್ತಿಕೊಂಡ ಉದಾಹರಣೆ ಇಲ್ಲ.

‘ಭವನ ನಿರ್ಮಾಣ, ಕಟ್ಟಡಗಳ ನವೀಕರಣ ಸೇರಿದಂತೆ ಹಣಕಾಸಿಗೆ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರಲಿದೆ. ಪರಿಷತ್ತು ಸ್ವಾಯತ್ತ ಸಂಸ್ಥೆ ಆಗಿರುವುದರಿಂದ ಆಡಳಿತವೆಲ್ಲ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿಯೇ ನಡೆಯಬೇಕು. ಆಡಳಿತಾಧಿಕಾರಿ ಆದವರು ತಮ್ಮ ವ್ಯಾಪ್ತಿ ಮೀರಿ ಕಾರ್ಯನಿರ್ವಹಿಸಬಾರದು’ ಎಂದು ಇಲ್ಲಿನ ಕನ್ನಡ ಪರ ಹೋರಾಟಗಾರರೊಬ್ಬರು ಪ್ರಶ್ನಿಸಿದರು.

ಶ್ರೀ ರಾಮ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ. 146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003
ಕೇಂದ್ರ ಕಛೇರಿ : 23364609, 23464713, ಶಾಖೆ : 23481556

ವಾರ್ಷಿಕ ಮಹಾಸಭೆಯ ನೋಟೀಸ್

ಬ್ಯಾಂಕಿನ 2020–2021ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕರ್ನಾಟಕ ಸರ್ಕಾರದ ಆದೇಶದನ್ವಯ ವರ್ಚುವಲ್/ ವಿಡಿಯೋ ಕಾನ್ಫರೆನ್ಸ್ ಮೂಲಕ ದಿನಾಂಕ : 14–11–2021ರ ಭಾನುವಾರ ಬೆಳಿಗ್ಗೆ 10–00 ಘಂಟೆಗೆ ಬ್ಯಾಂಕಿನ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ರೆಗ್ಯೂಲರ್ ಸದಸ್ಯರು ವರ್ಚುವಲ್/ ವಿಡಿಯೋ ಕಾನ್ಫರೆನ್ಸ್ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಸದರಿ ಮಹಾಸಭೆಗೆ ಖುದ್ದಾಗಿ ಹಾಜರಾಗಲು ಅವಕಾಶವಿರುವುದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ವರ್ಚುವಲ್/ ವಿಡಿಯೋ ಕಾನ್ಫರೆನ್ಸ್ ಮೀಟಿಂಗ್‌ಗೆ ಈಗಾಗಲೇ ಅಂಚೆಯ ಮೂಲಕ ಕಳುಹಿಸಿರುವ link (ಲಿಂಕ್) ಮೂಲಕ ಹಾಜರಾಗಲು ಈ ಮೂಲಕ ಕೋರಲಾಗಿದೆ. ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿಗೆ ನೀಡಲು ಕೋರಲಾಗಿದೆ.

ಕರ್ನಾಟಕ ಸ್ಟೇಟ್ ಬೋರ್ಡ್‌ನ SSLC/II PUC ಪರೀಕ್ಷೆಯಲ್ಲಿ ಶೇ. 85ಕ್ಕೂ ಹೆಚ್ಚು ಹಾಗೂ CBSE / ICSE ಯಲ್ಲಿ SSLC/II PUC ಪರೀಕ್ಷೆಯಲ್ಲಿ ಶೇ. 80ಕ್ಕೂ ಹೆಚ್ಚು ಅಂಕ ಗಳಿಸಿರುವ ಸದಸ್ಯರ/ಸಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಅರ್ಜಿಯನ್ನು ಬ್ಯಾಂಕಿನಲ್ಲಿ ವಿತರಿಸಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಅಂತಿಮ ದಿನಾಂಕ : 15–12–2021ರ ಸಂಜೆ 6–00 ಘಂಟೆ ಆಗಿರುತ್ತದೆ.

ಸ್ಥಳ : ಬೆಂಗಳೂರು ದಿ: 28–10–2021
ಎಸ್.ಕೆ. ಕರಿಯಪ್ಪಗೌಡ ಅಧ್ಯಕ್ಷರು
ಟಿ.ಎಸ್. ಗಂಗನರಸಿಂಹಯ್ಯ ಉಪಾಧ್ಯಕ್ಷರು
ಜಿ. ಶ್ರೀನಿವಾಸ್ ಪ್ರಧಾನ ವ್ಯವಸ್ಥಾಪಕರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಚಿಕ್ಕಬಳ್ಳಾಪುರ–562 101 ದೂರವಾಣಿ ಸಂಖ್ಯೆ ಕಛೇರಿ: 08156–270427,
ಫ್ಯಾಕ್ಸ್: 08156–270427 ಇ–ಮೇಲ್: eemidcbpura@gmail.com
ಸಂಖ್ಯೆ:ಕಾಸಬ/ತಾಂಸ/ಸ.ಇಂ–2/ಮರು ಟೆಂಡರ್/1642/2021–22
ದಿನಾಂಕ: 21.10.2021

ಮರು ಟೆಂಡರ್

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 6/2021–22 ದಿನಾಂಕ: 31.07.2021 ರಲ್ಲಿ ಆಹ್ವಾನಿಸಲಾಗಿದ್ದ ಇ–ಟೆಂಡರನಲ್ಲಿ ಯಾವೊಬ್ಬ ಗುತ್ತಿಗೆದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಲಾಗಿದ್ದು, ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಡಿಯಲ್ಲಿ (ಅಂತರ್ಜಾಲದಲ್ಲಿ) ಬಿಡ್ಡ್‌ನ್ನು ಅಪ್‌ಲೋಡ್ ಮಾಡುವ **ದಿನಾಂಕ:30.11.2021 ರಂದು ಸಂಜೆ 4.00 ಗಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ:02.12.2021** ಆಗಿರುತ್ತದೆ. ಇ.ಎಂ.ಡಿ. ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ. ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂ೫/ಚಿಕ್ಕಬಳ್ಳಾಪುರ/ಆರ್.ಓ.ಸಂ೨೧೯/ಎಂ.ಸಿ.ಎ/2021–22

ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
CIN : U85110KA1970SGC001919
ಸಂ: ಕೆಪಿಸಿಎಲ್/2021–22/ಆಕ್ಷನ್–190&191 ದಿನಾಂಕ: 26.10.2021

ಇ–ಹರಾಜಿನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕೋರಮಂಗಲದ ರಾಷ್ಟ್ರೀಯ ಕ್ರೀಡಾ ಸಂಕೀರ್ಣದ (National Games Village), ಕಾವೇರಿ ಬ್ಲಾಕ್‌ನ 2ನೇ ಮಹಡಿಯಲ್ಲಿರುವ 3 ಬೆಡ್‌ರೂಂಗಳ (Approximate Super built up Area of each flat: 133.33 Square Metre) ಫ್ಲಾಟ್ ಸಂಖ್ಯೆ 203 ಹಾಗೂ 204ಗಳನ್ನು "AS IS WHERE IS BASIS" ಮೇಲೆ ಇ–ಹರಾಜು ಪ್ರಕ್ರಿಯೆಯನ್ನು ಪ್ರತ್ಯೇಕವಾಗಿ ಆಹ್ವಾನಿಸಿದೆ. ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ಭಾಗವಹಿಸಬಹುದಾಗಿದೆ.

ಇ.ಎಂ.ಡಿ. ಮೊತ್ತ: **ರೂ.8,50,000/– (ರೂ. ಎಂಟು ಲಕ್ಷ ಐವತ್ತು ಸಾವಿರ ಮಾತ್ರ)** ಪ್ರತಿ ಫ್ಲಾಟ್‌ಗೆ ಭಾಗವಹಿಸುವಿಕೆಯ ಆಸಕ್ತಿಯನ್ನು ವ್ಯಕ್ತಪಡಿಸುವ ಕೊನೆಯ ದಿನಾಂಕ: **11.11.2021ರ ಸಂಜೆ 4.00 ಗಂಟೆಯವರೆಗೆ.** ಇ–ಹರಾಜು ಪ್ರಕ್ರಿಯೆಯ ಲೈವ್ ಬಿಡ್ಡಿಂಗ್ (Live Bidding) ದಿನಾಂಕ: **18.11.2021ರ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ.** ಇತರೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾವಣಿ ಮಾಡದೇ ಇರುವ ಆಸಕ್ತಿಯುಳ್ಳ ಬಿಡ್‌ದಾರರು ನೊಂದಾವಣಿ ಮಾಡಿಕೊಂಡು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, ಕೆಲಸದ ವೇಳೆಯಲ್ಲಿ ಅಧೀಕ್ಷಕ ಅಭಿಯಂತರರು (ಕಾ) ಆರ್‌ಓ, ನಂ. 82, ಶಕ್ತಿಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001, ಮೊಬೈಲ್ ಸಂಖ್ಯೆ 9449784846 ಇವರಿಂದ ಪಡೆಯಬಹುದು.

ನಗರಸಭಾ ಕಾರ್ಯಾಲಯ ಹೊಸಕೋಟೆ
ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ದೂ.: 080–27931221, ಸಹಾಯವಾಣಿ: 080–27931759,
Web : www.hosakotecity.mrc.gov.in, Email : itstaff_ulb_hosakote@yahoo.com
ಸ್ವಚ್ಛ ಭಾರತ ಸ್ವಚ್ಛ ಹೊಸಕೋಟೆ

ನಂ.ನಸಹೊ/ತಾಂತ್ರಿಕ/ಸಿಆರ್/ಟೆಂಡರ್/14/2021–22 ದಿನಾಂಕ: 26.10.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 2019–20ನೇ ಸಾಲಿನ ಎಸ್.ಎಫ್.ಸಿ ವಿಶೇಷ ನಿಧಿಯಡಿ ಉಳಿತಾಯವಾಗಿರುವ ಮೊತ್ತ, 2020–21ನೇ ಸಾಲಿನ 15ನೇ ಹಣಕಾಸು ಯೋಜನೆಯ ಮುಕ್ತ ನಿಧಿ ಅನುದಾನದಡಿ ಉಳಿತಾಯವಾಗಿರುವ ಮೊತ್ತ ಮತ್ತು 2021–22ನೇ ಸಾಲಿನ ನಗರಸಭಾ ನಿಧಿಯಡಿ, 2013–14, 2014–15, 2019–20ನೇ ಸಾಲಿನ 14ನೇ ಹಣಕಾಸು ಹಾಗೂ 2020–21, 2021–22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಉಳಿತ

ಹದಗೆಟ್ಟ ರಸ್ತೆಯಿಂದಾಗಿ ಸಂಭವಿಸುವ ಅಪಘಾತ • ಸಂತ್ರಸ್ತರಿಗೆ ಬಿಬಿಎಂಪಿಯಿಂದ ನೀಡುವ ಆರ್ಥಿಕ ನೆರವು

ವರ್ಷ ಕಳೆದರೂ ಒಬ್ಬರಿಗೂ ದಕ್ಕಿಲ್ಲ ಪರಿಹಾರ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಹದಗೆಟ್ಟ ಕಾರಣದಿಂದ ಅಪಘಾತ ಸಂಭವಿಸಿದರೆ ಸಂತ್ರಸ್ತರು ಅರ್ಜಿ ಸಲ್ಲಿಸಬಹುದು. ಅರ್ಹರಿಗೆ ಸೂಕ್ತ ಪರಿಹಾರ ನೀಡುತ್ತೇವೆ
ಎಸ್.ಬಸವರಾಜು, ವಿಶೇಷ ಆಯುಕ್ತ (ಕಂದಾಯ), ಬಿಬಿಎಂಪಿ

ಆದೇಶವಾದ 15 ದಿನದೊಳಗೆ ನೀಡಬೇಕು ಪರಿಹಾರ

ಅರ್ಜಿ ಹಾಗೂ ಸಲ್ಲಿಸಿದ ದಾಖಲೆಗಳು ಸಮಂಜಸವಾಗಿವೆ ಎಂದು ಮೇಲ್ನೋಟಕ್ಕೆ ಕಂಡುಬಂದರೆ ವಿಶೇಷ ಆಯುಕ್ತರು ಅರ್ಜಿ ಸಲ್ಲಿಕೆಯಾದ ವಾರದೊಳಗೆ ಲಿಖಿತವಾಗಿ ಈ ಬಗ್ಗೆ ಉಲ್ಲೇಖಿಸಬೇಕು. ಅರ್ಜಿಯು ಸಮಂಜಸವಾಗಿದ್ದರೆ, ಅದು ಸಲ್ಲಿಕೆಯಾದ 14 ದಿನಗಳ ಒಳಗೆ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕು. ಪರಿಹಾರ ವಿತರಣೆಗೆ ಆದೇಶವಾದ15 ದಿನದೊಳಗೆ ಮೊತ್ತವನ್ನು ಸಂಬಂಧಪಟ್ಟವರಿಗೆ ತಲುಪಿಸ ಬೇಕು.ಅರ್ಜಿ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಕಂಡು ಬಂದರೆ ವಿಶೇಷ ಆಯುಕ್ತರು (ಕಂದಾಯ) ಅದನ್ನು ಘಟನೆ ನಡೆದ ಸ್ಥಳದ ಸಂಬಂಧಪಟ್ಟ ಅಧಿಕಾರಿಗೆ ವರ್ಗಾಯಿಸಬಹುದು.

30ಗಳಲ್ಲಿ ಅರ್ಜಿ ಸಲ್ಲಿಸಿ

ಪರಿಹಾರ ಕೋರುವವರು ಅಪಘಾತ ಸಂಭವಿಸಿದ ಒಂದು ತಿಂಗಳ ಒಳಗೆ ಬಿಬಿಎಂಪಿಯ ವಿಶೇಷ ಆಯುಕ್ತರಿಗೆ (ಕಂದಾಯ) ಅರ್ಜಿ ಸಲ್ಲಿಸಬೇಕು. ರಸ್ತೆ ಅಪಘಾತಕ್ಕೆ ಕಾರಣವಾದ ಅಂಶಗಳನ್ನು ಉಲ್ಲೇಖಿಸಿ ಪ್ರಮಾಣಪತ್ರವನ್ನು ಹಾಗೂ ಪೂರಕ ದಾಖಲೆಗಳನ್ನು ಒದಗಿಸಬೇಕು.

ಸಕಾರಣಗಳಿದ್ದರೆ ಒಂದು ತಿಂಗಳ ನಂತರ ಸಲ್ಲಿಕೆಯಾಗುವ ಅರ್ಜಿಯನ್ನೂ ಪುರಸ್ಕರಿಸುವ ಅಧಿಕಾರ ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಇದೆ. ಅರ್ಜಿಯನ್ನು ತಿರಸ್ಕರಿಸುವುದಾದರೆ, ಅವರು ಅದಕ್ಕೆ ಸ್ಪಷ್ಟ ಕಾರಣವನ್ನೂ ಆದೇಶದಲ್ಲಿ ಉಲ್ಲೇಖಿಸ ಬೇಕಾಗುತ್ತದೆ.

ಹದಗೆಟ್ಟ ರಸ್ತೆಯಿಂದಾಗಿ ಅಥವಾ ರಸ್ತೆಗುಂಡಿಗಳಿಂದಾಗಿ ಸಂಭವಿಸುವ ಅಪಘಾತದಲ್ಲಿ ಮೃತರ ಕುಟುಂಬಕ್ಕೆ ₹ 3 ಲಕ್ಷ ಹಾಗೂ ಗಂಭೀರ ಗಾಯಗೊಂಡವರಿಗೆ ಗರಿಷ್ಠ ₹ 15 ಸಾವಿರದವರೆಗೆ ಪರಿಹಾರವನ್ನು ಬಿಬಿಎಂಪಿ ನಿಗದಿಪಡಿಸಿತ್ತು. ಸಣ್ಣ ಪ್ರಮಾಣದ ಗಾಯಕ್ಕೆ ₹ 5,000 ಹಾಗೂ ಇತರ ಹೆಚ್ಚುವರಿ ಗಾಯಗಳಿಗೆ ತಲಾ ₹ 500ರಂತೆ ಪರಿಹಾರ ಪಡೆಯಬಹುದು. ವೈದ್ಯಕೀಯ ವೆಚ್ಚದ ರೂಪದಲ್ಲಿ ₹ 10 ಸಾವಿರದವರೆಗೆ ಮಧ್ಯಂತರ ಪರಿಹಾರ ಪಡೆಯಲು ಅವಕಾಶವಿದೆ. ಗಾಯದ ನೋವು ಉಳಿದುಕೊಂಡು ಮೂರು-ನಾಲ್ಕು ದಿನಗಳ ಕಾಲ ಚಿಕಿತ್ಸೆ ಪಡೆದರೆ ₹ 10 ಸಾವಿರದವರೆಗೆ ಪರಿಹಾರ ನೀಡಬಹುದು. ಗಾಯಕ್ಕೆ ಒಮ್ಮೆ ಪರಿಹಾರ ಪಡೆದ ಬಳಿಕ ಚಿಕಿತ್ಸೆಗೆ ಪ್ರತ್ಯೇಕವಾಗಿ ಪರಿಹಾರ ನೀಡಲು ಬರುವುದಿಲ್ಲ. ಎಕ್ಸ್-ರೇ ಮತ್ತಿತರ ಪರೀಕ್ಷೆಗಳನ್ನು ನಡೆಸಿದ್ದರೆ ಅದರ ವೆಚ್ಚ ಮರುಪಾವತಿ ಮಾಡಬಹುದು.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರು ಅಥವಾ ಗಾಯಾಳುಗಳು ಪರಿಹಾರ ಕೋರಿ ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಅರ್ಜಿ ಸಲ್ಲಿಸಬಹುದು ಎಂದು ಆದೇಶದಲ್ಲಿ ಹೇಳಲಾಗಿತ್ತು. ಆದರೆ, 'ಪರಿಹಾರ ಕೋರಿ ತಮ್ಮ ಮುಂದೆ ಇದುವರೆಗೂ ಯಾವುದೇ ಅರ್ಜಿ ಬಂದಿಲ್ಲ' ಎನ್ನುತ್ತಾರೆ ಕಂದಾಯ ವಿಭಾಗದ ವಿಶೇಷ ಆಯುಕ್ತ ಎಸ್. ಬಸವರಾಜು.

ನಗರದಲ್ಲಿ ಇತ್ತೀಚೆಗಂತೂ ರಸ್ತೆ ಗುಂಡಿಗಳ ಸಮಸ್ಯೆ ತೀರಾ ಹೆಚ್ಚಳವಾಗಿದೆ. ರಸ್ತೆ ಗುಂಡಿಗಳಿಂದಾಗಿಯೇ ತಿಂಗಳಿನಿಂದ ಈಚೆಗೆ ಇಬ್ಬರು ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಮಳೆಯ ಸಂದರ್ಭದಲ್ಲಿ ರಸ್ತೆಯ ದುಃಸ್ಥಿತಿಯಿಂದಾಗಿ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡ ಘಟನೆಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ಆದರೂ ಯಾರೂ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸದಿರುವುದಕ್ಕೆ ತಿಳಿವಳಿಕೆಯ ಕೊರತೆಯೂ ಕಾರಣ ಎಂಬ ದೂರುಗಳಿವೆ.

ಅಪಘಾತದಲ್ಲಿ ಯಾವುದಾದರೂ ಸ್ವತ್ತಿಗೆ ಹಾನಿಯಾಗಿದ್ದರೆ ಅಥವಾ ವ್ಯಕ್ತಿ ಮೃತಪಟ್ಟಿದ್ದರೆ, ಗಾಯಗೊಂಡಿದ್ದರೆ ಮೋಟಾರು ವಾಹನ ಕಾಯ್ದೆ ಪ್ರಕಾರ ಅಥವಾ ಬಿಬಿಎಂಪಿ ಮೂಲಕ, ಎರಡರಲ್ಲಿ ಒಂದರ ಮೂಲಕ ಮಾತ್ರ ಪರಿಹಾರ ಪಡೆಯಬಹುದು. ಗಾಯಾಳುಗಳ ಚಿಕಿತ್ಸೆಗೆ ಎಷ್ಟೇ ವೆಚ್ಚವಾಗಿರಲಿ, ಅವರು ಗರಿಷ್ಠ 15 ಸಾವಿರದವರೆಗೆ ಮಾತ್ರ ಪರಿಹಾರ ಪಡೆಯಲು ಸಾಧ್ಯ. ಈ ಮಿತಿಯನ್ನು ನಿಗದಿಪಡಿಸಿರುವುದು ಕೂಡಾ ಗಾಯಾಳುಗಳು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ಆಸಕ್ತಿ ತೋರಿಸದಿರುವುದಕ್ಕೆ ಕಾರಣ. ಇಷ್ಟು ಕಡಿಮೆ ಮೊತ್ತದ ಪರಿಹಾರ ಪಡೆಯಲು ಬಿಬಿಎಂಪಿಗೆ ಅಲೆದಾಡುವುದಕ್ಕೆ ಜನರು ಇಷ್ಟಪಡುವುದಿಲ್ಲ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

Pearl Academy

We are looking for Professors, Associate Professors and Assistant Professors.

Pearl Academy Bengaluru campus is in the process of applying for affiliation to the Bengaluru City University.

We are looking for faculty members in the disciplines of Fashion, Design, Media and Business as per UGC norms.

Above vacancies are subject to getting an approval from the Bengaluru City University.

Bengaluru Campus (Sunitha Kale): +91-8068371000
Dhanya Menon: 9999122065
dhanya.menon@pearlacademy.com

Pearl Academy believes in equal opportunities for everyone and does not discriminate on the basis of religion, caste or gender.

Bengaluru Campus: No. 31, Residency Road, Next to Opera House, Opposite to The Gateway Hotel, Bengaluru - 560025.

ಚಿತ್ರಾವಳಿ

ವಿದ್ಯಾರಣ್ಯಪುರದ ಮಂಜುನಾಥೇಶ್ವರ ಸ್ವಾಮಿ ದೇವಾಲಯದ ನೂತನ ಸಭಾಂಗಣವನ್ನು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಬುಧವಾರ ಉದ್ಘಾಟಿಸಿದರು. ಬೆಂಗಳೂರು ಆಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ರಾಮಚಂದ್ರೇಗೌಡ, ವಿದ್ಯಾರಣ್ಯಪುರ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಆರ್. ಆಶ್ವತ್ಥ್, ಕಾರ್ಯದರ್ಶಿ ಜಗದೀಶ್ ಹಾಗೂ ಇತರರು ಇದ್ದರು.

ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ಗ್ರಾಮದಲ್ಲಿ ಪಿಳೇಕಮ್ಮ ಮತ್ತು ದೊಡ್ಡಮ್ಮ ದೇವಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ದೇವರುಗಳ ಮೆರವಣಿಗೆ ವಿಜೃಂಭಣೆಯಿಂದ ಬುಧವಾರ ನಡೆಯಿತು.

ಕಾರ್ಯಕ್ರಮದಲ್ಲಿ ನೇತ್ರದಾನದ ನೋಂದಣಿ ಆರ್ಜಿಗಳನ್ನು ಪ್ರದರ್ಶಿಸಲಾಯಿತು. (ಎಡದಿಂದ) ಜಗದೀಶ್ ಚೌಧರಿ, ಪ್ರಕಾಶ್ ರೈ, ಜಗದೀಶ್ ಗೌಡ, ಭುಜಂಗ ಶೆಟ್ಟಿ, ಎಂ.ವಿ.ನಾಗರಾಜು, ಎ.ಎಸ್.ರಾಮಮೂರ್ತಿ, ಬಿ.ಎನ್.ಜಗದೀಶ್, ಶಾಸಕ ಡಾ.ಕೆ. ಶ್ರೀನಿವಾಸಮೂರ್ತಿ, ಡಾ.ಆಂಜಿನಪ್ಪ, ಎಚ್.ರಾಮಚಂದ್ರಯ್ಯ ಇದ್ದಾರೆ.

'ನೇತ್ರದಾನ ಕೇಂದ್ರ ಸ್ಥಾಪನೆ ಅವಶ್ಯಕ'

ನೆಲಮಂಗಲ: 'ಜನರಲ್ಲಿ ನೇತ್ರದಾನದ ಜಾಗೃತಿ ಇದೆ. ಆದರೆ, ಕಾಲಮಿತಿಯೊಳಗೆ ನೇತ್ರಗಳನ್ನು ಸಂಗ್ರಹಿಸಲು ಸಮಸ್ಯೆಯಾಗುತ್ತಿದೆ. ಅಲ್ಲಲ್ಲಿ ನೇತ್ರದಾನ ಕೇಂದ್ರಗಳು ಸ್ಥಾಪನೆಯಾದರೆ, ಈ ಸಮಸ್ಯೆ ನಿವಾರಣೆಯಾಗುತ್ತದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಭುಜಂಗ ಶೆಟ್ಟಿ ತಿಳಿಸಿದರು.

ಜಯ ಕರ್ನಾಟಕ ತಾಲ್ಲೂಕು ಘಟಕ ಮಂಗಳವಾರ ಹಮ್ಮಿಕೊಂಡಿದ್ದ 'ನೆಲಮಂಗಲ ಕನ್ನಡ ಹಬ್ಬ' ಹಾಗೂ ಎಂ.ಆರ್.ನೇತ್ರದಾನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೈದ್ಯ ಆಂಜಿನಪ್ಪ, 'ನಟ ರಾಜ್‌ಕುಮಾರ್ ತಮ್ಮ ಕಣ್ಣುಗಳನ್ನು ದಾನ ಮಾಡುವ ಮೂಲಕ ಲಕ್ಷಾಂತರ ಜನರಿಗೆ ಪ್ರೇರಣೆ ನೀಡಿದ್ದಾರೆ. ಅವರ ಕುಟುಂಬಸ್ಥರು ದೇಹ ದಾನ ಮಾಡುವ ಮೂಲಕ ರಾಜ್‌ಕುಮಾರ್ ಅವರ ಗೌರವ ಎತ್ತಿ ಹಿಡಿದಿದ್ದಾರೆ' ಎಂದರು.

ಅರಿಶಿನಕುಂಟೆಯ ನರಸಿಂಹ ಮೂರ್ತಿ ಅವರು ತಮ್ಮ ಕುಟುಂಬ ಸಮೇತರಾಗಿ ನೇತ್ರದಾನಕ್ಕೆ ನೊಂದಣಿ ಮಾಡುವ ಮೂಲಕ ನೇತ್ರದಾನಕ್ಕೆ ಚಾಲನೆ ನೀಡಿದರು. ತಮ್ಮ ಬೆಂಬಲಿಗರಿಂದ ನೇತ್ರದಾನ ಮಾಡಿಸುವುದಾಗಿ ಶಾಸಕ ಕೆ.ಶ್ರೀನಿವಾಸಮೂರ್ತಿ ಭರವಸೆ ನೀಡಿದರು.

ಪ್ರತಿ ವರ್ಷ 5 ಲಕ್ಷ ವಿದ್ಯಾರ್ಥಿಗಳ ಕಲಿಕೆ, ಬೋಧಕರಿಗೆ ಉಚಿತ ತರಬೇತಿ

ಇನ್ಫೊಸಿಸ್ ಜತೆ ಡಿಸಿಟಿಇ ಒಪ್ಪಂದ

ಪ್ರಜಾವಾಣಿ ವಾರ್ತೆ

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಆವರ ಸಮ್ಮುಖದಲ್ಲಿ ಪಿ. ಪ್ರದೀಪ್ ಮತ್ತು ತಿರುಮಲ ಆರೋಹಿ ಒಪ್ಪಂದಕ್ಕೆ ಸಹಿ ಹಾಕಿದರು. ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ್ ನಾಯಕ್, ರೋಟರಿ ಇಂಡಿಯಾ ಲಿಟರರಿ ಮಿಷನ್‌ನ ರಾಜೇಂದ್ರ ರಾಯ್ ಇದ್ದರು

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯದಂತೆ ವಿದ್ಯಾರ್ಥಿಗಳಿಗೆ ಸಂಯೋಜಿತ ಕಲಿಕೆ (ಬ್ಲೆಂಡೆಂಡ್ ಲರ್ನಿಂಗ್) ಮತ್ತು ಬೋಧಕರ ತರಬೇತಿಗೆ ನೆರವು ನೀಡಲು ಇನ್ಫೊಸಿಸ್ ಜತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ (ಡಿಸಿಟಿಇ) ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದೆ.

ಈ ಒಪ್ಪಂದದ ಭಾಗವಾಗಿ 15 ಸಾವಿರ ಕಂಪ್ಯೂಟರ್‌ಗಳನ್ನು ದೇಣಿಗೆಯಾಗಿ ಇನ್ಫೊಸಿಸ್ ನೀಡಲಿದೆ. ಈ ಕಂಪ್ಯೂಟರ್‌ಗಳನ್ನು ಕಾಲೇಜುಗಳಿಗೆ ತಲುಪಿಸಿ, ಅಳವಡಿಸುವ ಕೆಲಸವನ್ನು ರೋಟರಿ ಸಂಸ್ಥೆ ಮಾಡಲಿದೆ. ಜೊತೆಗೆ, ಕಂಪ್ಯೂಟರುಗಳಿಗೆ ಕಾರ್ಯಾಚರಣೆ ವ್ಯವಸ್ಥೆ ಹಾಗೂ ಅಗತ್ಯ ತಂತ್ರಾಂಶವನ್ನೂ ಒದಗಿಸಲಿದೆ.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಡಿಸಿಟಿಇ ಆಯುಕ್ತ ಪಿ. ಪ್ರದೀಪ್ ಮತ್ತು ಇನ್ಫೊಸಿಸ್ ಹಿರಿಯ ಉಪಾಧ್ಯಕ್ಷ (ಶಿಕ್ಷಣ ಮತ್ತು ತರಬೇತಿ) ತಿರುಮಲ ಆರೋಹಿ ಒಪ್ಪಂದಕ್ಕೆ ಸಹಿ ಹಾಕಿದರು.

ಅಶ್ವತ್ಥನಾರಾಯಣ ಮಾತನಾಡಿ, 'ಈ ಒಪ್ಪಂದದ ಅನ್ವಯ ಇನ್ಫೊಸಿಸ್ ₹ 35 ಕೋಟಿ ವೆಚ್ಚದಲ್ಲಿ ರೂಪಿಸಿರುವ ಇನ್ಫೊಸಿಸ್ ಸ್ಪ್ರಿಂಗ್ ಬೋರ್ಡ್ ಡಿಜಿಟಲ್ ವೇದಿಕೆಯಲ್ಲಿರುವ 3,900ಕ್ಕೂ ಹೆಚ್ಚಿನ ಕೋರ್ಸ್‌ಗಳು ಮತ್ತು 1.6 ಲಕ್ಷ ಕಲಿಕಾ ಸಂಪನ್ಮೂಲಗಳನ್ನು (ಆಡಿಯೊ, ವಿಡಿಯೊ, ಆನಿಮೇಷನ್) 5 ಲಕ್ಷ ವಿದ್ಯಾರ್ಥಿಗಳು ಹಾಗೂ ಬೋಧಕರಿಗೆ ಉಚಿತವಾಗಿ ಲಭ್ಯವಾಗಿಸಲಿದೆ. ಅಲ್ಲದೆ, ಬೋಧಕರಿಗೆ ಇನ್ಫೊಸಿಸ್ ತರಬೇತಿ ನೀಡಲಿದ್ದು, ಮೊದಲು 200 ಮಂದಿಗೆ ಮೈಸೂರು ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ತರಬೇತಿ ನೀಡಲಿದೆ' ಎಂದು ವಿವರಿಸಿದರು.

'ಸ್ಪ್ರಿಂಗ್ ಬೋರ್ಡ್ ಡಿಜಿಟಲ್ ವೇದಿಕೆಗೆ ಇನ್ಫೊಸಿಸ್ ಮುಂದಿನ 5ರಿಂದ 10 ವರ್ಷಗಳ ಅವಧಿಯಲ್ಲಿ ಇನ್ನೂ ₹ 750 ಕೋಟಿ ಹೂಡಿಕೆ ಮಾಡುವ ಯೋಜನೆ ಹೊಂದಿದೆ' ಎಂದೂ ತಿಳಿಸಿದರು.

'ಈ ಒಪ್ಪಂದ ಉನ್ನತ ಶಿಕ್ಷಣದ ಗುಣಮಟ್ಟವನ್ನು ಮೇಲ್ದರ್ಜೆಗೇರಿಸಲು ಉತ್ತೇಜನ ನೀಡಲಿದೆ' ಎಂದು ಇನ್ಫೊಸಿಸ್ ಸ್ಪ್ರಿಂಗ್ ಬೋರ್ಡ್ ಪ್ರೋಗ್ರಾಮ್ ಮ್ಯಾನೇಜರ್ ಎನ್.ಜಿ. ಕಿರಣ್ ಹೇಳಿದರು.

'ಇನ್ಫೊಸಿಸ್ ತನ್ನ ಸಿಬ್ಬಂದಿಯ ಸಾಮರ್ಥ್ಯ ವೃದ್ಧಿ, ಜಾಗತಿಕ ಗುಣಮಟ್ಟದ ನಿರಂತರ ಕಲಿಕೆ ಹಾಗೂ ಪ್ರತಿಭಾ ವೃದ್ಧಿಗೆ ಒತ್ತು ಕೊಡುತ್ತಾ ಬಂದಿದ್ದು, ಅದನ್ನು ವಿದ್ಯಾರ್ಥಿಗಳಿಗೂ ವಿಸ್ತರಿಸಲು ಅವಕಾಶವಾಗಿದೆ' ಎಂದು ಸಂಸ್ಥೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ಪ್ರವೀಣ್ ರಾವ್ ತಿಳಿಸಿದರು.

ಸರ್ಕಾರಕ್ಕೆ 'ಸಿಟಿಜನ್ಸ್ ಫಾರ್ ಸಿಟಿಜನ್ಸ್' ಮನವಿ ಪತ್ರ ಸಲ್ಲಿಕೆ

'ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಲಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಒತ್ತಾಯಿಸಿದೆ.

ಈ ಬಗ್ಗೆ ಮೂಲಸೌಕರ್ಯ ಮತ್ತು ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್. ಅನಿಲ್ ಕುಮಾರ್ ಅವರಿಗೆ ಮನವಿ ಸಲ್ಲಿಸಿರುವ 'ಸಿ4ಸಿ' ಸಂಸ್ಥಾಪಕ ಮತ್ತು ಸಂಚಾಲಕ ರಾಜಕುಮಾರ್ ದುಗಾರ್ ಅವರು, ನಗರದಲ್ಲಿ ಬಸ್‌ಗಳು ಮತ್ತು ಮೆಟ್ರೊ ರೈಲಿನ ಮೇಲೆಯೇ ನಾಗರಿಕರು ಹೆಚ್ಚು ಅವಲಂಬಿತರಾಗಿದ್ದಾರೆ. ಆದರೆ, ಇದರಿಂದ ಹೆಚ್ಚು ಅನುಕೂಲವಾಗಿಲ್ಲ. ಹೀಗಾಗಿ, ರೈಲು ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರತಿ ನಿತ್ಯ 1.3 ಲಕ್ಷಕ್ಕೂ ಹೆಚ್ಚು ಮಂದಿ ಸಂಚರಿಸುತ್ತಿದ್ದಾರೆ. ಈ ವಿಮಾನ ನಿಲ್ದಾಣದ ಸಮೀಪ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದ್ಯ ವಿಮಾನ ನಿಲ್ದಾಣಕ್ಕೆ ರಸ್ತೆ ಸಾರಿಗೆ ಸೌಲಭ್ಯ ಮಾತ್ರ ಇದೆ. ಇದರಿಂದ, ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗಗಳಲ್ಲಿ ದಿನೇ ದಿನೇ ಸಂಚಾರ ದಟ್ಟಣೆಯಾಗುತ್ತಿದೆ. ಇನ್ನೆರಡು ವರ್ಷಗಳಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮಂದಿ ಈ ಮಾರ್ಗಗಳಲ್ಲಿ ಸಂಚರಿಸುವ ಸಾಧ್ಯತೆ ಇದೆ. ಈಗಿನಿಂದಲೇ ದಟ್ಟಣೆ ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳದಿದ್ದರೆ ಸಮಸ್ಯೆ ಮತ್ತಷ್ಟು ತೀವ್ರವಾಗಲಿದೆ ಎಂದು ಹೇಳಿದ್ದಾರೆ.

ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸೌಲಭ್ಯವನ್ನು 2024-25ಕ್ಕೆ ಕಲ್ಪಿಸಲು ಉದ್ದೇಶಿಸಲಾಗಿದೆ. ಆದರೆ, ಕಾಮಗಾರಿ ವಿಳಂಬ ಸೇರಿದಂತೆ ವಿವಿಧ ಕಾರಣಗಳಿಂದ 2027-28ಕ್ಕೆ ಸೇವೆ ಆರಂಭವಾಗಬಹುದು. ಹೀಗಾಗಿ, ಬೆಂಗಳೂರಿನ ವಿವಿಧೆಡೆಯಿಂದ ದೇವನಹಳ್ಳಿಗೆ ರೈಲು ಸೇವೆ ಕಲ್ಪಿಸಬೇಕು. ಕನಿಷ್ಠ 10 ಸಣ್ಣ ಸ್ಥಳೀಯ ರೈಲುಗಳ (ಡೆಮು/ಮೆಮು) ಸಂಚಾರ ಆರಂಭಿಸಬೇಕು. ಇದರಿಂದ, ರಸ್ತೆ ಮೂಲಕ ಸಂಚರಿಸುವ ಸುಮಾರು ಆರು ಸಾವಿರ ಮಂದಿ ರೈಲು ಬಳಸಲು ಆರಂಭಿಸುತ್ತಾರೆ. ಜತೆಗೆ, ಕಂಟೋನ್ಮೆಂಟ್‌ನಿಂದ ಬೈಯಪ್ಪನಹಳ್ಳಿ ಮೂಲಕ ದೇವನಹಳ್ಳಿಗೆ ಪ್ರತಿ ಗಂಟೆಗೆ ರೈಲುಗಳು ಸಂಚರಿಸುವಂತೆ ಕ್ರಮಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಬೆಂಗಳೂರು ಉಪನಗರ ರೈಲು ಯೋಜನೆಗೆ 2020ರ ಅಕ್ಟೋಬರ್ 21ಕ್ಕೆ ಅನುಮೋದನೆ ನೀಡಲಾಗಿದೆ. ಆದರೆ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಇದುವರೆಗೆ ಆಸಕ್ತಿ ವಹಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯಲಹಂಕ-ದೇವನಹಳ್ಳಿ ರೈಲ್ವೆ ಮಾರ್ಗದಲ್ಲಿನ ವಿದ್ಯುದ್ದೀಕರಣ ಯೋಜನೆಯನ್ನು ತ್ವರಿತಗತಿಯಲ್ಲಿ ಮುಕ್ತಾಯಗೊಳಿಸಬೇಕು. ಯಲಹಂಕ ಮತ್ತು ದೇವನಹಳ್ಳಿ ನಡುವಣ ಜೋಡಿ ಹಳಿ ಮಾರ್ಗಕ್ಕೆ ಅನುಮೋದನೆ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು ಎಂದು ಕೋರಿದ್ದಾರೆ.

ಮರ್ಯಾದೆಗೇಡು ಹತ್ಯೆ: ಪರಿಹಾರಕ್ಕೆ ಆಗ್ರಹ

ಬೆಂಗಳೂರು: 'ವಿಜಯಪುರ ಜಿಲ್ಲೆಯ ಬಳಗಾನೂರ ಗ್ರಾಮದಲ್ಲಿ ಮುಸ್ಲಿಂ ಯುವತಿಯನ್ನು ಪ್ರೀತಿಸುತ್ತಿದ್ದ ರವಿ ನಿಂಬರಗಿ ಎಂಬ ಲಿಂಗಾಯತ ಯುವಕನ ಮರ್ಯಾದೆಗೇಡು ಹತ್ಯೆ ಖಂಡನೀಯ. ಮೃತನ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಆಗ್ರಹಿಸಿದೆ.

ಸಮಿತಿ ಅಧ್ಯಕ್ಷೆ ದೇವಿ,'ಬೆಳಗಾವಿ ದುರ್ಘಟನೆ ಮಾಸುವ ಮುನ್ನವೇ ಮತ್ತೊಂದು ಹತ್ಯೆ ದುರಂತದ ಸಂಗತಿ. ರಾಜ್ಯದಲ್ಲಿ ಇಂತಹ ಮರ್ಯಾದೆಗೇಡು ಹತ

ದರೋಡೆಗೆ ಸಂಚು: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದರೋಡೆಗೆ ಸಂಚು ರೂಪಿಸಿದ್ದ ಮೂವರು ಆರೋಪಿಗಳನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರವೀಣ್ (23), ಸಾಗರ್ (20) ಹಾಗೂ ಮಹೇಂದ್ರ (20) ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

'ಆರೋಪಿಗಳು ವಿಜಯಲಕ್ಷ್ಮಿ ಬಡಾವಣೆಯಲ್ಲಿ ದರೋಡೆ ನಡೆಸಲು ಸಿದ್ಧತೆ ನಡೆಸಿದ್ದರು. ಮಾರಕಾಸ್ತ್ರಗಳನ್ನು ಹಿಡಿದು ಓಡಾಡುತ್ತಿದ್ದ ಕುರಿತು ಮಾಹಿತಿ ಲಭ್ಯವಾದ ತಕ್ಷಣ ದಾಳಿ ನಡೆಸಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜಾನ್ ಪೀಟರ್ ಹಾಗೂ ಪ್ರಶಾಂತ್ ಎಂಬುವರು ತಪ್ಪಿಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ನೇಮಕಾತಿಗೆ ಅರ್ಜಿ ಸಲ್ಲಿಸಿರುವ ತಜ್ಞ ವೈದ್ಯರ ಆರೋಪ

ಕಡ್ಡಾಯ ಸೇವೆಯಲ್ಲೂ 'ಸೀಟ್ ಬ್ಲಾಕಿಂಗ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಪದವಿ, ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳಲ್ಲಿ ಪದವಿ ಪಡೆದಿರುವ ತಜ್ಞ ವೈದ್ಯರನ್ನು ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿಗೊಳಿಸುವ ಪ್ರಕ್ರಿಯೆಯಲ್ಲಿ 'ಸೀಟ್ ಬ್ಲಾಕಿಂಗ್' ಪ್ರಯತ್ನ ನಡೆದಿದೆ ಎಂದು ನೇಮಕಾತಿಗೆ ಅರ್ಜಿ ಸಲ್ಲಿಸಿರುವ ವೈದ್ಯರು ಆರೋಪಿಸಿದ್ದಾರೆ.

ರಾಜ್ಯದಲ್ಲಿ ಒಟ್ಟು 2,500ಕ್ಕೂ ಹೆಚ್ಚು ಮಂದಿ ಪ್ರಸಕ್ತ ವರ್ಷ ಕೋರ್ಸ್ ಪೂರ್ಣಗೊಳಿಸಿದ್ದಾರೆ. ಅವರಲ್ಲಿ 1,600 ಜನರು ಕಡ್ಡಾಯ ಸೇವೆಗೆ ನೋಂದಣಿ ಮಾಡಿಸಿದ್ದಾರೆ. ಸೋಮವಾರ ಮತ್ತು ಮಂಗಳವಾರ ತಮ್ಮ ಸ್ಥಳ ಆಯ್ಕೆಯನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ಸಂದರ್ಭದಲ್ಲಿ ಪ್ರಮುಖ ನಗರಗಳು ಸೇರಿದಂತೆ ಕೆಲವು ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿ ಮುಚ್ಚಿಡಲಾಗಿತ್ತು ಎಂದು ದೂರಿದ್ದಾರೆ.

'ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಜನರಲ್ ಮೆಡಿಸಿನ್ ವಿಭಾಗದಲ್ಲಿ 19 ಖಾಲಿ ಹುದ್ದೆಗಳಿವೆ ಎಂದು ಆರೋಗ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಆದರೆ, ಸ್ಥಳ ಆಯ್ಕೆಗೆ ಲಾಗಿನ್ ಆದಾಗ ಒಂದೇ ಹುದ್ದೆ ತೋರಿಸಲಾಗುತ್ತಿತ್ತು. ರಾಮನಗರ ಜಿಲ್ಲಾ ಆಸ್ಪತ್ರೆಯಲ್ಲಿ ಎರಡು ಖಾಲಿ ಹುದ್ದೆಗಳಿದ್ದರೂ, ಒಂದನ್ನೇ ತೋರಿಸಲಾಗುತ್ತಿತ್ತು' ಎಂದು ವೈದ್ಯರೊಬ್ಬರು ದಾಖಲೆ ಸಮೇತ ಆರೋಪಿಸಿದರು.

ರಾಜ್ಯದ ಹಲವು ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿ ಬಚ್ಚಿಡಲಾಗಿತ್ತು. ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದ ಬಳಿಕ ಮಂಗಳವಾರ ಸಂಜೆ ಪುನಃ ಖಾಲಿ ಇರುವ ಎಲ್ಲ ಹುದ್ದೆಗಳ ಮಾಹಿತಿಯನ್ನು ಆಯ್ಕೆಗೆ ನೀಡಲಾಯಿತು. ಆಯ್ದ ಹುದ್ದೆಗಳನ್ನು ತಮಗೆ ಬೇಕಾದವರಿಗೆ ನೀಡಲು 'ಬ್ಲಾಕಿಂಗ್' ಮಾಡಲಾಗಿತ್ತು ಎಂದು ದೂರಿದರು.

ಸೌಲಭ್ಯ ಇಲ್ಲದಿದ್ದರೂ ಹುದ್ದೆ: ಆರಂಭದಲ್ಲಿ 1,300 ಹುದ್ದೆಗಳು ಮಾತ್ರ ಖಾಲಿ ಇವೆ ಎಂದು ಪ್ರಕಟಿಸಲಾಗಿತ್ತು. ಪ್ರಸಕ್ತ ವರ್ಷ ಕೋರ್ಸ್ ಪೂರ್ಣಗೊಳಿಸಿದವರ ಸಂಖ್ಯೆ ಜಾಸ್ತಿ ಇತ್ತು. ಈ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು. ಬಳಿಕ ಖಾಲಿ ಹುದ್ದೆಗಳ ಪಟ್ಟಿ ಪರಿಷ್ಕರಿಸಿರುವ ಆರೋಗ್ಯ ಇಲಾಖೆ, 1,915 ಹುದ್ದೆಗಳಿವೆ ಎಂದು ತಿಳಿಸಿದೆ.

'ತಾಲ್ಲೂಕು ಆಸ್ಪತ್ರೆಯೇ ಇಲ್ಲದ ಹೊಸ ತಾಲ್ಲೂಕು ಕೇಂದ್ರಗಳಲ್ಲಿ ಹೊಸ ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಶಸ್ತ್ರಚಿಕಿತ್ಸಾ ಘಟಕವೇ ಇಲ್ಲದ ಆಸ್ಪತ್ರೆಗಳಲ್ಲಿ ಅರಿವಳಿಕೆ ತಜ್ಞರ ಹುದ್ದೆ ತೋರಿಸಲಾಗಿದೆ. ಸ್ತ್ರೀರೋಗ ಚಿಕಿತ್ಸಾ ಸೌಲಭ್ಯ ಇಲ್ಲದ ಸಣ್ಣ ಆಸ್ಪತ್ರೆಗಳಲ್ಲೂ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರ ಹುದ್ದೆ ತೋರಿಸಲಾಗಿದೆ' ಎಂದು ಮತ್ತೊಬ್ಬ ವೈದ್ಯ ಆಕ್ಷೇಪಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 1,855 ಮಂದಿ ಸ್ನಾತಕೋತ್ತರ ವೈದ್ಯಕೀಯ ಪದವಿ ಕೋರ್ಸ್ ಮುಗಿಸಿದ್ದಾರೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಒದಗಿಸಿದೆ. ಆದರೆ, 1775 ಮಂದಿ ಕೋರ್ಸ್ ಮುಗಿಸಿದ್ದಾರೆ ಎಂಬುದಾಗಿ ಹೈಕೋರ್ಟ್‌ಗೆ ಇತ್ತೀಚೆಗೆ ತಿಳಿಸಿದೆ. ಇದು ಈ ಪ್ರಕ್ರಿಯೆಯಲ್ಲಿನ ಗೊಂದಲಕ್ಕೆ ಸಾಕ್ಷಿ ಎಂದರು.

'ಬ್ಲಾಕಿಂಗ್ ಮಾಹಿತಿ ಇಲ್ಲ'

'ಕಡ್ಡಾಯ ಸೇವೆ ನಿಯೋಜನೆ ಪ್ರಕ್ರಿಯೆಯಲ್ಲಿ ಸೀಟ್ ಬ್ಲಾಕಿಂಗ್ ನಡೆದಿರುವ ಮಾಹಿತಿ ಇಲ್ಲ. ಈ ಕುರಿತು ಪರಿಶೀಲಿಸಲಾಗುವುದು. ಹುದ್ದೆಗಳ ಸಂಖ್ಯೆಯಲ್ಲಿ ವ್ಯತ್ಯಾಸ ಆಗಿರುವ ಬಗ್ಗೆಯೂ ಮಾಹಿತಿ ಪಡೆಯಲಾಗುವುದು. ಆರೋಗ್ಯ ಇಲಾಖೆ ಮತ್ತು ಜನರ ಅಗತ್ಯಕ್ಕೆ ತಕ್ಕಂತೆ ಖಾಲಿ ಹುದ್ದೆಗಳನ್ನು ಪ್ರಕಟಿಸಲಾಗಿದೆ. ಇದರಲ್ಲಿ ದೋಷಗಳಿಲ್ಲ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಮಹಿಳೆ ಮೇಲೆ ಹಲ್ಲೆ: ಭದ್ರತಾ ಸಿಬ್ಬಂದಿ ಪೊಲೀಸರ ವಶಕ್ಕೆ

ಬೆಂಗಳೂರು: ಎದುರು ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆ ಹಾಗೂ ತಾಯಿಯ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದ ಸಂಬಂಧ ನಿರ್ಮಾಪಕಿ ಸೌಂದರ್ಯ ಜಗದೀಶ್ ಅವರ ಮನೆಯ ಭದ್ರತಾ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಭದ್ರತಾ ಸಿಬ್ಬಂದಿ ಬಾಲಾಜಿ ಕಾತಿ ಎಂಬಾತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳಾದ ರೇಖಾ ಜಗದೀಶ್, ಅವರ ಮಗ ಸ್ನೇಹಿತ್, ಚಾಲಕ ರಕ್ಷಿತ್, ಭುವನಾ, ಲತಾ ಹಾಗೂ ಬೌನ್ಸರ್‌ಗಳಾದ ನಿಖಿಲ್, ಕುಮಾರ್, ರೋಹಿತ್, ಅಶೋಕ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ. ಆರೋಪಿಗಳ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಅವರ ಕುಟುಂಬದವರಿಂದ ಹೇಳಿಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹೆಲಿ ಪೋರ್ಟ್': ನೆರವು ಕೋರಿದ ಅರುಣಾಚಲ ಪ್ರದೇಶ

ಬೆಂಗಳೂರು: 'ಹೆಲಿ ಪೋರ್ಟ್' ನಿರ್ಮಿಸಲು ನೆರವು ನೀಡುವಂತೆ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಐಐಡಿಸಿ) ಅರುಣಾಚಲ ಪ್ರದೇಶ ಸರ್ಕಾರ ಮನವಿ ಮಾಡಿದೆ.

ಈ ಬಗ್ಗೆ ಅರುಣಾಚಲ ಪ್ರದೇಶದ ಸರ್ಕಾರದ ನಿಯೋಗವು ಕೆಎಸ್‌ಐಐಡಿಸಿ ಅಧಿಕಾರಿಗಳನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿತು.

ನಿಯೋಗದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿ ಹಾಗೆ ತರಿ, ಅರುಣಾಚಲ ಪ್ರದೇಶ ಕೈಗಾರಿಕಾ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧ್ಯಕ್ಷ ವಾಂಗ್‌ಲಾಂಗ್ ರಾಜಕುಮಾರ್ ಮತ್ತು ಅರುಣಾಚಲ ಪ್ರದೇಶ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ನಿಗಮದ ಅಧ್ಯಕ್ಷ ಡಾಮಿನಿಕ್ ತಾಡರ್ ಇದ್ದರು.

ಅರುಣಾಚಲ ಪ್ರದೇಶಕ್ಕೆ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವ ನಿಟ್ಟಿನಲ್ಲಿ 'ಹೆಲಿ ಪೋರ್ಟ್' ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಯೋಜನೆ ಬಗ್ಗೆ ಅಧ್ಯಯನ ಕೈಗೊಳ್ಳುವಂತೆ ಕೆಎಸ್‌ಐಐಡಿಸಿಗೆ ಅರುಣಾಚಲ ಪ್ರದೇಶ ಸರ್ಕಾರ ಶೀಘ್ರ ಆಹ್ವಾನ ನೀಡಲಿದೆ ಎಂದು ನಿಯೋಗ ತಿಳಿಸಿದೆ.

ಕೆಎಸ್‌ಐಐಡಿಸಿ ಅಧ್ಯಕ್ಷ ಡಾ. ಶೈಲೇಂದ್ರ ಕೆ. ಬೆಲ್ಲಾಳೆ, ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ಮೋಹನ್‌ರಾಜ್, ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ. ಪ್ರಕಾಶ್, ಯೋಜನಾ ಸಲಹೆಗಾರ ಬ್ರಿಗೇಡಿಯರ್ ಪೂರ್ವಿಮಠ ಇದ್ದರು.

ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ಸ್ತನ ಕ್ಯಾನ್ಸರ್ ತಪಾಸಣೆ

ಪ್ರಜಾವಾಣಿ ವಾರ್ತೆ

ಸ್ತನ ಕ್ಯಾನ್ಸರ್ ತಪಾಸಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕೆಎಸ್‌ಆರ್‌ಟಿಸಿ ಸಿಬ್ಬಂದಿ

ಬೆಂಗಳೂರು: ಶಾಂತಿನಗರದ ಕೆಎಸ್‌ಆರ್‌ಟಿಸಿ ಬಸ್ ಟರ್ಮಿನಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗೆ ಇಲ್ಲಿನ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ವೈದ್ಯರು ಉಚಿತವಾಗಿ ಸ್ತನ ಕ್ಯಾನ್ಸರ್ ತಪಾಸಣೆ ನಡೆಸಿದರು.

ಸ್ತನ ಕ್ಯಾನ್ಸರ್ ಮಾಸದ ಪ್ರಯುಕ್ತ ಆಸ್ಪತ್ರೆಯು ಜಾಗೃತಿ ಹಾಗೂ ತಪಾಸಣೆ ಅಭಿಯಾನವನ್ನು ನಗರದ ವಿವಿಧೆಡೆ ಹಮ್ಮಿಕೊಂಡಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬೆಂಗಳೂರು ಕೇಂದ್ರೀಯ ವಿಭಾಗದ ಸಹಯೋಗದಲ್ಲಿ 60 ಮಹಿಳಾ ಸಿಬ್ಬಂದಿಗೆ ಸ್ತನ ಕ್ಯಾನ್ಸರ್ ತಪಾಸಣೆಯನ್ನು ಬುಧವಾರ ನಡೆಸಲಾಯಿತು. ಕ್ಯಾನ್ಸರ್ ಕಾಯಿಲೆಯ ಲಕ್ಷಣಗಳು ಹಾಗೂ ಚಿಕಿತ್ಸೆಯ ಬಗ್ಗೆಯೂ ಜಾಗೃತಿ ಮೂಡಿಸಲಾಯಿತು.

'ಸ್ತನ ಕ್ಯಾನ್ಸರ್ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಳವಾಗುತ್ತಿವೆ. ಸಣ್ಣ ವಯಸ್ಸಿನಲ್ಲಿಯೇ ಈ ಕಾಯಿಲೆ ಕಾಣಿಸಿಕೊಳ್ಳುತ್ತಿದೆ. ರೋಗದ ಲಕ್ಷಣವನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ತಡವಾಗಿ ಆಸ್ಪತ್ರೆಗಳಿಗೆ ತೆರಳಿದಲ್ಲಿ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ, ನಮ್ಮ ಸಿಬ್ಬಂದಿಗೂ ಈ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಿ, ತಪಾಸಣೆಗೆ ಒಳಪಡಿಸಲಾಗುತ್ತಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದರು.

ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ.ಆರ್. ಪ್ರಮಿತಾ, 'ಪ್ರತಿ ಮಹಿಳೆಯೂ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತವಾಗಿರಬೇಕು. ಈ ಕಾಯಿಲೆ ಬಗ್ಗೆ ನಿರ್ಲಕ್ಷ್ಯ ಮಾಡಿದಲ್ಲಿ ಇಡೀ ಜೀವನ ಹಾಳಾಗಲಿದೆ. ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳದ ಕಾರಣ ಕೆಲವರಿಗೆ ಸಮಸ್ಯೆ ಗಂಭೀರ ಸ್ವರೂಪ ತಲೆದೋರಿದಾಗ ಆಸ್ಪತ್ರೆಗೆ ಬರುತ್ತಿದ್ದಾರೆ. ಹಾಗಾಗಿ, ಪ್ರತಿ ವರ್ಷ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ಮನವಿ ಮಾಡಿಕೊಂಡರು.

ಆಸ್ಪತ್ರೆಯ ಉಪಾಧ್ಯಕ್ಷ ಮೋಹನ್ ಕುಮಾರ್, ನಿಗಮದ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್. ಲತಾ ಮತ್ತಿತರರು ಇದ್ದರು.

'ಜನಸ್ನೇಹಿ ವಿದ್ಯುತ್ ಸೇವೆ' ಇದೇ 29ಕ್ಕೆ ಸಿಎಂ ಚಾಲನೆ

ಬೆಂಗಳೂರು: 'ಹೊಸದಾಗಿ ವಿದ್ಯುತ್ ಸಂಪರ್ಕ, ಹೆಸರು ಬದಲಾವಣೆ, ಜಕಾತಿ (ಟಾರಿಫ್) ಬದಲಾವಣೆ ಮತ್ತು ಶುಲ್ಕ ಹೊರೆಯನ್ನು ಅವಶ್ಯಕತೆಗೆ ಅನುಗುಣವಾಗಿ ಬದಲಾಯಿಸುವ ಸೇವೆಯನ್ನು ಗ್ರಾಹಕರಿಗೆ 24 ಗಂಟೆಯ ಒಳಗೆ ಒದಗಿಸುವ 'ಜನಸ್ನೇಹಿ ವಿದ್ಯುತ್ ಸೇವೆಗಳು' ಸೌಲಭ್ಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 29ರಂದು ಚಾಲನೆ ನೀಡಲಿದ್ದಾರೆ.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಬೆಸ್ಕಾಂ ಪಶ್ಚಿಮ 4ನೇ ಉಪ ವಿಭಾಗದಲ್ಲಿ ಕಾರ್ಯಕ್ರಮ ನಡೆಯಲಿದೆ. ಎಲ್ಲ 409 ಉಪ ವಿಭಾಗಗಳಲ್ಲಿ ಈ ಸೌಲಭ್ಯ ಸಿಗಲಿದ್ದು, ರಾಜ್ಯದಾದ್ಯಂತ 10 ಲಕ್ಷ ಅರ್ಜಿದಾರರಿಗೆ ಅನುಕೂಲ ಆಗಬಹುದೆಂದು ಅಂದಾಜಿಸಲಾಗಿದೆ.

ಇಂಧನ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕದ 100 ದಿನಗಳ ಮಹತ್ವಾಕಾಂಕ್ಷಿ ಯೋಜನೆಗಳಡಿ ರಾಜ್ಯದಾದ್ಯಂತ ಎಲ್ಲ ವಿದ್ಯುತ್ ಪೂರೈಕೆ ಕಂಪನಿಗಳ ವ್ಯಾಪ್ತಿಯಲ್ಲಿ ಈ ಸೌಲಭ್ಯವನ್ನು ಒದಗಿಸಲು ವಿ. ಸುನಿಲ್‌ಕುಮಾರ್ ನಿರ್ಧರಿಸಿದ್ದಾರೆ.

ಯೋಜನೆಯ ಲಾಭವೇನು?: ಈ ಯೋಜನೆಯಲ್ಲಿ ಲಭ್ಯ ಸೇವೆಗಳಿಗೆ ಈವರೆಗೆ ಆಫ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಇತ್ತು. ಇನ್ನು ಮುಂದೆ ಆನ್‌ಲೈನ್ ನೋಂದಣಿ ಮಾಡಿ, ತ್ವರಿತ ಮತ್ತು ಪಾರದರ್ಶಕವಾಗಿ ಸೇವೆ ಪಡೆಯಬಹುದು.

ವಿದ್ಯುತ್ ಮಾಪಕವನ್ನು (ಮೀಟರ್) ನಿಗದಿತ ಶುಲ್ಕ ಪಡೆದು ಕಂಪನಿಯ ವತಿಯಿಂದ ನೀಡಲಾಗುವುದು. ವಿದ್ಯುತ್ ಸಂಪರ್ಕ ಪಡೆಯಲು 3ರಿಂದ 90 ದಿನ ತಗಲುತ್ತಿತ್ತು, ಇನ್ನು ಮುಂದೆ 24 ಗಂಟೆಯ ಒಳಗೆ ಸಿಗಲಿದೆ. ಅಲ್ಲದೆ, ಕ್ಷೇತ್ರಾಧಿಕಾರಿ ಒಮ್ಮೆ ಮಾತ್ರ ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ಗುರುತಿನ ಚೀಟಿ, ವಿಳಾಸ ದಾಖಲೆ, ತಂತಿ ರೇಖಾ ಚಿತ್ರ ಹೀಗೆ ಕನಿಷ್ಠ ದಾಖಲೆಗಳನ್ನು ನೀಡಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬಹುದು. ಗ್ರಾಹಕರು ಆಯಾ ಕಂಪನಿಯ ವೆಬ್‌ಸೈಟ್‌ನಲ್ಲಿ ಅರ್ಜಿ ಸಂಖ್ಯೆ ನಮೂದಿಸಿ, ಅರ್ಜಿಯ ಪ್ರಗತಿ ಪರಿಶೀಲಿಸಬಹುದು. ಎಲ್ಲ ವಿಭಾಗಗಳಲ್ಲಿ ಜನಸ್ನೇಹಿ ಸೇವೆಗಳಿಗೆಂದೇ ಸಹಾಯವಾಣಿ ಕೇಂದ್ರ ತೆರೆಯಲಾಗುವುದು. ಸೇವೆಗಳಿಗೆ ಪಾವತಿಸಬೇಕಾದ ಶುಲ್ಕ ಮಾಹಿತಿಯನ್ನು ಎಸ್‌ಎಂಎಸ್ ಅಥವಾ ಇ-ಮೇಲ್ ಮೂಲಕ ತಿಳಿಸಲಾಗುವುದು ಎಂದು ಇಂಧನ ಇಲಾಖೆ ಮೂಲಗಳು ತಿಳಿಸಿವೆ.

ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ನಡೆದ ಜಗಳದಲ್ಲಿ ಅರ್ಬಾಜ್ (20) ಎಂಬಾತ ತನ್ನ ಸ್ನೇಹಿತನ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದು, ಆತನನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಿದ್ದಿಕ್ (20) ಕೊಲೆಯಾದ ಯುವಕ.

'ಸಿದ್ದಿಕ್ ಮತ್ತು ಅರ್ಬಾಜ್ ಆತ್ಮೀಯ ಗೆಳೆಯರು. ಒಂದೇ ಶಾಲೆಯಲ್ಲಿ ಓದಿದ್ದರು. ಡೇವಿಸ್ ರಸ್ತೆಯಲ್ಲಿ ವಾಸವಿದ್ದ ಅರ್ಬಾಜ್, ಪಾದಚಾರಿ ಮಾರ್ಗದ ಮೇಲೆ ಬಟ್ಟೆಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ. ಮಂಗಳವಾರ ರಾತ್ರಿ ಅರ್ಬಾಜ್‌ಗೆ ಕರೆ ಮಾಡಿದ್ದ ಸಿದ್ದಿಕ್, ಯಾವುದೋ ವಿಚಾರದ ಕುರಿತು ಮಾತನಾಡಬೇಕಿದೆ, ರಸಾದ್ ನಗರದ ರೋಲಿಂಗ್ ಮಿಲ್ ಬಳಿ ಬಾ ಎಂದು ತಿಳಿಸಿದ್ದ. ರಾತ್ರಿ 11.30ರ ಸುಮಾರಿಗೆ ಅರ್ಬಾಜ್ ಸ್ಥಳಕ್ಕೆ ಹೋಗಿದ್ದ. ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಇಬ್ಬರ ನಡುವಣ ಜಗಳ ತಾರಕಕ್ಕೇರಿತ್ತು. ಈ ವೇಳೆ ಸಿಟ್ಟಿಗೆದ್ದಿದ್ದ ಸಿದ್ದಿಕ್, ತನ್ನ ಬಳಿ ಇದ್ದ ಚಾಕುವಿನಿಂದ ಅರ್ಬಾಜ್ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದ. ಆತನ ಕೈಯಿಂದ ಚಾಕು ಕಿತ್ತುಕೊಂಡಿದ್ದ ಆರೋಪಿ ದೇಹದ ವಿವಿಧ ಭಾಗಗಳಿಗೆ ಇರಿದಿದ್ದ. ನೆಲಕ್ಕುರುಳಿದ್ದ ಸಿದ್ದಿಕ್‌ನ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದ. ಬಳಿಕ ಅಲ್ಲಿಂದ ಪರಾರಿಯಾಗಿದ್ದ. ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಕೆಲ ವರ್ಷಗಳ ಹಿಂದೆ ಸಿದ್ದಿಕ್ ಮತ್ತು ಅರ್ಬಾಜ್ ನಡುವೆ ಯಾವುದೋ ವಿಚಾರಕ್ಕೆ ಜಗಳ ನಡೆದಿತ್ತು. ಆಗ ಸ್ನೇಹಿತರು ಇಬ್ಬರನ್ನೂ ರಾಜಿ ಮಾಡಿಸಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದ್ದಾರೆ.

ನಗರದಲ್ಲಿ ಬುಧವಾರ ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೊಸ ಪದವಿ ಕೋರ್

ಹಂಚಿಕೆಯಾಗಿರುವ ಅನುದಾನ ವೆಚ್ಚದಲ್ಲಿ ಹಿಂದುಳಿದ ಐದು ಇಲಾಖೆಗಳು

ಬಳಕೆಯೇ ಆಗದ ₹21,331 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸೇರಿದಂತೆ ರಾಜ್ಯ ಸರ್ಕಾರದ ಐದು ಇಲಾಖೆಗಳು ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಏಳು ಯೋಜನೆಗಳಿಗೆ ಮೀಸಲಿಟ್ಟಿರುವ ಅನುದಾನದ ಬಳಕೆಯಲ್ಲಿ ಹಿಂದುಳಿದಿದ್ದು, ಸೆಪ್ಟೆಂಬರ್ ಅಂತ್ಯದ ವೇಳೆಗೆ ನಿಗದಿಪಡಿಸಿದ್ದ ಗುರಿಗೆ ಹೋಲಿಸಿದರೆ ಒಟ್ಟು ₹ 21,331.65 ಕೋಟಿ ಬಳಕೆಯಾಗದೆ ಉಳಿದಿದೆ.

ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕರ್ನಾಟಕ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಂಡಿಸಿದ ಅಂಕಿಅಂಶಗಳು ಇದನ್ನು ಬಹಿರಂಗಪಡಿಸಿವೆ. ಕೃಷಿ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳೂ ಈ ಪಟ್ಟಿಯಲ್ಲಿವೆ.

ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ₹ 552 ಕೋಟಿ ಒದಗಿಸಲಾಗಿತ್ತು. ಸೆಪ್ಟೆಂಬರ್ ಅಂತ್ಯದವರೆಗೂ ಆರೋಗ್ಯ ಇಲಾಖೆ ಈ ಅನುದಾನವನ್ನು ಬಳಕೆ ಮಾಡಿಲ್ಲ ಎಂಬ ಸಂಗತಿ ಸಭೆಯಲ್ಲಿ ಚರ್ಚೆಗೆ ಬಂತು.

ಪ್ರಧಾನಮಂತ್ರಿ ಕಿಸಾನ್ ಯೋಜನೆಗೆ ಪ್ರಸಕ್ತ ವರ್ಷ ₹ 2,120 ಕೋಟಿ ಅನುದಾನ ಒದಗಿಸಲಾಗಿದೆ. ಆರ್ಥಿಕ ವರ್ಷದ ಅರ್ಧ ಭಾಗ ಕಳೆದರೂ ಒಂದು ಪೈಸೆ ಕೂಡ ವೆಚ್ಚ ಮಾಡಿಲ್ಲ. ಇಂಧನ ಇಲಾಖೆಯಲ್ಲಿ ಪಿಂಚಣಿ ಪಾಲಿನ ಮೊತ್ತ ಭರಿಸಲು ₹ 1,000 ಕಾಯ್ದಿರಿಸಲಾಗಿದೆ. ಅದನ್ನೂ ಬಳಕೆ ಮಾಡಿಲ್ಲ. ಅನುದಾನ ಈಗಾಗಲೇ ಬಳಕೆಯಾಗಿದೆ.

ಬೆಂಗಳೂರು ಉಪನಗರ ರೈಲು ಯೋಜನೆಗೆ ಒದಗಿಸಿದ್ದ ₹ 950 ಕೋಟಿ ನಗರಾಭಿವೃದ್ಧಿ ಇಲಾಖೆ ಬಳಿ ಹಾಗೆಯೇ ಉಳಿದಿದೆ.

ವಸತಿ ಇಲಾಖೆಯಲ್ಲಿ ಪ್ರಧಾನಮಂತ್ರಿ ಆವಾಸ್ (ಗ್ರಾಮೀಣ), ಆಶ್ರಯ, ಬಸವ ಮತ್ತು ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಗಳಿಗೆ ₹ 1,600 ಕೋಟಿ ಅನುದಾನ ನೀಡಲಾಗಿದೆ. ಅದರಲ್ಲಿ ಶೇ 5ರಿಂದ 20ರವರೆಗೆ ಮಾತ್ರ ವೆಚ್ಚವಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ₹ 3,259.49 ಕೋಟಿ, ನಗರಾಭಿವೃದ್ಧಿ ಇಲಾಖೆ ₹ 2,658.52 ಕೋಟಿ ಮತ್ತು ಗೃಹ ಇಲಾಖೆ ₹ 2,398.85 ಕೋಟಿ ಉಳಿಸಿಕೊಂಡಿವೆ.

ಬಜೆಟ್‌ನಲ್ಲಿ ಒದಗಿಸಿದ್ದ ಮೊತ್ತದಲ್ಲಿ ₹ 77,883.78 ಕೋಟಿ ಬಳಕೆಯಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ವೆಚ್ಚದಲ್ಲಿ ಶೇ 28.23ರಷ್ಟು ಹೆಚ್ಚಳವಾಗಿದೆ. ₹ 500 ಕೋಟಿಗಿಂತ ಹೆಚ್ಚು ಅನುದಾನವಿರುವ 9 ಪ್ರಮುಖ ಯೋಜನೆಗಳಲ್ಲಿ ಶೇ 95ರಷ್ಟು ಅನುದಾನ ಈಗಾಗಲೇ ಬಳಕೆಯಾಗಿದೆ.

ಬೋಧಕರ ನೇಮಕದಲ್ಲಿ ಅಕ್ರಮ: ಪಿಎಸಿ ಆತಂಕ

ಬೆಂಗಳೂರು: ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳು ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿವೆ. ಈ ನೇಮಕಾತಿಗಳನ್ನು ರದ್ದು ಮಾಡಿ ಪಾರದರ್ಶಕವಾಗಿ ಪುನಃ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹೇಳಿದೆ.

ಸಮಿತಿಯ ಹಿರಿಯ ಸದಸ್ಯ ಎ.ಟಿ.ರಾಮಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ನೇಮಕಾತಿ ವಿಷಯ ಸುದೀರ್ಘವಾಗಿ ಪ್ರಸ್ತಾಪವಾಯಿತು. ಅಲ್ಲದೆ, ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಕುರಿತಂತೆ ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿಯಲ್ಲಿ ಉಲ್ಲೇಖವಾಗಿರುವ ಅಂಶಗಳನ್ನೂ ಚರ್ಚಿಸಲಾಯಿತು.

ಇಂತಹ ನೇಮಕಗಳಿಂದ ಶೈಕ್ಷಣಿಕ ಗುಣಮಟ್ಟವೇ ಹಾಳಾಗುತ್ತಿದೆ. ಈ ರೀತಿಯ ನೇಮಕ ಮಾಡಿದವರನ್ನು ಗುರುತಿಸಿ, ಕ್ರಮ ಜರುಗಿಸಬೇಕು. ಇವರಿಗೆ ವಿಶ್ವವಿದ್ಯಾಲಯ ಅನುದಾನ ಆಯೋಗ ನಿಗದಿ ಮಾಡಿದ ವೇತನ ಶ್ರೇಣಿ ಮತ್ತು ಎಲ್ಲ ಸೌಲಭ್ಯಗಳೂ ಬೇಕು. ಆದರೆ, ಬೋಧಕರ ನೇಮಕ ಮಾಡುವಾಗ ಆಯೋಗದ ಮಾರ್ಗಸೂಚಿಯನ್ನು ಗಾಳಿಗೆ ತೂರಿದೆ ಎಂದು ಸಮಿತಿ ಕಿಡಿಕಾರಿದೆ.

ನೇಮಕಾತಿಗೆ ಸಂಬಂಧಿಸಿದಂತೆ ಆಯೋಗದ ಯಾವುದೇ ಮಾರ್ಗಸೂಚಿಯನ್ನು ಪಾಲಿಸಲಿಲ್ಲ. ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಬೇಕು ಮತ್ತು ಆ ವಿಷಯವನ್ನು ಪ್ರಚಾರ ಮಾಡಬೇಕು. ಆನಂತರ ಆಯ್ಕೆ ಸಮಿತಿ ರಚಿಸಿ ಆ ಮೂಲಕ ನೇಮಕ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಬೇಕು. ಇದ್ಯಾವುದನ್ನೂ ಪಾಲಿಸದೇ, ರಾಜ್ಯಪಾಲರಿಗೆ ತಪ್ಪು ಮಾಹಿತಿ ನೀಡಿ ಅವರಿಂದ ಒಪ್ಪಿಗೆ ಪಡೆದಿರುವ ಸಾಧ್ಯತೆ ಇದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

ಕಾರ್ಯಾರಂಭವಾಗದ ಯಕೃತ್ತು ಕಸಿ ವಿಭಾಗ: ಹೈಕೋರ್ಟ್ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಆವರಣದಲ್ಲಿ ಜುಲೈ 5ರಂದು ಉದ್ಘಾಟನೆಗೊಂಡ ಶಸ್ತ್ರಚಿಕಿತ್ಸಾ ಗ್ಯಾಸ್ಟ್ರೋಎಂಟರಾಲಜಿ ಮತ್ತು ಯಕೃತ್ತು ಕಸಿ ವಿಭಾಗವನ್ನು ಇನ್ನೂ ಕಾರ್ಯಗತಗೊಳಿಸದ ರಾಜ್ಯ ಸರ್ಕಾರ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ವಿರುದ್ಧ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ವಕೀಲ ಎಂ.ಎನ್.ಉಮೇಶ್ ಅವರು ದಾಖಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ಮತ್ತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಸಂಸ್ಥೆಯ ನಿರ್ದೇಶಕ ಡಾ.ನಾಗೇಶ್ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ಎಂ.ಜ್ಯೋತಿ ಪ್ರಕಾಶ್ ಅವರು ನ್ಯಾಯಾಲಯಕ್ಕೆ ಖುದ್ದು ಹಾಜರಾಗಿದ್ದರು. 'ನಿಯಮಾನುಸಾರ ಸ್ಯಾನಿಟೈಸ್ ಮಾಡದ ಹೊರತು ಕಾರ್ಯಾರಂಭ ಮಾಡಲು ಸಾಧ್ಯವಿಲ್ಲ. ಇನ್ನೂ ಎರಡು ತಿಂಗಳ ಕಾಲ ಶುಚಿಗೊಳಿಸಬೇಕು' ಎಂದು ನಿರ್ದೇಶಕರು ತಿಳಿಸಿದರು.

'ರಾಜ್ಯ ಸರ್ಕಾರದ ಇಂತಹ ವಿಳಂಬವು ಬಡವರ ಜೀವಕ್ಕೆ ಅಪಾಯ ಉಂಟು ಮಾಡುತ್ತದೆಯೇ ಹೊರತು ಬೇರೇನೂ ಅಲ್ಲ' ಎಂದು ನ್ಯಾಯಾಲಯವು ಮೌಖಿಕವಾಗಿ ಅಭಿಪ್ರಾಯಪಟ್ಟಿತು.

ಮುಖ್ಯಾಂಶಗಳು

- ರಾಜ್ಯ ಸರ್ಕಾರದ ವಿಳಂಬವು ಬಡವರ ಜೀವಕ್ಕೆ ಅಪಾಯ–ಹೈಕೋರ್ಟ್ ಅಭಿಮತ
- ಸ್ಯಾನಿಟೈಸ್ ಮಾಡದೇ ಆರಂಭ ಸಾಧ್ಯವಿಲ್ಲ ಬಿಎಂಸಿಆರ್‌ಐ ನಿರ್ದೇಶಕ
- ಉದ್ದೇಶಪೂರ್ವಕ ವಿಳಂಬ, ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಹೈಕೋರ್ಟ್ ಕಿಡಿ

ಪ್ರಾಯಪಟ್ಟಿತು.

'ಸ್ವಚ್ಛಗೊಳಿಸುವ ಕೆಲಸವನ್ನು ಈವರೆಗೆ ಕೈಗೊಂಡಿಲ್ಲ. ಅದಕ್ಕೂ ನ್ಯಾಯಾಲಯದಿಂದ ಕಾಲಾವಕಾಶ ನೀಡುವ ತನಕ ಕಾಯುವುದೇಕೆ? ಇದನ್ನು ಗಮನಿಸಿದರೆ ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ. ಅಧಿಕಾರಿಗಳ ಕಾರ್ಯವೈಖರಿ ತೀರ ಹೀನಾಯವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

ಮುಂದಿನ ವಿಚಾರಣೆಗೆ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಜರಾಗಬೇಕು ಎಂದು ಸೂಚಿಸಿತು.

ಕಲಾ ಪ್ರದರ್ಶನ

ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಕಲಿಯುಗ್ 2.0' ಕಲಾ ಪ್ರದರ್ಶನವನ್ನು ಚಲನಚಿತ್ರ ನಟ ಶಿವರಾಜ ಕುಮಾರ್ ವೀಕ್ಷಿಸಿದರು. ಕಲ್ಯಾಣ್ ಜ್ಯುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕಲ್ಯಾಣ ರಾಮನ್, ರಿಷಿಕೇಶ್ ಕಲ್ಯಾಣ್, ಮಾನಸ ಕಲ್ಯಾಣ್, ಹಿರಿಯ ವರ್ಣ ಚಿತ್ರ ಕಲಾವಿದ ಡಾ.ರೋಶನ್ ಬಾಬಿ ಇದ್ದರು.

ರಾಜ್ಯ ಬಿಜೆಪಿ ಒಬಿಸಿ ಮೋರ್ಚಾ ಕಾರ್ಯಕರ್ತರ ಸಮಾವೇಶ ಸಮಾರಂಭ

ಜಾತಿ ಸಂಘಟನೆಯಿಂದ ಹಿಂದುತ್ವ ಗಟ್ಟಿ: ಕೆ.ಎಸ್. ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಸಂಘಟನೆ ಮೂಲಕ ಹಿಂದುತ್ವ ಮತ್ತು ಹಿಂದೂ ಸಮಾಜ ಗಟ್ಟಿಯಾಗುತ್ತದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ಅಭಿಪ್ರಾಯಪಟ್ಟರು.

ನಗರದ ಅಂಬೇಡ್ಕರ್ ಭವನದಲ್ಲಿ ಬುಧವಾರ ಬಿಜೆಪಿ ಒಬಿಸಿ ಮೋರ್ಚಾದ ಜಿಲ್ಲಾ ಪ್ರಮುಖರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಒಬಿಸಿ ಮೋರ್ಚಾ ಕಾರ್ಯಕರ್ತರು ಜಾತಿ ಸಂಘಟನೆಗಳಲ್ಲಿ ಹಿಂಜರಿಕೆ ಇಲ್ಲದೇ ತೊಡಗಿಸಿಕೊಳ್ಳಬೇಕು. ಇದರಿಂದ ಆಯಾ ಜಾತಿಗಳ ಸಬಲೀಕರಣಕ್ಕೆ ಅನುಕೂಲವಾಗುತ್ತದೆ ಎಂದರು.

'ಹಿಂದುಳಿದ ವರ್ಗಗಳಿಗೆ ಸೇರಿದ ಶೇ 80 ರಷ್ಟು ಜನ ಈಗ ಬಿಜೆಪಿಗೆ ಮತ ಹಾಕುತ್ತಾರೆ. ರಾಷ್ಟ್ರವಾದಿ ಮುಸ್ಲಿಮರೂ ಬಿಜೆಪಿಗೇ ಮತ ಹಾಕುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಳ್ಳೆಯ ಕೆಲಸಗಳನ್ನು ಮೆಚ್ಚಿಕೊಂಡಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ಸಣ್ಣ–ಪುಟ್ಟ ಜಾತಿಗಳ ಬೇಡಿಕೆಗಳನ್ನು ಆಲಿಸಿ ನಡೆಸಿದಾಗ ಹಿಂದುಳಿದ ಮತ್ತು ದಲಿತ ವರ್ಗಕ್ಕೆ ಸೇರಿದ ಮಠಗಳಿಗೆ ₹100 ಕೋಟಿ ಅನುದಾನ ನೀಡಿತ್ತು. ಇದರಿಂದ ಆ ಸಮುದಾಯಗಳ ಮಠಗಳು ಶಿಕ್ಷಣ ಸಂಸ್ಥೆಗಳು ಹಾಸ್ಟೆಲ್, ಆಸ್ಪತ್ರೆ ಸೇರಿ ಅನೇಕ ಅಭಿವೃದ್ಧಿ ಕಾರ್ಯ ಮಾಡಿವೆ. ಆ ಬಳಿಕ ಬಂದ ಸರ್ಕಾರಗಳು ಈ ಮಠಗಳಿಗೆ ಒಂದು ಪೈಸೆಯೂ ಕೊಟ್ಟಿಲ್ಲ' ಎಂದು ಕಿಡಿ ಕಾರಿದರು.

ಬೆಂಗಳೂರಿನಲ್ಲಿ ಬುಧವಾರ ಬಿಜೆಪಿ ರಾಜ್ಯ ಒಬಿಸಿ ಮೋರ್ಚಾ ಕಾರ್ಯಕರ್ತರ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ (ಎಡದಿಂದ) ಒಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ನೆ.ಲ ನರೇಂದ್ರಬಾಬು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್ ಈಶ್ವರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಅರುಣ್ ಕುಮಾರ್ ಮತ್ತು ವಿಧಾನಪರಿಷತ್ ಸದಸ್ಯ ರಘುನಾಥ ರಾವ್ ಮಲ್ಕಾಪುರೆ ಇದ್ದರು

'ನಾನು ನಂಬಿಕಸ್ಥರು ಎಂಬ ಕಾರಣಕ್ಕೇ ಜನ ನಮಗೆ ಚುನಾವಣೆಯಲ್ಲಿ ಮತ ಹಾಕುತ್ತಾರೆ. ದೇಶ ಮತ್ತು ಧರ್ಮವನ್ನು ಉಳಿಸುತ್ತಾರೆ ಎಂಬುದೇ ಜನರಿಗಿರುವ ನಂಬಿಕೆ' ಎಂದು ಈಶ್ವರಪ್ಪ ಹೇಳಿದರು.

ನ. 21 ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ಹಿಂದುಳಿದ ಸಮುದಾಯಗಳ ಸಮಾವೇಶ ಏರ್ಪಡಿಸಲಾಗುವುದು. ಇದರಲ್ಲಿ 224 ವಿಧಾನಸಭಾ ಕ್ಷೇತ್ರಗಳ ಪಕ್ಷದ 8 ಜನ ಪ್ರಮುಖರು ಭಾಗವಹಿಸುವರು. ಹಿಂದುಳಿದ ಸಮಾಜಗಳ ಮಾಜಿ ಸಂಸದರು, ಮಾಜಿ ಶಾಸಕರು, ವಿಧಾನಪರಿಷತ್ ಮಾಜಿ ಸದಸ್ಯರ ಭಾಗವಹಿಸಲಿದ್ದಾರೆ ಎಂದು ಈಶ್ವರಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ಮೋರ್ಚಾದ ರಾಜ್ಯ ಅಧ್ಯಕ್ಷ ನೆ.ಲ. ನರೇಂದ್ರಬಾಬು, ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್ ಮುಂತಾದವರು ಹಾಜರಿದ್ದರು.

'ಕುರುಬರು ಕೈಬಿಟ್ಟಿದ್ದರಿಂದ ಕಂಬಳಿ ಪ್ರಸ್ತಾಪ'

ಉಪಚುನಾವಣೆಯಲ್ಲಿ ಕಂಬಳಿ ವಿಷಯವನ್ನು ಮಾಜಿ ಮುಖ್ಯಮಂತ್ರಿ ಪ್ರಸ್ತಾಪಿಸಿದ್ದಾರೆ. ಅವರಿಗೆ ನಾಚಿಗೆ ಆಗಬೇಕು. ಕುರುಬರೂ ಅವರ ಕೈಬಿಟ್ಟಿರುವುದರಿಂದ ಅವರಿಗೆ ಕಂಬಳಿ ನೆನಪು ಬಂದಿದೆ. ಕನಕದಾಸರು, ಸಂಗೊಳ್ಳಿ ರಾಯಣ್ಣನ ನೆನಪೇ ಇವರಿಗೆ ಇರಲಿಲ್ಲ. ಬಿಜೆಪಿ ಸರ್ಕಾರ ಬಂದ ಮೇಲೆ ಅವರ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆರಂಭಿಸಿತು. ಕನಕದಾಸರ ಜಯಂತಿ ದಿನ ಸರ್ಕಾರಿ ರಜೆಯನ್ನೂ ಘೋಷಿಸಿತು. ಕನಕದಾಸರ ಸಿದ್ಧಾಂತವೇ ನಮ್ಮ ಪರಿವಾರದ ಸಿದ್ಧಾಂತ ಎಂದು ಈಶ್ವರಪ್ಪ ಹೇಳಿದರು.

'ಸುಕ್ರಜ್ಜಿ'ಗೆ ಅನಾರೋಗ್ಯ, ಆಸ್ಪತ್ರೆಗೆ ದಾಖಲು

ಕಾರವಾರ: ಜಾನಪದ ಗಾಯಕಿ ಸುಕ್ರಿ ಬೊಮ್ಮು ಗೌಡ ಅವರ ಆರೋಗ್ಯ ಬುಧವಾರ ಮತ್ತೆ ಹದಗೆಟ್ಟಿದೆ. ಸುಕ್ರಿ ಅವರಿಗೆ ಜಿಲ್ಲಾ ಬೊಮ್ಮುಗೌಡ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅಂಕೋಲಾದ ಬಡಿಗೇರಿಯಲ್ಲಿ ತಮ್ಮ ಮನೆಯಲ್ಲಿದ್ದ ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಕೂಡಲೇ ಅವರನ್ನು ಕಾರವಾರಕ್ಕೆ ಕರೆದುಕೊಂಡು ಬರಲಾಯಿತು. ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ ಎಂದು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಕೆಲವು ತಿಂಗಳ ಹಿಂದೆಯೂ ಅವರಿಗೆ ಜ್ವರ ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು.

ಆನ್‌ಲೈನ್ ಜೂಜು ನಿಷೇಧ: ಅರ್ಜಿ

ಬೆಂಗಳೂರು: ಪಣಕ್ಕಾಗಿ ಆಡುವ ಆನ್‌ಲೈನ್ ಜೂಜು ನಿಷೇಧಿಸುವ ಕರ್ನಾಟಕ ಪೊಲೀಸ್ ಕಾಯ್ದೆಯ ತಿದ್ದುಪಡಿ ಪ್ರಶ್ನಿಸಿ ಸಲ್ಲಿಕೆ ಆಗಿರುವ ಅರ್ಜಿಗಳನ್ನು ಹೈಕೋರ್ಟ್ ಬುಧವಾರ ವಿಚಾರಣೆ ನಡೆಸಿತು.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ, ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು. ಮಧ್ಯಂತರ ಪರಿಹಾರದ ಬದಲಿಗೆ ವಿಷಯವನ್ನು ಪೂರ್ಣ ಪ್ರಮಾಣದಲ್ಲಿ ಆಲಿಸುವುದು ಸೂಕ್ತ ಎಂದು ಆರಂಭದಲ್ಲಿ ಪೀಠ ಅಭಿಪ್ರಾಯಪಟ್ಟಿತು. 'ತಿದ್ದುಪಡಿ ಮಾಡಲಾದ ಕಾಯ್ದೆಯಡಿ ಪೊಲೀಸರು ಎಫ್‌ಐಆರ್ ದಾಖಲಿಸಿ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳದಿರಲು ಸಿದ್ಧರಿದ್ದಾರೆಯೇ' ಎಂದು ಕೇಳಿತು.

'ಮಧ್ಯಂತರ ತಡೆ ನೀಡಿದರೆ ಕ್ರಿಕೆಟ್ ಪಂದ್ಯಗಳ ಬೆಟ್ಟಿಂಗ್ ಪ್ರಕರಣಗಳನ್ನು ದಾಖಲಿಸಿಕೊಳ್ಳಲು ಅಡ್ಡಿಯಾಗಬಹುದು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ವಿವರಿಸಿದರು.

ಕರ್ನಾಟಕ ಪೊಲೀಸ್ ಕಾಯ್ದೆ–1963ಕ್ಕೆ ತಿದ್ದುಪಡಿ ತಂದಿರುವ ರಾಜ್ಯ ಸರ್ಕಾರ, ಹಣ ಕಳೆದುಕೊಳ್ಳಬಹುದಾದ ಆನ್‌ಲೈನ್ ಆಟಗಳನ್ನು ನಿಷೇಧಿಸಿದೆ. ಇದನ್ನು ಪ್ರಶ್ನಿಸಿ ಅಖಿಲ ಭಾರತ ಗೇಮಿಂಗ್ ಫೆಡರೇಷನ್ ಮತ್ತು ಇತರರು ಅರ್ಜಿ ಸಲ್ಲಿಸಿದ್ದಾರೆ. 'ಪೋಕರ್, ಚೆಸ್, ರಮ್ಮಿ, ಫ್ಯಾಂಟಸಿ ಇವು ಕೌಶಲದ ಆಟಗಳು. ವಿವಿಧ ನ್ಯಾಯಾಲಯಗಳ ಆದೇಶಗಳು ಇವುಗಳನ್ನು ಕೌಶಲದ ಆಟದ ಪಟ್ಟಿಗೆ ಸೇರಿಸಿವೆ' ಎಂದು ವಿವರಿಸಿದ್ದಾರೆ. ತಿದ್ದುಪಡಿ ಕಾಯ್ದೆಯನ್ನು 2021ರ ಸೆ.21ರಂದು ವಿಧಾನಸಭೆ ಅಂಗೀಕರಿಸಿತ್ತು. ಅ.4ರಂದು ರಾಜ್ಯಪಾಲರು ಒಪ್ಪಿಗೆ ನೀಡಿದ್ದು, ಅ.5ರಂದು ಅಧಿಸೂಚನೆ ಹೊರ ಬಿದ್ದಿದೆ.


ಕೋವಿಡ್
ಅಂಕಿ-ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ
ವಿಶ್ವ
ಭಾರತ
24.56ಕೋಟಿ ಒಟ್ಟು ಪ್ರಕರಣ
3.42 ಕೋಟಿ ಒಟ್ಟು ಪ್ರಕರಣ
ಸಕ್ರಿಯ ಪ್ರಕರಣ
1.80 ಕೋಟಿ
1.54 ಲಕ್ಷ
ಗುಣಮುಖ
22.26 ಕೋಟಿ
3.36 ಕೋಟಿ
ಸಾವು
49.84ಲಕ್ಷ
4.56 ಲಕ್ಷ
ದಿನದ ಮಾಹಿತಿ
ಹೊಸ ಪ್ರಕರಣ 4.29 ಲಕ್ಷ 16,315
ಗುಣಮುಖ 4 ಲಕ್ಷ 17,019
ಸಾವು 7,590 734
ಎಲ್ಲಿ ಹೆಚ್ಚು ಪ್ರಕರಣ
(ಹಿಂದಿನ 24 ಗಂಟೆಗಳಲ್ಲಿ)
ಪ್ರಯೋಜನ ಗ್ರಾಫಿಕ್ಸ್
69,634 ಅಮೆರಿಕ
40,947 ಬ್ರಿಟನ್
36,446 ರಷ್ಯಾ
ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು
(ಲಕ್ಷಗಳಲ್ಲಿ)
93.62 ಅಮೆರಿಕ
15.14 ಬ್ರಿಟನ್
8.69 ರಷ್ಯಾ
(* ರಾತ್ರಿ 12ರವರೆಗಿನ ಮಾಹಿತಿ)
ಎಲ್ಲಿ ಹೆಚ್ಚು ಸಾವು (ಒಟ್ಟು)
1.40 ಲಕ್ಷ ಮಹಾರಾಷ್ಟ್ರ
36,060 ತಮಿಳುನಾಡು
29,977 ಕೇರಳ
ಎಲ್ಲಿ ಹೆಚ್ಚು ಪ್ರಕರಣ
(ಲಕ್ಷಗಳಲ್ಲಿ)
66.05

ಸರ್ಕಾರಿ ನೌಕರರಿಗೆ ಶೇ10ರಷ್ಟು ತುಟ್ಟಿಭತ್ಯೆ ಹೆಚ್ಚಳ

ಒಂದನೇ ಪುಟದಿಂದ...

ಕೋವಿಡ್ ಕಾರಣಕ್ಕೆ ತಡೆಹಿಡಿದಿದ್ದ 2020ರ ಜನವರಿ, ಜುಲೈ ಮತ್ತು 2021ರ ಜನವರಿಯಲ್ಲಿ ನೀಡಬೇಕಾಗಿದ್ದ ಮೂರೂ ತುಟ್ಟಿಭತ್ಯೆಗಳನ್ನು ಸೇರಿಸಿ ಮೂಲವೇತನದ ಶೇ 10.25ರಷ್ಟು ಹೆಚ್ಚಿಸಿ, ಜುಲೈ 1ರಿಂದ ಅನ್ವಯವಾಗುವಂತೆ ಜುಲೈ 27ರಂದು ರಾಜ್ಯ ಸರ್ಕಾರ ಆದೇಶ ಮಾಡಿತ್ತು.

ಬೋಧಕ, ತತ್ಸಮಾನ ವೃಂದದ ಸಿಬ್ಬಂದಿಗೆ ತುಟ್ಟಿಭತ್ಯೆ: 2016ರ ಪರಿಷ್ಕೃತ ಯುಜಿಸಿ, ಐಸಿಎಆರ್, ಎಐಸಿಟಿಇ ವೇತನ ಶ್ರೇಣಿಯಲ್ಲಿರುವ ಬೋಧಕ ಮತ್ತು ತತ್ಸಮಾನ ವೃಂದದ ಸಿಬ್ಬಂದಿಗೂ ತುಟ್ಟಿಭತ್ಯೆಯನ್ನು ಇದೇ ಜುಲೈ 1ರಿಂದ ಅನ್ವಯವಾಗುವಂತೆ ಮೂಲ ವೇತನದ ಶೇ 28 ರಿಂದ ಶೇ 31ಕ್ಕೆ ಪರಿಷ್ಕರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ವಿಶ್ವವಿದ್ಯಾಲಯಗಳು, ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಪೂರ್ಣಕಾಲಿಕ ಸಿಬ್ಬಂದಿಗೆ ಆ ಆದೇಶ ಅನ್ವಯಿಸಲಿದೆ. ನಿವೃತ್ತ ನೌಕರರಿಗೆ ಈ ಆದೇಶ ಅನ್ವಯಿಸುವುದಿಲ್ಲ.

ರಸಗೊಬ್ಬರದ ಕೊರತೆ ಇಲ್ಲ: ಸಚಿವ ಖೂಬಾ

ಪ್ರಜಾವಾಣಿ ವಾರ್ತೆ

ಭಗವಂತ ಖೂಬಾ

ಬೆಂಗಳೂರು: 'ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಇಲ್ಲ. ಉಪಚುನಾವಣೆಯಲ್ಲಿ ಸೋಲಿನ ಭೀತಿಯಿಂದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಸುಳ್ಳು ಹೇಳಿ ರೈತರಲ್ಲಿ ಭೀತಿ ಹುಟ್ಟಿಸುತ್ತಿದ್ದಾರೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

ವಿಕಾಸೌಧದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಈಗ 6.05 ಲಕ್ಷ ಟನ್ ರಸಗೊಬ್ಬರದ ದಾಸ್ತಾನು ಇದೆ. ನವೆಂಬರ್ ಅಂತ್ಯದವರೆಗೂ ರೈತರ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತದೆ. ಅಷ್ಟರಲ್ಲಿ ಮತ್ತಷ್ಟು ರಸಗೊಬ್ಬರ ರಾಜ್ಯಕ್ಕೆ ಪೂರೈಕೆಯಾಗಲಿದೆ. ರೈತರು ಆತಂಕಕ್ಕೊಳಗಾಗಬೇಕಾದ ಅಗತ್ಯವಿಲ್ಲ' ಎಂದರು.

ರಾಜ್ಯದಲ್ಲಿ ಸದ್ಯ 2.27 ಲಕ್ಷ ಟನ್ ಯೂರಿಯಾ ದಾಸ್ತಾನಿದೆ. 28,420 ಟನ್ ಎಂಒಪಿ ರಸಗೊಬ್ಬರದ ದಾಸ್ತಾನಿದೆ. ಮೈಸೂರು ಭಾಗದಲ್ಲಿ ಯೂರಿಯಾ ಕೊರತೆ ಉಂಟಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆ ಭಾಗಕ್ಕೆ ಕೇಂದ್ರ ಸರ್ಕಾರದಿಂದ ತಕ್ಷಣದಲ್ಲಿ 3,000 ಟನ್ ಯೂರಿಯಾ ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

2021ರ ಅಕ್ಟೋಬರ್‌ನಿಂದ 2022ರ ಅಕ್ಟೋಬರ್‌ವರೆಗೆ ಕರ್ನಾಟಕದಲ್ಲಿ 16.94 ಲಕ್ಷ ಟನ್ ರಸಗೊಬ್ಬರಕ್ಕೆ ಬೇಡಿಕೆ ಇರಲಿದೆ ಎಂದು ಅಂದಾಜಿಸಲಾಗಿದೆ. ಅಷ್ಟೂ ಪ್ರಮಾಣದ ರಸಗೊಬ್ಬರವನ್ನು ಸರಿಯಾದ ಸಮಯಕ್ಕೆ ಪೂರೈಕೆ ಮಾಡಲಾಗುವುದು. ಕೇಂದ್ರ ಸರ್ಕಾರದ ಹಂಚಿಕೆಯಂತೆ ಆಯಾ ಜಿಲ್ಲೆಗಳಿಗೆ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಾಂಪ್ಲೆಕ್ಸ್ ರಸಗೊಬ್ಬರದ ಬಳಕೆ ಹೆಚ್ಚಾಗಿದೆ. ಕಾಂಪ್ಲೆಕ್ಸ್ ರಸಗೊಬ್ಬರದಿಂದ ಇಳುವರಿ ಹೆಚ್ಚಾಗುತ್ತಿದೆ. ಈ ಕಾರಣದಿಂದ ಡಿಎಪಿ ಬದಲಿಗೆ ಕಾಂಪ್ಲೆಕ್ಸ್ ಖರೀದಿಗೆ ಸೂಚಿಸಲಾಗುತ್ತಿದೆ. ಇದನ್ನು ರಾಜಕಾರಣಕ್ಕೆ ಬಳಸಿಕೊಳ್ಳುವುದು ಸರಿಯಲ್ಲ ಎಂದು ಖೂಬಾ ಹೇಳಿದರು.

ಯುಪಿಎ ಸರ್ಕಾರ ಕಾರಣ: 2008ರಲ್ಲಿ ರಸಗೊಬ್ಬರದ ಕೊರತೆಯಿಂದ ಹಾವೇರಿಯಲ್ಲಿ ಗೋಲಿಬಾರ್ ನಡೆದಿತ್ತು ಎಂದು ಸಿದ್ದರಾಮಯ್ಯ ಪದೇ ಪದೇ ಹೇಳುತ್ತಿದ್ದಾರೆ. ಆಗ ಕೇಂದ್ರದಲ್ಲಿ ಯುಪಿಎ ಸರ್ಕಾರ ಇತ್ತು. ಸಕಾಲಕ್ಕೆ ಗೊಬ್ಬರ ಪೂರೈಸದ ಕಾರಣದಿಂದ ದುರ್ಘಟನೆ ನಡೆದಿತ್ತು. ಅದನ್ನು ಸಿದ್ದರಾಮಯ್ಯ ಏಕೆ ಹೇಳುವುದಿಲ್ಲ ಎಂದು ಪ್ರಶ್ನಿಸಿದರು.

ಡಿಎಪಿ ಹೊರತಾಗಿ ಯಾವುದೇ ರಸಗೊಬ್ಬರದ ದರದಲ್ಲಿ ಹೆಚ್ಚಳ ಆಗಿಲ್ಲ ಎಂದರು.

ಆ.30ರಿಂದ 14 ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಭಾಗ ಸೇರಿದಂತೆ 14 ಜಿಲ್ಲೆಗಳಲ್ಲಿ ಇದೇ 30 ಮತ್ತು 31ರಂದು ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಇದೇ 30ರಿಂದ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಲಿದೆ. ಮುಂದಿನ ಎರಡು ದಿನಗಳವರೆಗೆ ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆ ಇರಲಿದ್ದು, ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ.

ಕೆಆರ್‌ಎಸ್ ಭರ್ತಿಗೆ ಕ್ಷಣಗಣನೆ: (ಮಂಡ್ಯ ವರದಿ): ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಕಾರಣ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಬುಧವಾರ ಸಂಜೆ ವೇಳೆಗೆ ಜಲಾಶಯದ ನೀರಿನ ಮಟ್ಟ 124.29 ಅಡಿ ತಲುಪಿದ್ದು, ಭರ್ತಿಗೆ ಕ್ಷಣಗಣನೆ ಆರಂಭವಾಗಿದೆ.

ಜಲಾಶಯ ಸಂಪೂರ್ಣ ಭರ್ತಿಯಾಗಲು ಕೇವಲ 0.51 ಅಡಿಯಷ್ಟೇ (ಗರಿಷ್ಠ ಮಟ್ಟ 124.80 ಅಡಿ) ಬಾಕಿ ಉಳಿದಿದ್ದು, ಗುರುವಾರ ಬೆಳಿಗ್ಗೆ ವೇಳೆಗೆ ಭರ್ತಿಯಾಗುವ ಸಾಧ್ಯತೆ ಇದೆ. ಯಾವುದೇ ಕ್ಷಣದಲ್ಲಿ ಜಲಾಶಯದಿಂದ ನೀರು ಹರಿಸುವ ಸಾಧ್ಯತೆ ಇದ್ದು, ನದಿ ತೀರದ ಜನರು ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಕಾವೇರಿ ನೀರಾವರಿ ನಿಗಮ ಈಗಾಗಲೇ ಎಚ್ಚರಿಕೆ ನಿಡಿದೆ. ಸುರಕ್ಷತೆ ದೃಷ್ಟಿಯಿಂದ ಶ್ರೀರಂಗಪಟ್ಟಣ ತಾಲ್ಲೂಕು ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ.

ತೋಟದ ಮನೆಗೆ ನುಗ್ಗಿದ ನೀರು: (ನಂಜನಗೂಡು ವರದಿ): ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದ ರಾಂಪುರ ನಾಲೆ ತುಂಬಿ ಹರಿದಿದ್ದು, ತಾಲ್ಲೂಕಿನ ತಾಂಡವಪುರದ ಲಕ್ಷ್ಮಣೇಗೌಡ ಅವರ ತೋಟದ ಮನೆ ಜಲಾವೃತಗೊಂಡಿದೆ.

ಇಲ್ಲಿರುವ ಕೋಳಿ ಫಾರಂ, ಕುರಿ ಶೆಡ್‌ಗೆ ನೀರು ನುಗ್ಗಿದೆ. 8 ಕುರಿಗಳು ಕೊಚ್ಚಿಕೊಂಡು ಹೋಗಿದ್ದು, ಇನ್ನೂ ಪತ್ತೆಯಾಗಿಲ್ಲ. ವರುಣಾ ಸಮೀಪದ ಪಿ.ಜಿ.ಹುಂಡಿ ಗ್ರಾಮದಲ್ಲಿ ಶಿವಪ್ಪ, ರಾಜಶೇಖರ್, ಗೌರಮ್ಮ ಎಂಬುವವರ ಮನೆಗಳ ಗೋಡೆ ಕುಸಿದಿವೆ.

ಹುಣಸೂರು ತಾಲ್ಲೂಕಿನ ಬನ್ನಿಕುಪ್ಪೆ ಪಂಚಾಯಿತಿಯ ಕುಪ್ಪೆಕೊಳಗಟ್ಟ ಗ್ರಾಮದಲ್ಲಿ ರಮೇಶ್ ಅವರ ತಂಬಾಕು ಬ್ಯಾರನ್ ಮತ್ತು ರವಿ ಅವರ ಮನೆ ಕುಸಿದಿವೆ.

ಸೂಳೆಕೆರೆ ಕೋಡಿ ಬಿದ್ದಿದ್ದರಿಂದ ತ್ಯಾವಣಿಗೆ-ಚಿರಡೋಣಿ ರಸ್ತೆಯ ನಡುವಿನ ಕೆಳ ಸೇತುವೆಯನ್ನು ಬುಧವಾರ ಸಂಜೆ ದಾಟುತ್ತಿದ್ದ ಯುವಕರೊಬ್ಬರು ಹಳ್ಳದ ನೀರಿನಲ್ಲಿ ಕೊಚ್ಚಿಹೋಗಿದ್ದಾರೆ.

ನೀರು ಪಾಲಾಗಿರುವವರು ಕುಳಗಟ್ಟೆ ಗ್ರಾಮದ ಶಿವು (25) ಎನ್ನಲಾಗಿದೆ. ಸುದ್ದಿ ತಿಳಿದು ಬಸವಾಪಟ್ಟಣ ಠಾಣೆಯ ಪೊಲೀಸರು ಸ್ಥಳಕ್ಕೆ ಬಂದು ಹುಡುಕಾಡಿದ್ದಾರೆ. ರಾತ್ರಿಯವರೆಗೂ ಶಿವು ಬಗ್ಗೆ ಸುಳಿವು ಸಿಕ್ಕಿರಲಿಲ್ಲ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.29	12,534	3,658
ಹಾರಂಗಿ	2,859	2,858.23	540	1,291
ಕಬಿನಿ	2,284	2,283.46	2,100	2,000
ಹೇಮಾವತಿ	2,922	2,910.61	2,665	3,681
ಲಿಂಗನಮಕ್ಕಿ	1,819	1,815.15	3,319	4,365
ಸೂಪಾ (ಮೀ)	564	556.33	1,926	1,485
ಮಾಣಿ	594.36	587.06	-	-
ತುಂಗಭದ್ರಾ	1,633	1,633	22,384	28,377
ಮಲಪ್ರಭಾ	2,079.50	2,078.80	-	994
ಘಟಪ್ರಭಾ	2,175	2,174.05	-	1,605
ಭದ್ರಾ	186	186	3,782	3,782
ಆಲಮಟ್ಟಿ (ಮೀ)	519.60	519.40	-	11,736
ನಾರಾಯಣಪುರ (ಮೀ)	492.25	491.68	10,040	10,400

*ನೆಲಮಟ್ಟದಿಂದ

ದೀಪಾವಳಿ ನಂತರ ಧರ್ಮಸ್ಥಳದಲ್ಲಿ ವಿಶೇಷ ಸೇವೆಗೆ ಅವಕಾಶ

ಉಜಿರೆ: 'ಧರ್ಮಸ್ಥಳ ಮಂಜುನಾಥೇಶ್ವರ ದೇವಸ್ಥಾನದಲ್ಲಿ ನವಂಬರ್ 4ರಿಂದ ರಂಗಪೂಜೆ, ಬೆಳ್ಳಿ ರಥೋತ್ಸವ, ಪಲ್ಲಕ್ಕಿ ಉತ್ಸವ ಸೇರಿದಂತೆ ವಿಶೇಷಪೂಜೆ, ಉತ್ಸವಾದಿ ಸೇವೆಗಳು ಆರಂಭವಾಗಲಿವೆ' ಎಂದು ಪ್ರಕಟಣೆ ತಿಳಿಸಿದೆ.

ವಿಶೇಷ ದಿನಗಳನ್ನು ಹೊರತುಪಡಿಸಿ, ಉಳಿದ ದಿನಗಳಲ್ಲಿ ಬೆಳಿಗ್ಗೆ 6ರಿಂದ ಮಧ್ಯಾಹ್ನ 2.30ರವರೆಗೆ ಹಾಗೂ ಸಂಜೆ 5ರಿಂದ ರಾತ್ರಿ 8.30ರವರೆಗೆ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗೆ 9945725511 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 08/2021–22 ದಿನಾಂಕ: 22–10–2021

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಡಬ್ಲೂ–1ರ ಪ್ರಕಾರ ಆರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.2.00 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ. 18.96 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 17–11–2021 ಸಮಯ 17.00) ಗಂಟೆಯವರೆಗೆ ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂ೨/ಹಿಸನಿ/ಹಾಸನ/ಎಂಸಿಎ/477/2021–22

KRIBHCO
Cooperative and beyond...

ಕರ್ನಾಟಕ ರಾಜ್ಯದಲ್ಲಿ ಹೆಚ್&ಟಿ ಗುತ್ತಿಗೆದಾರರ ಪೂರ್ವಾರ್ಹತೆ

ರೈಲುಮಾರ್ಗಗಳಲ್ಲಿ ಬ್ಲಾಕ್ ರೇಕ್‌ಗಳ ಮೂಲಕ ತಲುಪುವ 25/45/50 ಕೆ.ಜಿ. ತೂಕದ ಹೆಚ್‌ಡಿಪಿಇ/ಬಿಪಿಪಿಪಿ ಚೀಲಗಳಲ್ಲಿ ರಸಗೊಬ್ಬರಗಳ ವಿಲೇವಾರಿ, ನಿರ್ವಹಣೆ ಮತ್ತು ಸಾಗಾಣಿಕೆಗಾಗಿ, ಉಗ್ರಾಣಗಳಲ್ಲಿ ಅವುಗಳ ನಿರ್ವಹಣೆಗಾಗಿ ಮತ್ತು ಅವುಗಳನ್ನು ವಿವಿಧ ರೈಲು ಮಂಡಿಗಳಲ್ಲಿರುವ ಸಹಕಾರಿ ರಿಟೈಲ್ ಕೇಂದ್ರಗಳಿಗೆ/ಫೀಡರ್ ಗೋದಾಮುಗಳಿಗೆ ರವಾನಿಸಲು, ಇತ್ಯಾದಿ ಕಾರ್ಯನಿರ್ವಹಣೆಗೆ ಸಂಬಂಧಿತ ನಿರ್ವಹಣೆ ಹಾಗೂ ಸಾಗಾಣಿಕೆ ಗುತ್ತಿಗೆದಾರರ ಪೂರ್ವಾರ್ಹತೆ/ನೋಂದಣಿಗಾಗಿ ಕ್ರಿಭ್ಕೋ ಇವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ/ಪ್ರತಿಷ್ಠಿತ ಮತ್ತು ಆರ್ಥಿಕವಾಗಿ ಉತ್ತಮವಾಗಿರುವ ಹಾಗೂ ಸಾಬೀತುಗೊಂಡ ಸಾಮರ್ಥ್ಯವುಳ್ಳ ಹೆಚ್&ಟಿ ಗುತ್ತಿಗೆದಾರರು ಸ್ಟೇಟ್ ಮಾರ್ಕೆಟಿಂಗ್ ಮ್ಯಾನೇಜರ್, ಕರ್ನಾಟಕ ಇವರಿಂದ ಅಗತ್ಯ ದಾಸ್ತಾವೇಜುಗಳನ್ನು ಪಡೆದುಕೊಳ್ಳಬಹುದು ಅಥವಾ ಈ ಕೆಳಗೆ ಉಲ್ಲೇಖಿತ ನಮ್ಮ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು 17.11.2021 ರಂದು ಸಂಜೆ 5.00 ಗಂಟೆಯೊಳಗೆ ಸಲ್ಲಿಸುವುದು.

ಒಂದು ವೇಳೆ ಯಾವುದೇ ರೀತಿಯ ಸ್ಪಷ್ಟೀಕರಣ ಬೇಕಾದಲ್ಲಿ ಎಲ್ಲಾ ಕೆಲಸದ ದಿನಗಳಂದು ಬೆಳಿಗ್ಗೆ 9.30 ರಿಂದ ಸಂಜೆ 6.00 ಗಂಟೆಯೊಳಗೆ ಎಸ್‌ಎಂಎಂ, ಕ್ರಿಭ್ಕೋ ಇವರನ್ನು ಸಂಪರ್ಕಿಸಬಹುದು. ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ ಮತ್ತು/ಅಥವಾ ಸಮಯ ಮುಂದೂಡುವ/ವಿಸ್ತರಿಸುವ ಹಕ್ಕುಗಳನ್ನು ತನ್ನ ಸಂಪೂರ್ಣ ವಿವೇಚನೆಯ ಮೇರೆಗೆ ಕ್ರಿಭ್ಕೋ ಕಾಯ್ದಿರಿಸಿಕೊಂಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕ್ರಿಭ್ಕೋ ನಿರ್ಣಯವೇ ಅಂತಿಮವಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಗುತ್ತಿಗೆದಾರರು ಕೂಡ ಕಡ್ಡಾಯವಾಗಿ ಮೇಣ ಪೂರ್ವಾರ್ಹತೆಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಸದರಿ ಜಾಹೀರಾತನ್ನು, ಅರ್ಜಿ, ಅಂಡರ್‌ಟೇಕಿಂಗ್ ಮತ್ತು ಅಫಿಡವಿಟ್ ನಮೂನೆಗಳ ಸಮೇತ ನಮ್ಮ ವೆಬ್‌ಸೈಟ್‌ನಲ್ಲಿ ಕೂಡ ಪ್ರಕಟಿಸಲಾಗಿದೆ: www.kribhco.net.

ಸ್ಟೇಟ್ ಮ್ಯಾನೇಜರ್ (ಮಾರ್ಕೆಟಿಂಗ್), ಕೃಷಿಕ ಭಾರತಿ ಕೋ–ಆಪರೇಟಿವ್ ಅಮಿಟೆಡ್.,
ಕೇರಾಫ್ ಕೆಎಸ್‌ಸಿಎಂಎಫ್, ಮುಖ್ಯ ಕಛೇರಿ, ನೇ ಮಹಡಿ, ನಂ.೩, ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು-೫೬೦ ೦೫೨
ದೂರವಾಣಿ ನಂ. ೦೮೦-೨೨೨೫೩೬೭೩, ೨೨೨೫೨೩೭ (ಕ)

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ರಾಹುಲ್ ದ್ರಾವಿಡ್ ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತುದಾರರಾಗಿ ನೇಮಕಗೊಂಡರೆ ತಂಡದ ಸಾಧನೆ ಇನ್ನಷ್ಟು ಉತ್ತಮಗೊಳ್ಳುವುದೆ?

QR ಕೋಡ್ ಸ್ಕ್ಯಾನ್ ಮಾಡಿ ಅಥವಾ
bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560001. ದೂರವಾಣಿ: 080–22961016/22131385,
ಇ–ಮೇಲ್: registrarbcu@gmail.com

ಇಂಡೆಂಟ್ ಸಂಖ್ಯೆ: ಬೆಂನವಿ/2021–22/ಐಎನ್‌ಡಿ25 ದಿನಾಂಕ: 26–10–2021

ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಮಾತ್ರ)

1) ಕಾಮಗಾರಿಯ ಹೆಸರು: **ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡುವ ಬಗ್ಗೆ.** 2) ಇ.ಎಂ.ಡಿ: **ರೂ. 1,62,500/–.** 3) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06–11–2021, 12.00 ಗಂಟೆಯವರೆಗೆ.** 4) ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ: **08–11–2021, 11.00 ಗಂಟೆಗೆ, ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.** 5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **10–11–2021, 16.00 ಗಂಟೆಯವರೆಗೆ.** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **11–11–2021, 16.30 ಗಂಟೆಗೆ.** 7) ಹಣಕಾಸು ಬಿಡ್ ತೆರೆಯುವ ದಿನಾಂಕ: **15–11–2021, 16.00 ಗಂಟೆಗೆ.**

ಸೂಚನೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಪಾವತಿಸುವುದು.

ವಾಸಾಸಂ೨/ಬಿಂ.ನ/ಆಡ್ಮಿರ್ನೋ/1991/2021–22 ಸಹಿ/– ಕುಲಸಚಿವರು

ಕೋವಿಡ್-೧೯. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸವದತ್ತಿ ಯಲ್ಲಮ್ಮಾ ಪುರಸಭೆ ಕಾರ್ಯಾಲಯ
ಸವದತ್ತಿ - 5911 26, ಜಿಲ್ಲೆ ಬೆಳಗಾವಿ.
ದೂರವಾಣಿ: 08330-222226, ಇಮೇಲ್: itstaff_ulb_saundatti@yaho

ತಾಳ್ಮೆ, ಪರಿಶ್ರಮದಿಂದ ಸಾಧನೆ..

ಸಂದರ್ಶನ: ಶಿ.ಗು. ಹಿರೇಮಠ

ಹುನಗುಂದ ತಾಲ್ಲೂಕಿನ ಕೂಡಲಸಂಗಮದ ಸಮೀಪದ ಕಟಗೂರ ಗ್ರಾಮದ ಮಮತಾ ಹೊಸಗೌಡರ ಅವರು ದಾವಣಗೆರಿ ಜಿಲ್ಲಾ ಉಪವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2014ರಲ್ಲಿ 17ನೇ ರ‍್ಯಾಂಕ್‌ನೊಂದಿಗೆ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಆಲಮಟ್ಟಿ ಅಣೆಕಟ್ಟು ಪ್ರದೇಶದಲ್ಲಿರುವ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿದ ಇವರು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಬಾಹ್ಯವಾಗಿಯೇ ಪದವಿ ಪೂರೈಸಿದ್ದಾರೆ.

ಬೀಳಗಿ ತಾಲ್ಲೂಕಿನ ಮನ್ನಿಕೇರಿ ಗ್ರಾಮದಲ್ಲಿ ಹತ್ತು ವರ್ಷ ಪ್ರಾಥಮಿಕ ಶಾಲೆ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಒಂದು ಕಡೆ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತ, ಇನ್ನೊಂದೆಡೆ ಮನೆ, ಸಂಸಾರವನ್ನು ತೂಗಿಸುತ್ತ ಕೆಎಎಸ್ ಪರೀಕ್ಷೆಗೆ ಸಿದ್ಧರಾಗಿ ಯಶಸ್ವಿಯಾಗಿ ಇಂದಿನ ಯುವತಿಯರಿಗೆ ಮಾದರಿಯಾಗಿದ್ದಾರೆ.

● ನೀವು ಪಡೆದ ಶಿಕ್ಷಣದ ಬಗ್ಗೆ ಒಂದಿಷ್ಟು ವಿವರಿಸುತ್ತೀರಾ?

ನನ್ನ ಸ್ವಂತ ಊರು ಹುನಗುಂದ ತಾಲ್ಲೂಕಿನ ಕಟಗೂರು. ನಮ್ಮ ತಂದೆಯವರು ಆಲಮಟ್ಟಿಯ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ನೌಕರಿ ಮಾಡುತ್ತಿದ್ದರು. ನಾನು ಒಂದನೇ ತರಗತಿಯಿಂದ ಏಳರವರೆಗೆ ಆಲಮಟ್ಟಿಯ (ಡ್ಯಾಂ) ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಹರ್ಡೇಕರ್ ಮಂಜಪ್ಪ ಪ್ರೌಢಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಓದಿದೆ. ಬಾಗಲಕೋಟೆಯ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪಿಯುಸಿ ಅಧ್ಯಯನದ ನಂತರ ಇಳಕಲ್ಲಿನ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಡಿಎಡ್ ಅಧ್ಯಯನ ಮಾಡಿದೆ. 2005ರಲ್ಲಿ ಬೀಳಗಿ ತಾಲ್ಲೂಕಿನ ಮನ್ನಿಕೇರಿ ಗ್ರಾಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ನೇಮಕವಾದೆ. ಬಿಎ ಪದವಿ ಮತ್ತು ಬಿಇಡಿ ಶಿಕ್ಷಣವನ್ನು ದೂರಶಿಕ್ಷಣದಲ್ಲೇ ಅಧ್ಯಯನ ಮಾಡಿದೆ.

● ಸ್ಪರ್ಧಾತ್ಮಕ ಪರೀಕ್ಷೆ ಕಡೆಗೆ ಯಾವಾಗ ಆಸಕ್ತಿ ಮೂಡಿತು?

ಪಿಯುಸಿಯಲ್ಲಿ ವಿಜ್ಞಾನ ಆಯ್ಕೆ ಮಾಡಿಕೊಂಡ ನಾನು ಎಂಜಿನಿಯರಿಂಗ್ ಅಥವಾ ಮೆಡಿಕಲ್ ಮಾಡುವ ಆಸೆಯಿದ್ದರೂ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡೆ. ನನ್ನ ಬಹಳಷ್ಟು ಸ್ನೇಹಿತರು ಎಂಜಿನಿಯರ್ ಮತ್ತು ಡಾಕ್ಟರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಗ ನಾನು ಎಲ್ಲೋ ಎಡವಿದ್ದೇನೇನೋ ಅನಿಸುತ್ತಿತ್ತು. ಆಗ ನನಗೆ ಅಂಥ ಅವಕಾಶವಿಲ್ಲದಿದ್ದರೂ ಕೆಎಎಸ್ ಮತ್ತು ಐಎಎಸ್ ಪರೀಕ್ಷೆ ತೆಗೆದುಕೊಂಡು ಉನ್ನತ ಹುದ್ದೆಗೆ ಏರಬಹುದಲ್ಲ ಎಂದೆನಿಸಿತು. ಅದಲ್ಲದೇ ಸಮಾಜ ಸೇವೆ ಮಾಡಬೇಕೆಂಬ ತುಡಿತ ನನ್ನಲ್ಲಿತ್ತು. ನನ್ನಲ್ಲಿ ಇನ್ನೂ ಓದುವ ಸಾಮರ್ಥ್ಯವಿದೆ ಎಂದೆನಿಸಿತು. ಆಗ ನಾನು 2014ರಲ್ಲಿ ಕೆಎಎಸ್ ಪರೀಕ್ಷೆಗೆ ಸಿದ್ಧಳಾದೆ.

● ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಾ ಕೆಎಎಸ್ ಪರೀಕ್ಷೆ ಬರೆಯುವುದು ಕಷ್ಟವೆನಿಸಲಿಲ್ಲವೇ?

ನಾನು ಕೆಎಎಸ್ ಪರೀಕ್ಷೆ ಬರೆಯಲೇಬೇಕೆಂಬ ಅದಮ್ಯ ಉತ್ಸಾಹದಲ್ಲಿದ್ದೆ. ಒಂದು ಕಡೆ ಮನೆಯ ಜವಾಬ್ದಾರಿ, ಇನ್ನೊಂದು ಕಡೆ ಶಾಲೆಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಬೇಕಿತ್ತು. ಓದಿನ ಜೊತೆಗೆ ನನ್ನ ನೌಕರಿಗೂ ನ್ಯಾಯ ಒದಗಿಸಬೇಕಾಗಿತ್ತು. ಮನೆ ಮತ್ತು ಶಾಲೆ ಎರಡನ್ನೂ ನಿಭಾಯಿಸಬೇಕೆಂದು ನಾನು ಎದೆಗುಂದಲಿಲ್ಲ. ನನ್ನ ಪತಿಯಾದ ಜಗದೀಶ ಪಾಟೀಲ ನನ್ನ ಬೆಂಬಲಕ್ಕೆ ನಿಂತರು. ನಿತ್ಯ ಅವರು ನನಗೆ ಅಧ್ಯಯನ ಮಾಡಲು ಸಹಾಯ ಮಾಡುತ್ತಿದ್ದರು. ಮನೆಯಲ್ಲಿ ನನ್ನ ಎರಡು ಮಕ್ಕಳನ್ನು ಸಂಭಾಳಿಸುತ್ತಾ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ಜೀವನ ಸಾಗಿಸಬೇಕಾಗಿತ್ತು. ನಾನು ಶಿಕ್ಷಕಿಯಾಗಿದ್ದರಿಂದ ಶನಿವಾರ, ಭಾನುವಾರ ರಜೆ ಸಿಗುತ್ತಿತ್ತು. ಅಲ್ಲದೆ ಅಕ್ಟೋಬರ್ ಮತ್ತು ಬೇಸಿಗೆ ರಜೆಗಳನ್ನು ಅಧ್ಯಯನಕ್ಕಾಗಿಯೇ ಮೀಸಲಿಡುತ್ತಿದ್ದೆ. ನನ್ನ ಸಹೋದರರಾದ ಮಹೇಶ, ಮಹಾಂತೇಶ, ರಮೇಶ ರೊಟ್ಟಿ ಅವರ ಸಹಕಾರವನ್ನು ನಾನು ಎಂದಿಗೂ ಮರೆಯಲಾರೆ.

● ಮೊದಲ ಪ್ರಯತ್ನದಲ್ಲೇ ಕೆಎಎಸ್ ಪರೀಕ್ಷೆ ಪಾಸಾಗಿದ್ದೀರಿ. ಅದು ಹೇಗೆ ಸಾಧ್ಯವಾಯಿತು?

ನನ್ನ ಪತಿಯವರು ಮೊದಮೊದಲು ನನಗೆ ಕೆಎಎಸ್ ಪರೀಕ್ಷೆಗೆ ಸಮ್ಮತಿಸಲಿಲ್ಲ. 'ಶಿಕ್ಷಕಿಯಾಗಿದ್ದಿಯಾ. ಮತ್ತೇಕೆ ಬೇರೆ ಹುದ್ದೆ?' ಎಂಬ ಪ್ರಶ್ನೆಯನ್ನು ನನ್ನ ಮುಂದಿಟ್ಟರು. ನನ್ನ ಮನದ ಇಂಗಿತ ಮತ್ತು ನನ್ನ ಗುರಿಯನ್ನು ತಿಳಿಸಿದಾಗ ಸಂತೋಷಪಟ್ಟು ಪ್ರೋತ್ಸಾಹಿಸಿದರು. ನನ್ನ ಸಹೋದರರು ನನಗೆ ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ತಂದುಕೊಡುವಲ್ಲಿ ನೆರವಾದರು. ಸಮಯದ ಹೊಂದಾಣಿಕೆ ಮಾಡಿಕೊಂಡೆ. ನನ್ನ ವಿಷಯ ಗ್ರಾಮೀಣಾಭಿವೃದ್ಧಿ. ಆ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಪ್ರಾರಂಭಿಸಿದೆ. ಅನುಕ್ರಮವಾಗಿ ಓದುತ್ತಾ ಹೋದೆ. ಅಷ್ಟೇ ಅಲ್ಲದೆ ಪರೀಕ್ಷೆಗೆ ಮುಖ್ಯವಾಗಿ ಏನು ಬೇಕು ಎಂಬುದನ್ನು ಅರಿತೆ. ಪಠ್ಯಕ್ರಮವನ್ನು ಮುಂದಿಟ್ಟುಕೊಂಡು ನಿರಂತರ ಅಧ್ಯಯನ ನಡೆಸಿದೆ. ನಿತ್ಯ ಪ್ರಚಲಿತ ವಿದ್ಯಮಾನಗಳನ್ನು ಬರೆದಿಟ್ಟುಕೊಳ್ಳುತ್ತಿದ್ದೆ. ಎಷ್ಟು ಗಂಟೆ ಓದಿಕೊಳ್ಳಬೇಕು ಎಂಬುದಕ್ಕಿಂತ ಏನು ಮತ್ತು ಯಾವುದನ್ನು ಓದಿಕೊಳ್ಳಬೇಕು ಎಂಬುದು ಬಹಳ ಮುಖ್ಯ.

ಮಮತಾ ಹೊಸಗೌಡರ

● ಒಂದು ಕಡೆ ನೌಕರಿ, ಇನ್ನೊಂದೆಡೆ ಸಂಸಾರದ ನೊಗ.. ನಿಮಗೆ ಕಷ್ಟವಾಗಲಿಲ್ಲವೆ ?

ಎರಡನ್ನೂ ನಿಭಾಯಿಸಿಲು ಮೊದಲಿಗೆ ಸ್ವಲ್ಪ ಕಷ್ಟವೆನಿಸಿತು. ಸಮಯದ ಹೊಂದಾಣಿಕೆ ಮಾಡಿಕೊಂಡೆ. ಮೊಬೈಲ್, ದೂರದರ್ಶನ, ಸಾಮಾಜಿಕ ಜಾಲತಾಣದಿಂದ ದೂರವಿದ್ದೆ. ಎಲ್ಲಕ್ಕಿಂತ ಮುಖ್ಯವಾಗಿ ನಾನು ಪಾಸಾಗಲೇಬೇಕೆಂದು ದೃಢನಿರ್ಧಾರ ಮಾಡಿದ್ದೆ. ಅದಕ್ಕೆ ತಕ್ಕಂತೆ ಪ್ರತಿಯೊಂದನ್ನು ನಿಭಾಯಿಸುತ್ತಾ ನಡೆದೆ. ಎಷ್ಟೇ ತೊಂದರೆ ಬಂದರೂ ಧೃತಿಗೆಡಲಿಲ್ಲ. ಮನೆಯವರ ಸಹಕಾರ ಮತ್ತು ಪ್ರೋತ್ಸಾಹವಿರದಿದ್ದರೆ ಖಂಡಿತ ನನಗೆ ನನ್ನ ಗುರಿ ತಲುಪಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ತಾಯಿಯವರು ನನ್ನ ಸಂಸಾರ ಜೊತೆ ಇದ್ದು ನನಗೆ ಓದಲು ಅವಕಾಶ ನೀಡಿದರು. ನನ್ನ ಮನೆಯ ಪ್ರತಿಯೊಬ್ಬರ ಸಹಕಾರವನ್ನು ಮನದುಂಬಿ ನೆನೆಯುತ್ತೇನೆ. ನಾನು ತಹಶೀಲ್ದಾರ್ ಆಗಬೇಕೆಂದಿದ್ದೆ. ಪ್ರಸ್ತುತ ದಾವಣಗೆರಿ ಉಪವಿಭಾಗಾಧಿಕಾರಿಯಾಗಿ ಕಾರ್ಯನಿರ್ವಸುತ್ತಿದ್ದೇನೆ. ಅದು ನನಗೆ ಹೆಮ್ಮೆ ಎನಿಸುತ್ತದೆ.

● ಇಂದಿನ ಸ್ಪರ್ಧಾರ್ಥಿಗಳಿಗೆ ನೀವು ಕೊಡುವ ಸಲಹೆ ಏನು ?

ಇಂದಿನ ವಿದ್ಯಾರ್ಥಿಗಳು ಕೆಎಎಸ್, ಐಎಎಸ್ ಮತ್ತು ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂಬ ಉತ್ಸಹದಲ್ಲಿರುತ್ತಾರೆ. ನಾವು ಕೈ ಇಟ್ಟ ತಕ್ಷಣ ದೊರೆಯಲಾರದು. ಅದಕ್ಕೆ ತಾಳ್ಮೆ ಮತ್ತು ಕಠಿಣ ಪರಿಶ್ರಮ ಅಗತ್ಯ. ಸ್ಪರ್ಧಾರ್ಥಿಗಳು ಆದಷ್ಟು ಸಾಮಾಜಿಕ ಜಾಲತಾಣಗಳಿಂದ ದೂರವಿರುವುದು ಒಳ್ಳೆಯದು. ಪರೀಕ್ಷೆ ದೃಷ್ಟಿಕೋನದಿಂದ ಮಾತ್ರ ಇಂಟರ್‌ನೆಟ್ ಬಳಸಬೇಕು. ಅನವಶ್ಯಕವಾಗಿ ನಾವು ನೆಟ್ ಬಳಸುತ್ತಾ ಕುಳಿತರೆ ಕಾಲಹರಣವಾಗುತ್ತದೆ. ಕೆಎಎಸ್ ಪಾಸಾಗಬೇಕೆಂಬ ಆಸೆಯಿದ್ದರೂ ಅದು ನೆರವೇರದಿದ್ದರೆ ನಿರಾಸೆಯಾಗಬಾರದು. ನಮ್ಮ ಅಧ್ಯಯನ ಎಂದಿಗೂ ವ್ಯರ್ಥವಾಗುವುದಿಲ್ಲ. ಉನ್ನತ ಗುರಿ ಹೊಂದಿರಬೇಕು. ಆದರೆ ಫಲಗೊಡದಿದ್ದರೆ ಸಿಕ್ಕ ಅವಕಾಶವನ್ನು ಕೈ ಚೆಲ್ಲದೆ ಸದುಪಯೋಗಪಡಿಸಿಕೊಳ್ಳಬೇಕು.



ಬ್ಯಾಂಕಿಂಗ್ ಪರೀಕ್ಷೆ

ಭಾಷಾ ಮಾಧ್ಯಮ ಆಯ್ಕೆ ಹೇಗೆ?

ಎ.ಬಿ. ಚೂರಿ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಲು ಮೊದಲೇ ಸಿದ್ಧತೆ ಮಾಡಿಕೊಳ್ಳುವ ಅವಶ್ಯಕತೆ ಇದೆ. ಹಾಗಾಗಿ ವಿದ್ಯಾರ್ಥಿಗಳು ಪರೀಕ್ಷೆಗೂ ಮೊದಲು ಹಾಗೂ ಪರೀಕ್ಷೆಗೂ ಮೊದಲು ಈ ಕೆಳಗಿನ ಕ್ರಮಗಳನ್ನು ಅನುಸರಿಸುವುದು ಅವಶ್ಯ. ಆ ಮೂಲಕ ಯಶಸ್ಸಿನ ಹಾದಿಯನ್ನು ಸುಲಭವಾಗಿ ಕಂಡುಕೊಳ್ಳಬಹುದು.

ಇತರೆ ಅಭ್ಯರ್ಥಿಗಳೊಂದಿಗೆ ಹೋಲಿಸಿಕೊಳ್ಳದಿರಿ: ಅಭ್ಯರ್ಥಿ ಪರೀಕ್ಷೆಗೆ ತಯಾರಿ ನಡೆಸುವಾಗ ಮಾಡುವ ಅತಿ ದೊಡ್ಡ ತಪ್ಪು ಇದು. ಉದಾಹರಣೆಗೆ ತಮ್ಮ ಸಹಪಾಠಿ ಕೇವಲ ಒಂದೇ ಪ್ರಯತ್ನದಲ್ಲಿ ಎರಡರಿಂದ ಮೂರು ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡು ತನಗಿಷ್ಟದ ಒಂದು ಉದ್ಯೋಗ ಪಡೆದ ಬಗ್ಗೆ ಅಥವಾ ಪರೀಕ್ಷಾ ಕೇಂದ್ರದಿಂದ ಹೊರಬರುವಾಗ ಇತರೆ ಅಭ್ಯರ್ಥಿಗಳು, ಸ್ನೇಹಿತರು ಗರಿಷ್ಠ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಎಂಬುದನ್ನು ತಿಳಿದು ನಕಾರಾತ್ಮಕವಾಗಿ ಯೋಚಿಸದಿರಿ. ಅಥವಾ ಇದನ್ನೇ ಗಮನದಲ್ಲಿಟ್ಟುಕೊಂಡು ಮುಂಬರುವ ಪರೀಕ್ಷೆಗಳಲ್ಲಿ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೆ ಸಿಲುಕಿ ಅಂದಾಜಿನ ಮೇಲೆ ಉತ್ತರಿಸದಿರಿ. ಕಾರಣ ಪರೀಕ್ಷೆಯಲ್ಲಿ ಋಣಾತ್ಮಕ ಅಂಕಗಳು ಇರುತ್ತವೆ ಎಂಬುದು ಗಮನದಲ್ಲಿರಲಿ. ಅಷ್ಟಕ್ಕೂ ಅವರು ಗರಿಷ್ಠ ಪ್ರಶ್ನೆಗಳಿಗೆ ಸರಿ ಉತ್ತರವನ್ನೇ ನೀಡಿದ್ದಾರೆ ಎಂದಿಟ್ಟುಕೊಳ್ಳಿ. ಅದು ಅವರ ಪ್ರಯತ್ನ ಹಾಗೂ ಪರಿಶ್ರಮದ ಫಲ. ಎಲ್ಲ ಅಭ್ಯರ್ಥಿಗಳ ಐಕ್ಯೂ ಮಟ್ಟ ಒಂದೇ ರೀತಿ ಇರಲು ಸಾಧ್ಯವಿಲ್ಲ. ಹಾಗಾಗಿ ಇದನ್ನು ಸಕಾರಾತ್ಮಕವಾಗಿಯೇ ತೆಗೆದುಕೊಂಡು ನಿಮ್ಮ ಪ್ರಯತ್ನ ಮುಂದುವರೆಸಿ. ಇನ್ನು ಕೆಲವು ಅಭ್ಯರ್ಥಿಗಳು ಗರಿಷ್ಠ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಎಂಬ ವಿಷಯಕ್ಕೆ ಬಂದರೆ ಅಂಕಗಳು ನಿರ್ಧಾರವಾಗುವುದು ಗರಿಷ್ಠ ಪ್ರಶ್ನೆಗಳಿಗೆ ಉತ್ತರಿಸಿದ ಆಧಾರದ ಮೇಲೆ ಅಲ್ಲ, ಬದಲಾಗಿ ಅದರಲ್ಲಿ ನಿಖರವಾಗಿ ಉತ್ತರಿಸಿದ ಪ್ರಶ್ನೆಗಳು ಎಷ್ಟು ಎಂಬುದರ ಆಧಾರದ ಮೇಲೆ. ಹಾಗಾಗಿ ನೀವು ಆತ್ಮವಿಶ್ವಾಸದಿಂದ ವೇಗ ಹಾಗೂ ನಿಖರತೆಯೊಂದಿಗೆ ಪ್ರಶ್ನೆಗಳಿಗೆ ಉತ್ತರಿಸಿ. ಅಂದಾಜಿನ ಮೇಲೆ ಪ್ರಶ್ನೆಗಳಿಗೆ ಉತ್ತರಿಸಿ ಋಣಾತ್ಮಕ ಅಂಕಗಳಿಗೆ ಅವಕಾಶ ಮಾಡಿಕೊಡಬೇಡಿ.

ಬ್ಯಾಂಕ್ ಪರೀಕ್ಷೆಯ ಭಾಷಾ ಮಾಧ್ಯಮ ಆಯ್ಕೆ ಮಾಡುವಲ್ಲಿ ಎಡವದಿರಿ: ಪ್ರಾದೇಶಿಕ ಭಾಷೆಗಳಲ್ಲಿ ಬ್ಯಾಂಕ್ ಪರೀಕ್ಷೆಗಳನ್ನು ಬರೆಯಬೇಕು ಎಂಬ ಬಹುಬೇಡಿಕೆಯ ಬಹಳ ವರ್ಷಗಳ ಕನಸು ಈಗ ನನಸಾಗಿದೆ. ಅದರಂತೆ ಅಭ್ಯರ್ಥಿಯು ಕನ್ನಡ ಮಾಧ್ಯಮದಲ್ಲಿಯೂ ಪರೀಕ್ಷೆ ತೆಗೆದುಕೊಳ್ಳಬಹುದು. ಇದು ಎಲ್ಲರಿಗೂ ಎಷ್ಟರಮಟ್ಟಿಗೆ ಸಹಕಾರಿ ಎಂಬುದು ಅವರವರ ಭಾಷಾ ಸಾಮರ್ಥ್ಯದ ಮೇಲೆ ನಿರ್ಧಾರವಾಗುವಂತಹದ್ದು. ಉದಾಹರಣೆಗೆ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್ ಹಾಗೂ ರೀಸನಿಂಗ್ ವಿಭಾಗದಲ್ಲಿ ಇರುವ ಸುಲಭ ಇಂಗ್ಲಿಷ್ ಪದ ಬಳಕೆಯ ಪ್ರಶ್ನೆಗಳನ್ನು ಅಪ್ಪಟ ಕನ್ನಡಕ್ಕೆ ಅನುವಾದಿಸಿದಾಗ ಅಭ್ಯರ್ಥಿಯು ಪ್ರಶ್ನೆಗಳನ್ನು ವೇಗವಾಗಿ ಗ್ರಹಿಸಲು ಸಾಧ್ಯವಾಗದೆ ಇರಬಹುದು. ಇಂತಹ ಸಂದರ್ಭಗಳಲ್ಲಿ ಅಭ್ಯರ್ಥಿಯು ಪುನಃ ಇಂಗ್ಲಿಷ್ ವಿಭಾಗಕ್ಕೆ ಬದಲಾಗಿ (ಸ್ವಿಚ್ ಆಗಿ) ಪ್ರಶ್ನೆಯನ್ನು ಗ್ರಹಿಸಿ ಉತ್ತರಿಸಬೇಕಾಗುತ್ತದೆ. ನಂತರ ಮುಂದಿನ ಪ್ರಶ್ನೆಗೆ ಉತ್ತರಿಸಲು ಹೋದಾಗ ಮತ್ತೆ ಪ್ರಶ್ನೆಗಳು ಕೊನೆಯವರೆಗೂ ಕನ್ನಡದಲ್ಲಿಯೇ ಪ್ರದರ್ಶಿಸಲ್ಪಡುತ್ತವೆ. ಆಗ ಮತ್ತೆ ಪದಬಳಕೆ ಅರ್ಥವಾಗದಿದ್ದಲ್ಲಿ ಪ್ರತಿ ಪ್ರಶ್ನೆಗೂ ಇಂಗ್ಲಿಷ್ ವಿಭಾಗಕ್ಕೆ ಸ್ವಿಚ್ ಆಗಿ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಹಾಗಾಗಿ ನೀವು ಪೂರ್ವನಿಯೋಜಿತವಾಗಿ (By Default) ಯಾವ ಮಾಧ್ಯಮದಲ್ಲಿ ಪರೀಕ್ಷೆಯನ್ನು ತೆಗೆದುಕೊಂಡರೆ ನನಗೆ ಅನುಕೂಲ ಎಂಬುದನ್ನು ಕೆಲವು ಅಣಕು ಪರೀಕ್ಷೆಗಳನ್ನು ಆ ಮಾಧ್ಯಮದಲ್ಲಿ (ಉದಾಹರಣೆಗೆ ಕನ್ನಡ) ತೆಗೆದುಕೊಂಡು ನಂತರ ಯಾವ ಮಾಧ್ಯಮದಲ್ಲಿ ಪರೀಕ್ಷೆ ತೆಗೆದುಕೊಂಡರೆ ಉತ್ತಮ ಎಂಬುದನ್ನು ನಿರ್ಧರಿಸಿ.

ಒಟ್ಟಿನಲ್ಲಿ ವಯಸ್ಸಿನ ಮಿತಿ, ಸ್ಪರ್ಧೆಯ ಕಠಿಣತೆಯ ಬಗ್ಗೆ ಅಂದಾಜಿಸದೆ ಇತರೆ ಅಭ್ಯರ್ಥಿಗಳ ಜೊತೆಗೆ ಹೋಲಿಸಿಕೊಳ್ಳದೆ ಪ್ರಶ್ನೆಗೆ ಉತ್ತರಿಸಲು ಅನುಕೂಲಕರವಾದ ಪರೀಕ್ಷಾ ಭಾಷಾ ಮಾಧ್ಯಮ ಆಯ್ಕೆ ಮಾಡಿಕೊಂಡು ಪರೀಕ್ಷೆಯಲ್ಲಿ ಅರ್ಹರಾಗಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ಕೇಂದ್ರ ಲೋಕಸೇವಾ ಆಯೋಗದಲ್ಲಿ ಹುದ್ದೆಗಳು

ಕೇಂದ್ರ ಲೋಕಸೇವಾ ಆಯೋಗವು ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸ್ತಕ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆಗಳು:** ಅಸಿಸ್ಟೆಂಟ್ ಪ್ರೊಫೆಸರ್, ಅಸಿಸ್ಟೆಂಟ್ ಡೈರೆಕ್ಟರ್, ಸೀನಿಯರ್ ಸೈಂಟಿಫಿಕ್ ಆಫೀಸರ್, ಮೆಡಿಲ್ ಆಫೀಸರ್ ಸೇರಿದಂತೆ ಇತರೆ...
- **ಹುದ್ದೆಗಳ ಸಂಖ್ಯೆ:** 64
- **ಸ್ಥಳ:** ಭಾರತದಲ್ಲೆಡೆ
- **ವಿದ್ಯಾರ್ಹತೆ:** ಆಸಕ್ತ ಅಭ್ಯರ್ಥಿಗಳು ಬಿಇ, ಬಿಟೆಕ್, ಎಂಎಸ್‌ಸಿ ಸ್ನಾತಕೋತ್ತರ ಪದವಿ ಮುಗಿಸಿರಬೇಕು.
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ನವೆಂಬರ್ 11, 2021
- **ಹೆಚ್ಚಿನ ಮಾಹಿತಿಗೆ:** https://upsc.gov.in/

ವೆಸ್ಟರ್ನ್ ಕೋಲ್‌ಫೀಲ್ಡ್ ಲಿಮಿಟೆಡ್‌ನಲ್ಲಿ ಹುದ್ದೆಗಳು

ಪಶ್ಚಿಮ ಕೋಲ್‌ಫೀಲ್ಡ್ ಲಿಮಿಟೆಡ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸ್ತಕರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ಮೈನಿಂಗ್ ಸರ್‌ದಾರ್ ಹಾಗೂ ಸರ್ವೇಯರ್
- **ಹುದ್ದೆಗಳ ಸಂಖ್ಯೆ:** 211
- **ಸ್ಥಳ:** ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರ
- **ವಿದ್ಯಾರ್ಹತೆ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು 10ನೇ ತರಗತಿ ಅಥವಾ ಡಿಪ್ಲೊಮಾ ಮುಗಿಸಿರಬೇಕು.
- **ವಯೋಮಿತಿ:** ಕನಿಷ್ಠ 18 ವರ್ಷ ಹಾಗೂ ಗರಿಷ್ಠ 30 ವರ್ಷ.
- **ಆಯ್ಕೆ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ನವೆಂಬರ್ 20, 2021
- **ಹೆಚ್ಚಿನ ಮಾಹಿತಿಗೆ:** http://www.westerncoal.in/

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ ಸ್ಪರ್ಧಾತ್ಮಕ ಪರೀಕ್ಷೆ

ಕರ್ನಾಟಕದಲ್ಲಿ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ನಡೆಸಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ಸಾಮಾನ್ಯ ಜ್ಞಾನ ವಿಭಾಗದಲ್ಲಿರುವ 'ಕರ್ನಾಟಕದಲ್ಲಿ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ ವಿಷಯಗಳು' ಕುರಿತಾದ ಬಹುಆಯ್ಕೆ ಪ್ರಶ್ನೆಗಳು.

1. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ರಾಜ್ಯದ ದಟ್ಟ ಅರಣ್ಯಗಳ ಶೇ 60ರಷ್ಟು ಭಾಗವು ಪಶ್ಚಿಮ ಘಟ್ಟದ ಪ್ರಾಂತ್ಯಗಳ ಪ್ರದೇಶದಲ್ಲಿದೆ. ನಮ್ಮ ರಾಜ್ಯದ ಭೌಗೋಳಿಕ ಪ್ರದೇಶ 1,91,791 ಚ. ಕಿ.ಮೀ ಯಷ್ಟಿದೆ. ಅದ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಬದುಕಿನ ಕೊನೆಯವರೆಗೂ ನಮ್ಮನ್ನು ಕರೆದೊಯ್ಯುವುದು
ಧೈರ್ಯವೇ ವಿನಾ ಅದೃಷ್ಟವಲ್ಲ. -ರಸ್ಕಿನ್ ಬಾಂಡ್

ಪ್ರಾದೇಶಿಕ ಸಾರಿಗೆ ಕಚೇರಿ ಸೇವೆ ಹೆಚ್ಚು ಜನಸ್ನೇಹಿಯಾಗಬೇಕಿದೆ

ಅತಿಯಾದ ಭ್ರಷ್ಟಾಚಾರಕ್ಕೆ ಹೆಸರಾಗಿರುವ ಸರ್ಕಾರಿ ಕಚೇರಿಗಳಲ್ಲಿ ಒಂದೆನಿಸಿರುವ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿನ (ಆರ್‌ಟಿಒ) ಲಂಚಗುಳಿತನ ಕಡಿಮೆ ಮಾಡಬೇಕು ಮತ್ತು ಈ ಕಚೇರಿಗಳನ್ನು ಜನಸ್ನೇಹಿಯಾಗಿಸಬೇಕು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿವೆ. ಲಂಚದ ಹಾವಳಿಯಿಂದ ಬೇಸತ್ತು ಹೋಗಿರುವ ನಾಗರಿಕರಲ್ಲಿ ತುಸು ವಿಶ್ವಾಸ ಮೂಡಿಸುವ ಉಪಕ್ರಮಗಳಂತೆ ಇವು ಕಾಣಿಸುತ್ತಿವೆ. ಹೊಸ ವಾಹನ ಖರೀದಿಸಿದಾಗ ಅದನ್ನು ಆರ್‌ಟಿಒ ಕಚೇರಿಗೆ ಕೊಂಡೊಯ್ದು ನೋಂದಣಿ ಮಾಡಿಸಬೇಕಾಗಿತ್ತು. ಅದಕ್ಕೀಗ ವಿದಾಯ ಹಾಡಿದ್ದು, ಆನ್‌ಲೈನ್ ಮೂಲಕವೇ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ನವೆಂಬರ್ 1ರಿಂದ ಹೊಸ ವ್ಯವಸ್ಥೆ ಕರ್ನಾಟಕದಲ್ಲಿ ಜಾರಿಯಾಗಲಿದೆ. ಕೇಂದ್ರ ಮೋಟಾರು ವಾಹನಗಳ ನಿಯಮಾವಳಿಗೆ ತಂದಿರುವ ತಿದ್ದುಪಡಿ ಆಧರಿಸಿ ಈ ಹೊಸ ನಿಯಮ ಅನುಷ್ಠಾನಕ್ಕೆ ಬರಲಿದೆ. ಸೆಕೆಂಡ್ ಹ್ಯಾಂಡ್ (ಬಳಸಿದ) ವಾಹನಗಳ ಮಾರಾಟಕ್ಕೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡುವ ಅಧಿಕಾರವನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಸಿಎಸ್‌ಸಿ ಇ-ಗವರ್ನೆನ್ಸ್ ಇಂಡಿಯಾ ಲಿಮಿಟೆಡ್‌ಗೆ (ಸಿಎಸ್‌ಸಿ ಎಸ್‌ಪಿವಿ) ನೀಡಲಾಗಿದೆ. ದೇಶದಾದ್ಯಂತ ಈ ಸೇವೆ ನೀಡಲು ಸಿಎಸ್‌ಸಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಜೊತೆ ಸಹಭಾಗಿತ್ವ ಹೊಂದಿದೆ. ಸೆಕೆಂಡ್ ಹ್ಯಾಂಡ್ ವಾಹನ ಖರೀದಿಸಿದರೆ ವಾಹನ ಮಾಲೀಕತ್ವದ ವರ್ಗಾವಣೆಗೆ ಮುನ್ನ ಎನ್‌ಒಸಿ ಪಡೆಯುವುದು ಕಡ್ಡಾಯ. ಆಯಾ ಜಿಲ್ಲೆಯೊಳಗೆ ವಾಹನದ ಕೈ ಬದಲಾವಣೆಯಾದರೆ ಮಾಲೀಕತ್ವದ ವರ್ಗಾವಣೆ ಸಲೀಸಾಗಿತ್ತು. ಪಕ್ಕದ ಜಿಲ್ಲೆ ಅಥವಾ ಬೇರೆ ರಾಜ್ಯದವರಿಗೆ ಮಾರಿದಲ್ಲಿ ಎನ್‌ಒಸಿ ಪಡೆಯುವುದು ಹರಸಾಹಸದ ಕೆಲಸವಾಗಿತ್ತು. ವಿಳಂಬ ಮತ್ತು ಲಂಚಕ್ಕೆ ದಾರಿ ಮಾಡಿಕೊಡುತ್ತಿತ್ತು. ಅದನ್ನು ತಪ್ಪಿಸಲು ಕೇಂದ್ರವು ಸಿಎಸ್‌ಸಿ ಮೂಲಕ ಹೊಸ ಉಪಕ್ರಮ ಕೈಗೊಂಡಿದೆ. ಹೊಸ ಪದ್ಧತಿ ಚಾಲ್ತಿಗೆ ತಂದಿರುವುದರಿಂದ ಸೆಕೆಂಡ್ ಹ್ಯಾಂಡ್ ವಾಹನ ಖರೀದಿಸುವ ಗ್ರಾಹಕರು, ಆ ವಾಹನದ ಮೇಲೆ ಅಡಮಾನ ಸಾಲ ಇದೆಯೇ, ಅಪಘಾತದ ಮೊಕದ್ದಮೆಗಳು ಇವೆಯೇ ಎಂಬುದನ್ನು ಆನ್‌ಲೈನ್ ಮೂಲಕವೇ ಪರಿಶೀಲಿಸುವ ಅವಕಾಶವೂ ಇದರಿಂದ ಲಭ್ಯವಾಗಲಿದೆ.

ಸಂಬಂಧಪಟ್ಟ ಅಧಿಕಾರಿಗಳ ವರ್ಗಾವಣೆ ಅಥವಾ ಅವರಿಗೆ ಆಯಕಟ್ಟಿನ ಜಾಗ ನೀಡುವಾಗ ಚಾಲ್ತಿಯಲ್ಲಿರುವ 'ಜಾಲ'ವನ್ನು ಮೊದಲು ನಿಷ್ಕ್ರಿಯಗೊಳಿಸಿದರೆ ವ್ಯವಸ್ಥೆಯ ಸುಧಾರಣೆಯಲ್ಲಿ ಮೊದಲ ಹೆಜ್ಜೆ ಇಟ್ಟಂತಾಗುತ್ತದೆ

ಆದರೆ, ಇಂತಹ ಸುಧಾರಣಾ ಕ್ರಮಗಳು ಅನೇಕ ಬಾರಿ ಜನಸಾಮಾನ್ಯರಿಗಿಂತ ವಾಹನ ಮಾರಾಟಗಾರರ ಹಿತಾಸಕ್ತಿಗೆ ಪೂರಕವಾಗಿವೆಯೇ ಎಂಬ ಸಂಶಯವೂ ಮೂಡುತ್ತದೆ. ಏಕೆಂದರೆ, ಹೊಸ ವಾಹನ ಖರೀದಿಸಿದವರು ನೋಂದಣಿಗೆ ಪ್ರಾದೇಶಿಕ ಸಾರಿಗೆ ಕಚೇರಿಗೆ ತಮ್ಮ ವಾಹನ ಕೊಂಡೊಯ್ದು ಅಲ್ಲಿ ಇನ್‌ಸ್ಪೆಕ್ಟರ್ ಸಹಿ ಪಡೆದ ಬಳಿಕವೇ ಅದನ್ನು ತಮ್ಮದಾಗಿಸಿಕೊಳ್ಳಬೇಕು ಎಂಬುದು ನಿಯಮ. ವಾಹನ ಮಾರಾಟಗಾರ ಸಂಸ್ಥೆಗಳು ವಾಹನದ ಒಟ್ಟಾರೆ ಖರೀದಿ ಮೌಲ್ಯದಲ್ಲೇ ಆರ್‌ಟಿಒ 'ಖರ್ಚು' ಸೇರಿಸಿ ವಸೂಲಿ ಮಾಡುತ್ತಿವೆ. ಅಲ್ಲದೆ, ಸಾರಿಗೆ ಕಚೇರಿಗೆ ವಾಹನ ಕೊಂಡೊಯ್ಯದೇ ನೋಂದಣಿ ಪ್ರಕ್ರಿಯೆ ಪೂರೈಸಿಕೊಳ್ಳಲು ಬೇಕಾದ 'ವ್ಯವಸ್ಥೆ'ಯನ್ನು ಕೆಲವು ಸಂಸ್ಥೆಗಳು ಮಾಡಿಕೊಂಡಿವೆ ಎಂಬ ಆರೋಪದಲ್ಲೂ ಹುರುಳಿಲ್ಲದೇ ಇಲ್ಲ. ಆನ್‌ಲೈನ್ ನೋಂದಣಿ ವ್ಯವಸ್ಥೆಯು ಮೇಲ್ನೋಟಕ್ಕೆ ಸುಧಾರಣೆ ಕ್ರಮ ಎನಿಸಿದರೂ ಇದರಿಂದ ಗ್ರಾಹಕರಿಗೆ ನೇರವಾಗಿ ಸಿಗುವಂತಹದು ಏನೂ ಇಲ್ಲ. ಆನ್‌ಲೈನ್ ಮೂಲಕವೇ ನೋಂದಣಿ ಪದ್ಧತಿ ಅನುಷ್ಠಾನ ಆದ ಬಳಿಕ ಸರ್ಕಾರಿ ಶುಲ್ಕವನ್ನು ಮಾತ್ರ ಹಿಡಿದುಕೊಂಡು ಆರ್‌ಟಿಒ 'ಖರ್ಚನ್ನು' ಗ್ರಾಹಕರಿಗೆ ಬಿಟ್ಟುಕೊಡಲು ವಾಹನ ಮಾರಾಟ ಮಾಡುವ ಸಂಸ್ಥೆಗಳು ಮುಂದಾದರೆ, ಆಗಷ್ಟೇ ಗ್ರಾಹಕರಿಗೆ ಲಾಭವಾದೀತು. ಇಂತಹ ಮೇಲ್ನೋಟದ ಸುಧಾರಣೆಗಿಂತ ಸಾರಿಗೆ ಕಚೇರಿಗಳಲ್ಲಿನ ಲಂಚದ ಹಾವಳಿಯನ್ನು ಕೊನೆಗಾಣಿಸ ಬೇಕಾದ ತುರ್ತು ಇದೆ. ಕರ್ನಾಟಕದ ಯಾವುದೇ ಪ್ರಾದೇಶಿಕ ಸಾರಿಗೆ ಕಚೇರಿಗೆ ಹೋದರೂ ಅಕ್ಕ-ಪಕ್ಕದಲ್ಲಿ ಮಧ್ಯವರ್ತಿಗಳ ಹತ್ತಾರು ಕಚೇರಿಗಳನ್ನು ಕಾಣಬಹುದು. ಕಲಿಕಾ ಪರವಾನಿಗಿ, ಚಾಲನಾ ಪರವಾನಿಗಿ (ಡಿಎಲ್) ಪಡೆಯಲು ಆನ್‌ಲೈನ್‌ನಲ್ಲೇ ಪರೀಕ್ಷೆ ಬರೆಯುವುದು, ಡಿಎಲ್ ಪಡೆಯಲು ಸಮಯ ನಿಗದಿ ಮಾಡುವುದನ್ನು ಆನ್‌ಲೈನ್‌ನಲ್ಲೇ ಮಾಡುವುದು ಕಡ್ಡಾಯ. ಅದಕ್ಕಾಗಿ ತಂತ್ರಾಂಶವನ್ನು ಸರ್ಕಾರ ಸಿದ್ಧಪಡಿಸಿದೆ. ಆದರೆ, ಈ ನ್ಯಾಯ ಮಾರ್ಗದಲ್ಲಿ ಹೋದರೆ ಅಷ್ಟು ಸುಲಭವಾಗಿ ಡಿಎಲ್ ಸಿಗುವುದಿಲ್ಲ; ನೇರವಾಗಿ ಹೋದರೆ ಡಿಎಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಮೂರ್ನಾಲ್ಕು ಬಾರಿಯಾದರೂ ಕಸರತ್ತು ಮಾಡಬೇಕಾಗುತ್ತದೆ. ಅದೇ ಮಧ್ಯವರ್ತಿಗಳ ಮೂಲಕ ಹೋದರೆ ಹನಿ ಬೆವರಿಳಿಸದೇ ಡಿಎಲ್‌ಗೆ ಸಂಬಂಧಿಸಿದ ಪ್ರಕ್ರಿಯೆ ಮುಗಿಸಿ ಹೊರ ಬರುವ ವ್ಯವಸ್ಥೆ ಇದೆ. ಇದರ ಜತೆಗೆ ಬಸ್, ಲಾರಿಗಳಂತಹ ವಾಹನಗಳಿಗೆ ದೃಢತೆ ಪ್ರಮಾಣ ಪತ್ರ (ಎಫ್‌ಸಿ), ರಹದಾರಿ ಪತ್ರ (ಪರ್ಮಿಟ್) ಪಡೆಯುವುದಂತೂ ಸಾಹಸವೇ ಸರಿ. ಇದೇ ವರ್ಷದ ಆಗಸ್ಟ್‌ನಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು 'ಆಪ್‌ಕಾ ಆರ್‌ಟಿಒ ಆಪ್‌ಕಾ ಘರ್' ಹೆಸರಿನಲ್ಲಿ ಆನ್‌ಲೈನ್ ಸೇವೆ ಒದಗಿಸುವ ವ್ಯವಸ್ಥೆಗೆ ಚಾಲನೆ ನೀಡಿದರು. ಪ್ರಾದೇಶಿಕ ಸಾರಿಗೆ ಕಚೇರಿಯ 33 ಸೇವೆಗಳನ್ನು ಇದರಡಿ ತಂದಿದ್ದು, ಶೇ 95ರಷ್ಟು ಅರ್ಜಿಗಳು ಆನ್‌ಲೈನ್ ಮೂಲಕವೇ ತ್ವರಿತವಾಗಿ ವಿಲೇವಾರಿಯಾಗುತ್ತಿವೆ ಎನ್ನುತ್ತವೆ ವರದಿಗಳು. ಡಿಎಲ್, ಆರ್‌ಸಿ, ಮಾಲೀಕತ್ವ ಅಥವಾ ವಿಳಾಸ ಬದಲಾವಣೆ ಇವೆಲ್ಲವನ್ನೂ ಕಚೇರಿಗೆ ಹೋಗದೇ ಕಂಪ್ಯೂಟರ್ ಅಥವಾ ಸೈಬರ್ ಕೆಫೆಯಲ್ಲಿ ಕುಳಿತು ಮಾಡಿಕೊಳ್ಳಬಹುದಾದ ಸೌಲಭ್ಯವನ್ನು ದೆಹಲಿ ಸರ್ಕಾರ ಜಾರಿ ಮಾಡಿದೆ. ಕರ್ನಾಟಕ ಸರ್ಕಾರ ಕೂಡ ಸಾರಿಗೆ ಕಚೇರಿಯನ್ನು ಇನ್ನೂ ಹೆಚ್ಚು ಜನಸ್ನೇಹಿಯಾಗಿ ಮಾಡುವತ್ತ ದೃಢ ಹೆಜ್ಜೆ ಇಡಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ವರ್ಗಾವಣೆ ಅಥವಾ ಅವರಿಗೆ ಆಯಕಟ್ಟಿನ ಜಾಗ ನೀಡುವಾಗ ಚಾಲ್ತಿಯಲ್ಲಿರುವ 'ಜಾಲ'ವನ್ನು ಮೊದಲು ನಿಷ್ಕ್ರಿಯಗೊಳಿಸಿದರೆ ವ್ಯವಸ್ಥೆಯ ಸುಧಾರಣೆಯಲ್ಲಿ ಮೊದಲ ಹೆಜ್ಜೆ ಇಟ್ಟಂತಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಲಿ.

ದಿನದ ಟ್ವೀಟ್

ಹಾನಿ ಕಡಿಮೆ ಮಾಡಿಕೊಳ್ಳಿ

ಪೆಗಾಸಸ್ ಹಗರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ರಚಿಸಿರುವ ಸಮಿತಿಯು ವಾಟರ್‌ಗೇಟ್ ಪ್ರಕರಣವನ್ನು ಹೋಲುವಂತಿದೆ. ಈ ವಿಚಾರದಲ್ಲಿ 'ಮರೆಮಾಚುವುದು', ಸರ್ಕಾರ ಈವರೆಗೂ ಕಾಯ್ದುಕೊಳ್ಳುವಲ್ಲಿ ವಿಫಲವಾಗಿರುವ 'ಪಾರದರ್ಶಕತೆ' ಗಿಂತಲೂ ಹೆಚ್ಚು ಹಾನಿಯನ್ನು ಮೋದಿ ನೇತೃತ್ವದ ಸರ್ಕಾರಕ್ಕೆ ಉಂಟು ಮಾಡಬಲ್ಲದು. ಆಗಬಹುದಾದ ಹಾನಿಯನ್ನು ಕಡಿಮೆ ಮಾಡಿಕೊಳ್ಳಿ ಎಂಬುದೇ ನನ್ನ ಸಲಹೆ.

ಸುಬ್ರಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

ಕಿಡಿನುಡಿ

ಅಪ್ಪಟ ಹಿಂದುತ್ವವಾದಿಯಾದ ನಾನು ಮೊದಲೆಲ್ಲಾ ಜಾತಿ ಸಂಘಟನೆಗೆ ಸಂಬಂಧಿಸಿದ ಸಭೆಗಳಿಗೆ ಹೋಗುತ್ತಿರಲಿಲ್ಲ. ಹಿರಿಯರೊಬ್ಬರು ಕರೆದು, ಜಾತಿ ಸಂಘಟನೆ ಮೂಲಕ ಹಿಂದುತ್ವ ಮತ್ತು ಹಿಂದೂ ಸಮಾಜ ಗಟ್ಟಿಯಾಗುತ್ತದೆ, ಹಿಂದುಳಿದ ಜಾತಿಗಳು ಎಲ್ಲ ರೀತಿಯಿಂದಲೂ ಬಲಗೊಳ್ಳುತ್ತವೆ, ಅಂತಹ ಸಭೆಗಳಲ್ಲಿ ಭಾಗವಹಿಸಿ ಎಂದರು. ಆ ಬಳಿಕ ಭಾಗವಹಿಸಿದೆ. ಸಣ್ಣ- ಪುಟ್ಟ ಜಾತಿಗಳನ್ನು ಸಬಲ ಗೊಳಿಸುವುದು ನಮ್ಮ ಕರ್ತವ್ಯ. ಜಾತಿ ಸಂಘಟನೆಯಲ್ಲಿ ತೊಡಗುವುದು ಸಂಕುಚಿತ ಭಾವನೆ ಅಲ್ಲ. ಕುಟುಂಬ ಮತ್ತು ಜಾತಿಯ ಅಭಿವೃದ್ಧಿಯಿಂದ ಹಿಂದುತ್ವದ ಅಭಿವೃದ್ಧಿ ಸಾಧ್ಯ.

ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 28-10-1996

- **ಶರಾವತಿ ಟೇಲ್‌ರೇಸ್: ಪರಿಸರವಾದಿಗಳ ಮೌನ ಬಿಕ್ಕಳಿಕೆ**

ಬೆಂಗಳೂರು, ಅ. 27– ವಿವಾದಾತ್ಮಕ ಶರಾವತಿ ಟೇಲ್‌ರೇಸ್ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಪರಿಸರ ಇಲಾಖೆ ವಿಧಿಸಿದ ಷರತ್ತುಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಗಾಳಿಗೆ ತೂರಿದೆ ಎಂಬ ಆರೋಪವಿದೆ.

ಯೋಜನೆಯಿಂದ ಉಂಟಾಗುವ ಪರಿಸರ ನಾಶದ ವಿರುದ್ಧ ಹೋರಾಡುತ್ತ, ಮೈಯೆಲ್ಲಾ ಕಣ್ಣಾಗಿ ಕಾಯುತ್ತಿರುವ ಪರಿಸರ ಸಂಘಟನೆಗಳು ಈ ಆರೋಪ ಮಾಡಿವೆ.

ಪಶ್ಚಿಮ ಘಟ್ಟದ ಪರಿಸರ ಸಮತೋಲನವನ್ನು ಕಾಯುತ್ತಿರುವ ಅತಿ ಸೂಕ್ಷ್ಮ ಪ್ರದೇಶವಾದ ಗೇರುಸೊಪ್ಪದಲ್ಲಿ ಶರಾವತಿ ಟೇಲ್‌ರೇಸ್ ವಿದ್ಯುತ್ ಯೋಜನೆಯ ಕಾಮಗಾರಿ ಭರದಿಂದ ಸಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 28-10-1971

- **ಡಾ. ಮಥಾಯ್ ಸಮಿತಿಗೆ ವ್ಯಾಪಕ ಕಾರ್ಯವ್ಯಾಪ್ತಿ**

ಬೆಂಗಳೂರು, ಅ. 27– ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತದ ಬಗ್ಗೆ ವಿಚಾರಣೆ ನಡೆಸಲು ನೇಮಿಸಲಾಗಿರುವ ಡಾ. ಸಾಮ್ಯುಯಲ್ ಮಥಾಯ್ ಸಮಿತಿಯ ಕಾರ್ಯವ್ಯಾಪ್ತಿ ವ್ಯಾಪಕವಾಗಿದೆ ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಪತ್ರಿಕಾ ವರದಿಗಾರರಿಗೆ ತಿಳಿಸಿದರು.

ವರದಿಯನ್ನು ಸಲ್ಲಿಸಲು ಕಾಲ ನಿಗದಿ ಮಾಡಿಲ್ಲ ಎಂದು ಹೇಳಿದ ಶ್ರೀ ಧರ್ಮವೀರ ಅವರು, ಸಾಧ್ಯವಾದರೆ 3 ತಿಂಗಳೊಳಗಾಗಿ ವಿಚಾರಣೆಯನ್ನು ಮುಗಿಸಿ ವರದಿಯನ್ನು ನೀಡಬೇಕೆಂದು ಕೇಳಲಾಗಿದೆ ಎಂದರು.

ಮರಿಯಾ ಮತ್ತು ಮುರಾಟೊವ್: ಪತ್ರಿಕೋದ್ಯಮದ ಘನತೆಯ ರೂಪಕಗಳು

ಮಸುಕು ಬಾನಿನಲ್ಲಿ ಎರಡು ನಕ್ಷತ್ರಗಳು

ಪಡಸಾಲೆ

ರಘುನಾಥ ಚ.ಹ.

ಪತ್ರಿಕೋದ್ಯಮದ ಮಸುಕು ಬಾನಿನಲ್ಲಿ ಎರಡು ಪ್ರಖರ ನಕ್ಷತ್ರಗಳು ಮೂಡಿವೆ. ನೋಬಲ್ ವೃತ್ತಿಗೆ ನೊಬೆಲ್ ಪ್ರಶಸ್ತಿ ಸಂದಿದೆ.

ಫಿಲಿಪ್ಪೀನ್ಸ್‌ನ ಮರಿಯಾ ರೆಸ್ಸಾ ಹಾಗೂ ರಷ್ಯಾದ ಡಿಮಿತ್ರಿ ಮುರಾಟೊವ್, 2021ರ ನೊಬೆಲ್ ಶಾಂತಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. 1935ರಲ್ಲಿ ಜರ್ಮನಿಯ ಪತ್ರಕರ್ತನೊಬ್ಬನಿಗೆ ನೊಬೆಲ್ ಶಾಂತಿ ಪ್ರಶಸ್ತಿ ಬಂದುದನ್ನು ಹೊರತುಪಡಿಸಿದರೆ – ಪತ್ರಿಕೆಗಳನ್ನು ಗುರ್ತಿಸಿ, ಪತ್ರಕರ್ತರನ್ನು ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಇದೇ ಮೊದಲು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿಶ್ವದಾದ್ಯಂತ ಧಕ್ಕೆಯುಂಟಾಗಿರುವ ಸಂದರ್ಭದಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗೆ ಈ ಪತ್ರಕರ್ತರು ನಡೆಸಿದ ಧೈರ್ಯದ ಹೋರಾಟವನ್ನು ಆಯ್ಕೆ ಸಮಿತಿ ಗುರ್ತಿಸಿದೆ. ಈ ಆಯ್ಕೆಯ ಮೂಲಕ ನೊಬೆಲ್ ಸಮಿತಿ ಸೂಚ್ಯವಾಗಿ ಒಂದು ಸಂದೇಶ ನೀಡುತ್ತಿರುವಂತಿದೆ. ಈ ಜಗತ್ತನ್ನು ಮಾನವೀಯಗೊಳಿಸಲು ವೃತ್ತಿನಿಷ್ಠ ಪತ್ರಕರ್ತರು ಅಗತ್ಯ ಹಾಗೂ ಅಂಥವರನ್ನು ಗುರ್ತಿಸಿ ಗೌರವಿಸುವುದು ಈ ಹೊತ್ತಿನ ಜರೂರು ಎನ್ನುವ ಸೂಚನೆಯದು. ನಿಜ ಪತ್ರಿಕೋದ್ಯಮದ ಬೆನ್ನುತಟ್ಟದಂತಿರುವ ನೊಬೆಲ್ ಗೌರವ, ಸಮಕಾಲೀನ ಪತ್ರಿಕೋದ್ಯಮದಲ್ಲಿ ನೈತಿಕತೆ ಮತ್ತು ವ್ಯಾಪಾರದ ನಡುವಿನ ಗೆರೆ ಅಳಿಸಿಹೋಗಿರುವಷ್ಟು ತೆಳುವಾಗಿರುವ ಸನ್ನಿವೇಶದಲ್ಲಿ, 'ಪತ್ರಕರ್ತ' ಎನ್ನುವ ಅಳಿಸಿಹೋಗುತ್ತಿರುವ ಪ್ರಭೇದವನ್ನು ರಕ್ಷಿಸುವ ಪ್ರಯತ್ನದಂತೆಯೂ ಇದೆ. ಈ ಕಾರಣಗಳಿಂದಾಗಿ, ಮರಿಯಾ ಮತ್ತು ಮುರಾಟೊವ್ ಅವರಿಗೆ ಸಂದಿರುವ ಪ್ರಶಸ್ತಿ ಪತ್ರಿಕೋದ್ಯಮದ ಸಂಭ್ರಮವಷ್ಟೇ ಅಲ್ಲ; ಅದು ಮಾನವೀಯತೆ ಮತ್ತು ವಿಶ್ವಶಾಂತಿಗೆ ಹಂಬಲಿಸುವ ಎಲ್ಲರ ಸಂಭ್ರಮವೂ ಹೌದು.

ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯ ವಿಶ್ವದೆಲ್ಲೆಡೆ ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿವೆ. ಆ ಪ್ರವಾಹದೆದುರು ಈಜುವ ಧೈರ್ಯ ತೋರಿರುವ ಮರಿಯಾ ಹಾಗೂ ಮುರಾಟೊವ್, ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಾಗಿ ಪ್ರಯತ್ನಿಸುವ ಎಲ್ಲ ಪತ್ರಕರ್ತರ ಪ್ರತಿನಿಧಿಗಳು.

ಮರಿಯಾ (ಜ: 1963) ಅವರ 'ರ‍್ಯಾಪ್ಲರ್' ನ್ಯೂಸ್ ವೆಬ್‌ಸೈಟ್‌ಗೆ ಇನ್ನೂ ಹತ್ತರ ಪ್ರಾಯವೂ ತುಂಬಿಲ್ಲ. 2012ರಲ್ಲಿ ಆರಂಭವಾದ ಈ ಅಂತರ್ಜಾಲ ಪತ್ರಿಕೆ, ಫಿಲಿಪ್ಪೀನ್ಸ್ ಅಧ್ಯಕ್ಷ ರೊಡ್ರಿಗೊ ಡುಟರ್ಟೆ ಆಡಳಿತದ ಜನ ವಿರೋಧಿ ಕ್ರಮಗಳ ಬಗ್ಗೆ ನಿರಂತರವಾಗಿ ಬರೆಯುತ್ತಿದೆ. ಮಾದಕವಸ್ತು ವಿರುದ್ಧದ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಸುಳ್ಳು ಸುದ್ದಿ ಹರಡಲು ಹಾಗೂ ವಿರೋಧಿಗಳಿಗೆ ಕಿರುಕುಳ ನೀಡಲು ಸಾಮಾಜಿಕ ಜಾಲ-ತಾಣಗಳನ್ನು ಬಳಸಿಕೊಳ್ಳುವ ಪ್ರಯತ್ನಗಳನ್ನು ಬಯಲಿಗೆಳೆಯುತ್ತಾ ಬಂದಿದೆ.

ಮರಿಯಾ ಅವರಿಗಿಂತ ಎರಡು ವರ್ಷ ಹಿರಿಯರಾದ ಮುರಾಟೊವ್‌ರ (ಜ: 1961) 'ನೊವಾಯಾ ಗೆಝೆಟ್' (ಆರಂಭ: 1993) 'ರ‍್ಯಾಪ್ಲರ್'ಗೆ ಅಣ್ಣನಂತಹ ಪತ್ರಿಕೆ; 19 ವರ್ಷಗಳಷ್ಟು ಹೆಚ್ಚಿನ ಪ್ರಾಯದ್ದು. 'ರ‍್ಯಾಪ್ಲರ್' ಆನ್‌ಲೈನ್ ಪತ್ರಿಕೆ, 'ನೊವಾಯಾ ಗೆಝೆಟ್' ಮುದ್ರಿತ ಪತ್ರಿಕೆ ಎನ್ನುವ ವ್ಯತ್ಯಾಸ ಹೊರತುಪಡಿಸಿದರೆ, ಎರಡರ ದಾರಿ-ಧ್ಯೇಯಗಳು ಒಂದೇ. ಪ್ರಭುತ್ವವಿರೋಧಿ ಧೋರಣೆ ಹಾಗೂ ಜನಪರ ಕಾಳಜಿ ಮಾಧ್ಯಮದ ಪ್ರಮುಖ ಕಾಳಜಿಯಷ್ಟೇ. ಈ ಧೋರಣೆಯನ್ನು ಎತ್ತಿ ಹಿಡಿಯಲಿಕ್ಕಾಗಿ ಎರಡೂ ಪತ್ರಿಕೆಗಳು ಎಂಥ ಸವಾಲನ್ನೂ ಎದುರುಗೊಳ್ಳಲು ಹಿಂಜರಿದಿಲ್ಲ. ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿ ಮರಿಯಾ ಜೈಲು ಕಂಡು ಬಂದಿದ್ದಾರೆ; ಮೊಕ-ದ್ದಮೆಗಳನ್ನು ಎದುರಿಸುತ್ತಿದ್ದಾರೆ. ಮುರಾಟೊವ್ ಅವರ ದಾರಿ ಮತ್ತೂ ಕಠಿಣವಾದುದು. ಅವರ ಪತ್ರಿಕಾಬಳಗದ ಆರು ಸಹೋದ್ಯೋಗಿಗಳು ಹೋರಾಟದ ಹಾದಿಯಲ್ಲಿ ಹುತಾತ್ಮರಾಗಿದ್ದಾರೆ. ಆ ಕಾರಣದಿಂದಲೇ ನೊಬೆಲ್ ಪ್ರಕಟವಾದಾಗ ಮುರಾಟೊವ್ ಮೊದಲು ನೆನಪಿಸಿ-ಕೊಂಡಿದ್ದು ತನ್ನ ಪತ್ರಿಕಾಬಳಗವನ್ನು, ಹುತಾತ್ಮರನ್ನು. ಹದಿನೈದು ವರ್ಷಗಳ ಹಿಂದೆ ಅಕ್ಟೋಬರ್ 7ರಂದು ಪತ್ರಿಕೆಯ ಅನ್ನಾ ಪೊಲಿಟ್‌ಕೋವ್ಸ್‌ಕಯ ಎನ್ನುವ ವರದಿಗಾರ್ತಿಯ ಕೊಲೆಯಾಗಿತ್ತು. ಕಾಕತಾಳೀಯ ಎನ್ನುವಂತೆ, ಆಕೆಯ ಸ್ಮರಣೆಯ ಆಸುಪಾಸಿನ ಸಂದರ್ಭದಲ್ಲೇ ಪ್ರಶಸ್ತಿ ಪ್ರಕಟಣೆಯ ಸುದ್ದಿ ಹೊರಬಿದ್ದಿದೆ.

'ತಮಗೆ ಸಂದ ನೊಬೆಲ್, ವಿಶ್ವದೆಲ್ಲೆಡೆಯಲ್ಲಿನ ಪತ್ರಕರ್ತರಿಗೆ ಸಂದಿರುವ ಗೌರವ' ಎಂದು ಮರಿಯಾ ಹೇಳಿದ್ದಾರೆ. ಪತ್ರಕರ್ತನ ಕೆಲಸ ಹಿಂದೆಂದಿಗಿಂ

ಕೋವಿಡ್ ಪ್ರಕರಣಗಳ ಏರಿಳಿತದ ಆಟ

ದೇಶದಲ್ಲಿ ಈಗ ಪ್ರತಿದಿನ ಪತ್ತೆಯಾಗುತ್ತಿರುವ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಇಳಿಕೆಯಾಗುತ್ತಿದೆ. ಆದರೆ ಜಾಗತಿಕ ಮಟ್ಟದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಿನ ಬದಲಾವಣೆಯೇನೂ ಇಲ್ಲ. ಆದರೆ ಹೊಸ ಪ್ರಕರಣಗಳ ಸಂಖ್ಯೆ ಕೆಲವು ದೇಶಗಳಲ್ಲಿ ಇಳಿಕೆಯಾಗುತ್ತಿದ್ದರೆ, ಕೆಲವು ದೇಶಗಳಲ್ಲಿ ತೀವ್ರವಾಗಿ ಏರಿಕೆಯಾಗುತ್ತಿದೆ. ವಿಶ್ವದ ಎಲ್ಲಾ ದೇಶಗಳಲ್ಲಿ ಪತ್ತೆಯಾದ ಪ್ರಕರಣಗಳನ್ನು ಪರಿಗಣಿಸಿದರೆ, ವಿಶ್ವವು ಈಗ ಕೋವಿಡ್ ಸೋಂಕಿನ ನಾಲ್ಕನೇ ಅಲೆಯತ್ತ ಸಾಗುತ್ತಿದೆ ಎನ್ನಬಹುದು. ಕೆಲವು ದೇಶಗಳಲ್ಲಿ ಈಗಷ್ಟೇ ಮೂರನೇ ಅಲೆ ಆರಂಭವಾಗಿದೆ. ಆದರೆ, ಭಾರತದಲ್ಲಿ ಈಗ ಎರಡನೇ ಅಲೆ ಕೊನೆಯಾಗುತ್ತಿದೆ



- ವಿಶ್ವದಲ್ಲಿ ಮೊದಲ ಅಲೆ ತೀವ್ರವಾಗುವಾಗ ಭಾರತದಲ್ಲೂ ಮೊದಲ ಅಲೆ ತೀವ್ರತೆ ಪಡೆದಿತ್ತು. ಆದರೆ ಜಾಗತಿಕ ಮಟ್ಟದಲ್ಲಿ ಮೊದಲನೇ ಅಲೆ ಸಂಪೂರ್ಣ ತೀವ್ರವಾಗುವ ಮುನ್ನವೇ, ಮೊದಲನೇ ಅಲೆ ಭಾರತದಲ್ಲಿ ತೀವ್ರತೆ ಕಳೆದುಕೊಂಡಿತ್ತು. ಆದರೆ ಜಾಗತಿಕ ಮಟ್ಟದಲ್ಲಿ ಮೊದಲನೇ ಅಲೆ ಇಳಿಕೆಯಾಗದೆಯೇ ಎರಡನೇ ಅಲೆ ಆರಂಭವಾಯಿತು
- ವಿಶ್ವದಲ್ಲಿ ಎರಡನೇ ಅಲೆ ತೀವ್ರವಾಗಿದ್ದಾಗ, ಭಾರತದಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಸರಾಸರಿ ಹೊಸ ಪ್ರಕರಣಗಳ ಸಂಖ್ಯೆ 15,000ಕ್ಕಿಂತಲೂ ಕಡಿಮೆ ಇತ್ತು. ವಿಶ್ವದಲ್ಲಿ ಮೊದಲ ಅಲೆಯಲ್ಲಿ ಪತ್ತೆಯಾಗುತ್ತಿದ್ದ ಪ್ರಕರಣಗಳಿಗಿಂತ ದುಪ್ಪಟ್ಟು ಪ್ರಕರಣಗಳು ಎರಡನೇ ಅಲೆಯಲ್ಲಿ ಪತ್ತೆಯಾಗುತ್ತಿದ್ದವು. ಆದರೆ ಭಾರತದಲ್ಲಿ ಕೋವಿಡ್ ಕೊನೆಯಾಗುತ್ತಿದೆ ಎಂದು ಸರ್ಕಾರವು ಘೋಷಿಸಿತ್ತು
- ವಿಶ್ವದಲ್ಲಿ ಎರಡನೇ ಅಲೆ ತನ್ನ ತೀವ್ರತೆಯನ್ನು ಕಳೆದುಕೊಂಡ ನಂತರ, ಭಾರತದಲ್ಲಿ ಎರಡನೇ ಅಲೆ ತೀವ್ರತೆ ಪಡೆಯಿತು. ಭಾರತದಲ್ಲಿ ಎರಡನೇ ಅಲೆ ತೀವ್ರಗೊಂಡಂತೆ, ವಿಶ್ವದಲ್ಲಿ ಮೂರನೇ ಅಲೆ ತೀವ್ರವಾಯಿತು. ಭಾರತದಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿದ್ದ ವೇಳೆ ಬ್ರಿಟನ್, ಅಮೆರಿಕ ಮತ್ತು ಬ್ರೆಜಿಲ್‌ನಲ್ಲಿ ಹೆಚ್ಚು ಪ್ರಕರಣಗಳು ಪತ್ತೆಯಾದವು. ವಿಶ್ವದಲ್ಲಿ ಪತ್ತೆಯಾಗುತ್ತಿದ್ದ ಒಟ್ಟು ಪ್ರಕರಣಗಳಲ್ಲಿ, ಭಾರತದ ಪಾಲೇ ಶೇ 45ರಷ್ಟು ಇತ್ತು
- ಈಗ ಭಾರತದಲ್ಲಿ ಎರಡನೇ ಅಲೆ ತೀವ್ರತೆ ಕಳೆದುಕೊಂಡಿದೆ. ಅದರ ಜತೆಯಲ್ಲಿಯೇ ವಿಶ್ವದಲ್ಲಿ ಮೂರನೇ ಅಲೆಯೂ ತೀವ್ರತೆ ಕಳೆದುಕೊಂಡಿದೆ. ಆದರೆ ಈಗ ವಿಶ್ವದಲ್ಲಿ ಈಗ ನಾಲ್ಕನೇ ಅಲೆ ತೀವ್ರತೆ ಪಡೆಯುತ್ತಿದೆ
- ವಿಶ್ವದಲ್ಲಿ ಮೊದಲ ಅಲೆಯ ಗರಿಷ್ಠಮಟ್ಟದಲ್ಲಿ ಪತ್ತೆಯಾಗಿದ್ದ ಪ್ರಕರಣಗಳ ಸಂಖ್ಯೆಗಿಂತಲೂ ಹೆಚ್ಚಿನ ಸಂಖ್ಯೆಯ ಪ್ರಕರಣಗಳು, ಎರಡನೇ ಮತ್ತು ಮೂರನೇ ಅಲೆಗಳು ತೀವ್ರತೆ ಕಳೆದುಕೊಂಡಾಗಲೂ ಪತ್ತೆಯಾಗುತ್ತಿವೆ. ಇದು ಕಳವಳಕಾರಿ ಬೆಳವಣಿಗೆ. ಒಟ್ಟಾರೆ ವಿಶ್ವದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿಯೇ ಇದೆ

ಲಸಿಕೆ ಹಿಂಜರಿಕೆ, ಡೆಲ್ಟಾ ವೈರಸ್ ಕಾರಣ

ಹಲವು ದೇಶಗಳಲ್ಲಿ ಕೋವಿಡ್-19 ಹೊಸ ಪ್ರಕರಣಗಳ ಏರಿಕೆಗೆ ಲಸಿಕೆ ಕೊರತೆ, ಲಸಿಕೆ ಹಿಂಜರಿಕೆ ಮತ್ತು ವೈರಾಣುವಿನ ಹೊಸ ರೂಪಾಂತರಗಳೇ ಮುಖ್ಯ ಕಾರಣ ಎನ್ನಲಾಗಿದೆ.

ಬ್ರಿಟನ್‌ನಲ್ಲಿ ಶೇ 80ಕ್ಕೂ ಹೆಚ್ಚು ಜನರಿಗೆ ಎರಡೂ ಡೋಸ್ ಲಸಿಕೆ ಹಾಕಲಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಪ್ರಕರಣಗಳು ಹೆಚ್ಚುತ್ತಲೇ ಇವೆ. ಹೆಚ್ಚಿನ ಜನರಲ್ಲಿ ಡೆಲ್ಟಾ ರೂಪಾಂತರ ಎವೈ.4.2 ವೈರಾಣು ಪತ್ತೆಯಾಗಿದೆ. ಈ ವೈರಾಣುವಿನ ಬಗ್ಗೆ ಅಧ್ಯಯನ ನಡೆಯುತ್ತಿದೆ. ಬ್ರಿಟನ್‌ನಲ್ಲಿ ಪ್ರಕರಣ ಹೆಚ್ಚಳಕ್ಕೆ ಶಾಲೆಗಳು ಆರಂಭವಾಗಿದ್ದು ಒಂದು ಕಾರಣ ಎನ್ನಲಾಗುತ್ತಿದೆ. 18ರ ಒಳಗಿನವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಹಾಕಲಾಗಿಲ್ಲ. ಈ ವಯೋಮಾನದವರ ಲಸಿಕೆ ಅಭಿಯಾನವು ವೇಗ ಪಡೆದುಕೊಂಡಿಲ್ಲ. 18ರ ಒಳಗಿನವರಲ್ಲಿಯೇ ಹೆಚ್ಚು ಸೋಂಕು ಕಾಣಿಸಿಕೊಂಡಿದೆ. ಚೀನಾದಲ್ಲಿಯೂ ಡೆಲ್ಟಾ ರೂಪಾಂತರ ತಳಿಯೇ ಹೆಚ್ಚಿನವರಲ್ಲಿ ಕಂಡು ಬಂದಿದೆ. ಪ್ರವಾಸೋದ್ಯಮ ಬಿರುಸು ಪಡೆದುಕೊಂಡಿದ್ದು ಸೋಂಕು ಹರಡಲು ಕಾರಣ ಎನ್ನಲಾಗಿದೆ.

ರಷ್ಯಾದಲ್ಲಿ ಕೋವಿಡ್ ಪ್ರಕರಣಗಳ ಜತೆಗೆ ಸಾವಿನ ಸಂಖ್ಯೆ ತೀವ್ರವಾಗಿ ಏರಿಕೆಯಾಗಿದೆ. ರಷ್ಯಾದಲ್ಲಿ ಸಾವಿನ ಸಂಖ್ಯೆಯು ಕಳೆದ ಕೆಲವು ದಿನಗಳಲ್ಲಿ ಸಾವಿರದ ಆಸುಪಾಸಿನಲ್ಲಿಯೇ ಇದೆ. ಅಲ್ಲಿ ಆಸ್ಪತ್ರೆಗೆ ದಾಖಲಾಗಿರುವ ಕೋವಿಡ್ ರೋಗಿಗಳ ಸಂಖ್ಯೆಯು 2,35,000ಕ್ಕೂ ಹೆಚ್ಚು. ಇವರಲ್ಲಿ ಶೇ 11ರಷ್ಟು ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ರಷ್ಯಾದ ಆರೋಗ್ಯ ಸಚಿವ ಮಿಖಾಯಿಲ್ ಮುರಾಷ್ಕೊ ಹೇಳಿದ್ದಾರೆ. ಗಂಭೀರ ಪರಿಸ್ಥಿತಿಯಲ್ಲಿರುವ ಯಾರೂ ಲಸಿಕೆ ಹಾಕಿಸಿಕೊಂಡವರಲ್ಲ ಎಂಬ ಮಾಹಿತಿಯನ್ನೂ ಅವರು ನೀಡಿದ್ದಾರೆ.

ಆರೋಗ್ಯ ಸೇವೆ, ಶಿಕ್ಷಣ, ಚಿಲ್ಲರೆ ಮಾರಾಟದಂತಹ ಕೆಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಲಸಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ಸಾರ್ವಜನಿಕರಿಗೆ ಲಸಿಕೆ ಕಡ್ಡಾಯ ಅಲ್ಲ. ಕಡ್ಡಾಯಗೊಳಿಸುವ ಚಿಂತನೆಯನ್ನೂ ಸರ್ಕಾರ ಹೊಂದಿಲ್ಲ. ಜನರಲ್ಲಿ ಲಸಿಕೆಯ ಬಗ್ಗೆ ಹಿಂಜರಿಕೆ ಇದೆ. ಮುಖ್ಯವಾಗಿ, ರಷ್ಯಾ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್-ವಿ ಲಸಿಕೆಯ ಬಗ್ಗೆ ಜನರಿಗೆ ವಿಶ್ವಾಸ ಇಲ್ಲ ಎಂದು ವರದಿಯಾಗಿದೆ. ರಷ್ಯಾದಲ್ಲಿ ಲಸಿಕೆ ಲಭ್ಯ ಇದೆ. ಆದರೆ ಪೂರ್ಣ ಲಸಿಕೆ ಹಾಕಿಸಿಕೊಂಡ ಜನರ ಪ್ರಮಾಣವು ಶೇ 31ರಷ್ಟು ಮಾತ್ರ ಎಂದು 'ಅವರ್ ವರ್ಲ್ಡ್ ಇನ್ ಡಾಟಾ' ಹೇಳಿದೆ. 2020ರ ಆಗಸ್ಟ್‌ನಲ್ಲಿ ಜಗತ್ತಿನಲ್ಲಿಯೇ ಮೊದಲನೆಯದಾಗಿ ಕೋವಿಡ್ ಲಸಿಕೆ ಸ್ಪುಟ್ನಿಕ್-ವಿಗೆ ರಷ್ಯಾ ಅನುಮೋದನೆ ನೀಡಿತ್ತು. ಈ ಲಸಿಕೆಯು ಶೇ 91ಕ್ಕೂ ಹೆಚ್ಚು ಪರಿಣಾಮಕಾರಿ ಎಂದೂ ಅಧ್ಯಯನಗಳು ಹೇಳಿದ್ದವು. ಹಾಗಿದ್ದರೂ ಶೇ 62ರಷ್ಟು ಜನರು ಲಸಿಕೆ ಪಡೆದುಕೊಳ್ಳಲು ಬಯಸಿಲ್ಲ ಎಂದು ಸಮೀಕ್ಷೆಯಲ್ಲಿ ಹೇಳಿದ್ದಾರೆ ಎಂದು ಸಿಎನ್‌ಬಿಸಿ ವರದಿ ಮಾಡಿದೆ. ಲಸಿಕೆ ಹಿಂಜರಿಕೆಯೇ ರಷ್ಯಾದ ಬಹುದೊಡ್ಡ ಸವಾಲಾಗಿದೆ.

242 ದಿನಗಳಲ್ಲೇ ಕಡಿಮೆ ಪ್ರಕರಣ

ಹಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಆಗುತ್ತಿದ್ದರೂ ಭಾರತದಲ್ಲಿ ಸಾಂಕ್ರಾಮಿಕವು ಇಳಿಕೆಯ ಹಾದಿಯಲ್ಲಿದೆ. ಮಂಗಳವಾರ ಬೆಳಿಗ್ಗೆಯಿಂದ ಬುಧವಾರ ಬೆಳಿಗ್ಗೆ ವರೆಗಿನ 24 ತಾಸುಗಳಲ್ಲಿ ವರದಿಯಾದ ಹೊಸ ಪ್ರಕರಣಗಳ ಸಂಖ್ಯೆ 13,451 ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಇದು 242 ದಿನಗಳಲ್ಲಿಯೇ ಅತ್ಯಂತ ಕಡಿಮೆ ಏರಿಕೆ ಎಂದು ದಾಖಲಾಗಿದೆ.

ಹಾಗಿದ್ದರೂ ಕಳವಳಕ್ಕೆ ಕಾರಣವಾಗುವ ಅಂಶಗಳೂ ಕಳೆದ ಕೆಲವು ದಿನಗಳಲ್ಲಿ ವರದಿಯಾಗಿವೆ. ಕೋವಿಡ್-19 ಮೊದಲ ಅಲೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಭಾಯಿಸಿದ್ದ ಕೇರಳದಲ್ಲಿ ಪ್ರಕರಣಗಳ ಸಂಖ್ಯೆ ನಿಯಂತ್ರಣಕ್ಕೆ ಬರುತ್ತಿಲ್ಲ. ಬುಧವಾರವೂ ಇಲ್ಲಿ ಏಳು ಸಾವಿರಕ್ಕೂ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ. ದಸರಾ ಹಬ್ಬದ ನಂತರ, ಪಶ್ಚಿಮ ಬಂಗಾಳದಲ್ಲಿ ಪ್ರಕರಣಗಳ ಏರಿಕೆ ಕಳವಳ ಮೂಡಿಸಿದೆ. ಅ.13ರಿಂದ 26ರ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ 10,355 ಪ್ರಕರಣಗಳು ವರದಿಯಾಗಿವೆ. ಹಬ್ಬದ ಸಂದರ್ಭದಲ್ಲಿ ನಿರ್ಬಂಧಗಳ ಸಡಿಲಿಕೆಯೇ ಪ್ರಕರಣಗಳ ಹೆಚ್ಚಳಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಶೇ 80ರಷ್ಟು ಜನರಿಗೆ ಲಸಿಕೆ ಹಾಕಿಸಿರುವ ಬ್ರಿಟನ್‌ನಲ್ಲಿ ಪ್ರಕರಣಗಳು ಏರಿಕೆ ಆಗಿವೆ. ಮಕ್ಕಳಲ್ಲಿಯೇ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಶಾಲೆಗಳು ಆರಂಭವಾಗಿದ್ದು ಮತ್ತು 18ರ ಒಳಗಿನವರ ಲಸಿಕೆ ಅಭಿಯಾನ ನಿಧಾನವಾಗಿರುವುದು ಇದಕ್ಕೆ ಕಾರಣ. ಭಾರತದಲ್ಲಿಯೂ ಅದೇ ಪರಿಸ್ಥಿತಿ ಇದೆ. ಬ್ರಿಟನ್, ಚೀನಾ ಮತ್ತು ಇತರ ದೇಶಗಳಲ್ಲಿ ಎ.ವೈ. 4.2 ಎಂಬ ಹೆಸರಿನ ಡೆಲ್ಟಾ ರೂಪಾಂತರ ವೈರಸ್, ಸೋಂಕು ಹೆಚ್ಚಳಕ್ಕೆ ಕಾರಣವಾಗಿದೆ. ಭಾರತದಲ್ಲಿಯೂ ಈ ವೈರಾಣು ಪತ್ತೆ ಆಗಿದೆ.

ಪೌಷ್ಟಿಕಾಂಶ ಸೇರಿಸಿ ಕೃತಕ ಕಾಳು ವಿನ್ಯಾಸ: ಶೇ 10ರಷ್ಟು ಮಿಶ್ರಣ

ಶಾಲಾ ಬಿಸಿಯೂಟಕ್ಕೆ 'ಸಾರವರ್ಧಿತ ಅಕ್ಕಿ'

• ಆರ್.ಜಿತೇಂದ್ರ


ಸಾಮಾನ್ಯ ಅಕ್ಕಿ ಹಾಗೂ ಬಲಭಾಗದಲ್ಲಿ ಸಾರವರ್ಧಿತ ಅಕ್ಕಿ

ರಾಮನಗರ: ಶಾಲಾ ವಿದ್ಯಾರ್ಥಿಗಳಲ್ಲಿ ಅಪೌಷ್ಟಿಕತೆ ನೀಗಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಬಿಸಿಯೂಟದಲ್ಲಿ 'ಸಾರವರ್ಧಿತ ಅಕ್ಕಿ' ಸೇರ್ಪಡೆಗೊಳಿಸಿ ವಿತರಣೆ ಆರಂಭಿಸಿದೆ.

ಸದ್ಯ ರಾಜ್ಯದಾದ್ಯಂತ ಶಾಲೆಗಳು ಆರಂಭ ಆಗಿದ್ದು, ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಮಕ್ಕಳಿಗೆ ಬಿಸಿಯೂಟ ಉಣ ಬಡಿಸಲಾಗುತ್ತಿದೆ. 1ರಿಂದ 8ನೇ ತರಗತಿ ಮಕ್ಕಳ ಬಿಸಿಯೂಟಕ್ಕೆ ಬೇಕಾದ ಅಕ್ಕಿಯನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಅದರಲ್ಲಿ ಪ್ರತಿ ಕ್ವಿಂಟಲ್‌ಗೆ 10 ಕೆ.ಜಿ. ಯಂತೆ (ಶೇ 10) ಈ 'ಸಾರವರ್ಧಿತ ಅಕ್ಕಿ' ಬೆರೆಸಿ ಕೊಡಲಾಗಿದೆ.

ಕೃತಕ ಕಾಳು: ಅಂದ ಹಾಗೆ ಇದು ನಿಜವಾದ ಅಕ್ಕಿ ಅಲ್ಲ. ಅಕ್ಕಿ ರೂಪದಲ್ಲಿ ವಿನ್ಯಾಸಗೊಳಿಸಲಾದ ಸಾರವರ್ಧಿತ ಕಾಳು. ಕಬ್ಬಿಣಾಂಶ, ಸತು, ಫೋಲಿಕ್ ಆ್ಯಸಿಡ್, ವಿಟಮಿನ್ ಎ, ವಿಟಮಿನ್ ಬಿ12 ಮೊದಲಾದ ಅಂಶಗಳನ್ನು ಬೆರೆಸಿ ಅದಕ್ಕೆ ಅಕ್ಕಿಯ ಕಾಳಿನ ರೂಪ ಕೊಡಲಾಗಿದೆ. ನೋಡಲು ಸಾಮಾನ್ಯ ಅಕ್ಕಿಗಿಂತ ಕೊಂಚ ಉದ್ದ ಹಾಗೂ ದಪ್ಪವಿದೆ. ದೇಶದ ನಾನಾ ಭಾಗಗಳಲ್ಲಿ ಪರೀಕ್ಷೆಗೆ ಒಳಪಡಿಸಿ, ಮಕ್ಕಳ ಸೇವನೆಗೆ ಯೋಗ್ಯ ಎಂದು ಖಾತ್ರಿಯಾದ ಬಳಿಕವಷ್ಟೇ ಇದನ್ನು ಶಾಲೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ ಎನ್ನುತ್ತಾರೆ ಶಿಕ್ಷಣ ಇಲಾಖೆಯ ಅಧಿಕಾರಿಗಳು.

ಮಕ್ಕಳಿಗೆ ಅಗತ್ಯವಾದ ಪೌಷ್ಟಿಕಾಂಶಗಳನ್ನು ಸೇರಿಸಿ ತಯಾರಿಸಿದ ಕೃತಕ ಅಕ್ಕಿ ಇದಾಗಿದೆ. 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬಿಸಿಯೂಟದಲ್ಲಿ ಇದನ್ನು ಸೇರಿಸಿ ನೀಡಲಾಗುತ್ತಿದೆ
ಪ್ರಸನ್ನ, ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಯೋಜನೆ

ಲಕ್ಷಾಂತರ ಶಾಲಾ ಮಕ್ಕಳು ರಕ್ತಹೀನತೆ ಮತ್ತು ಅಪೌಷ್ಟಿಕತೆಯಿಂದ ಬಳಸುತ್ತಿದ್ದಾರೆ. ಇಂತಹವರಿಗೆ ಪೌಷ್ಟಿಕಾಂಶದ ಮಾತ್ರೆಗಳನ್ನು ಕೊಟ್ಟರೂ ನುಂಗುವುದಿಲ್ಲ. ಹೀಗಾಗಿ ಮಾಮೂಲಿ ಅಕ್ಕಿಯ ಜೊತೆಯಲ್ಲೇ ಈ ಸಾರವರ್ಧಿತ ಕಾಳನ್ನು ಸೇರಿಸಿ ನೀಡಲಾಗುತ್ತಿದೆ. ಸದ್ಯ ಶಾಲೆಗೆ ಬಂದ ಮಕ್ಕಳ ದೇಹದ ತೂಕ ಪಡೆಯಲಾಗಿದ್ದು, ತಿಂಗಳು ಬಿಟ್ಟು ಮತ್ತೆ ಮಕ್ಕಳ ತೂಕ ಮಾಡಲಾಗುತ್ತದೆ. ಅವರಲ್ಲಿನ ಬದಲಾವಣೆ ಕುರಿತು ಕೇಂದ್ರಕ್ಕೆ ಮಾಹಿತಿ ನೀಡಲಾಗುತ್ತದೆ ಎನ್ನುತ್ತಾರೆ ಅಕ್ಷರ ದಾಸೋಹ ಯೋಜನೆಯ ಅಧಿಕಾರಿಗಳು.

ಗೊಂದಲ ನಿವಾರಣೆ: ಬಿಸಿಯೂಟ ಆರಂಭದ ದಿನದಂದು ಶಾಲೆಗಳಲ್ಲಿನ ಅಡುಗೆ ಸಿಬ್ಬಂದಿ ಈ ಹೊಸ ಅಕ್ಕಿಯನ್ನು ಕಂಡು ಗಾಬರಿ ಬಿದ್ದಿದ್ದರು. ಪ್ಲಾಸ್ಟಿಕ್ ಅಕ್ಕಿ ಬೆರೆಕೆ ಆಗಿದೆ ಎನ್ನುವ ಗೊಂದಲ ಮೂಡಿತ್ತು. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಮೈಸೂರಿನ ಪ್ರಯೋಗಾಲಯದಲ್ಲಿ ಬುಧವಾರ ಪರೀಕ್ಷೆಗೆ ಒಳಪಡಿಸಿ ಇದು 'ಸಾರವರ್ಧಿತ ಅಕ್ಕಿ' ಎಂಬುದನ್ನು ಖಾತ್ರಿಪಡಿಸಿಕೊಳ್ಳಲಾಗಿದೆ. ಈ ಬಗ್ಗೆ ಶಿಕ್ಷಕರಿಗೆ ತಿಳಿವಳಿಕೆ ನೀಡುವುದಾಗಿ ಅಕ್ಷರ ದಾಸೋಹ ಯೋಜನೆಯ ಸಿಬ್ಬಂದಿ ಹೇಳುತ್ತಾರೆ.

ಕೇರಳ: ಹೈಸ್ಪೀಡ್ ರೈಲು ಮಾರ್ಗಕ್ಕೆ ಆಕ್ಷೇಪ
ಪರಿಸರ ಕಾಳಜಿ: ಯೋಜನೆಗಳಿಗೆ ವಿರೋಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಪದೇ ಪದೇ ಸಂಭವಿಸಿದ ನೈಸರ್ಗಿಕ ವಿಕೋಪಗಳು ಪರಿಸರದ ಬಗ್ಗೆ ಕೇರಳದ ಜನರು ಕಾಳಜಿ ವಹಿಸುವಂತೆ ಮಾಡಿವೆ. ಹೈಸ್ಪೀಡ್ ರೈಲು ಮಾರ್ಗ ಯೋಜನೆ, ಶಬರಿಮಲೆ ವಿಮಾನ ನಿಲ್ದಾಣ ಯೋಜನೆಗಳಿಗೆ ಜನರ ವಿರೋಧ ಹೆಚ್ಚಾಗಲು ಇತ್ತೀಚಿನ ವರ್ಷಗಳ ಭಾರಿ ಮಳೆ ಮತ್ತು ಪ್ರವಾಹಗಳೂ ಕಾರಣ ಎನ್ನಲಾಗಿದೆ.

ಈ ಯೋಜನೆಗಳು ಕಾರ್ಯಸಾಧುವೇ? ಜತೆಗೆ, ತೀವ್ರ ಒತ್ತಡಕ್ಕೆ ಒಳಗಾಗಿರುವ ಬೊಕ್ಕಸಕ್ಕೆ ಭಾರಿ ಮೊತ್ತದ ಈ ಯೋಜನೆಗಳು ಇನ್ನಷ್ಟು ಹೊರೆ ಅಲ್ಲವೇ ಎಂಬ ಪ್ರಶ್ನೆಗಳನ್ನೂ ಜನರು ಕೇಳುತ್ತಿದ್ದಾರೆ.

ವಿಧಾನಸಭೆ ಕಾರ್ಯಾಲಯದ ಮುಂದೆ ಬುಧವಾರ ಸೇರಿದ್ದ ನೂರಾರು ಜನರು ಹೈಸ್ಪೀಡ್ ರೈಲು ಮಾರ್ಗ ಯೋಜನೆ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ಪರಿಸರ ಕಾರ್ಯಕರ್ತರು, ಧಾರ್ಮಿಕ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ರಾಜಧಾನಿ ತಿರುವನಂತಪುರದಿಂದ ದಕ್ಷಿಣದ ಕಾಸರಗೋಡಿಗೆ ಹೈಸ್ಪೀಡ್ ರೈಲು ಸಂಪರ್ಕಕ್ಕೆ 530 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಿಸಬೇಕಿದೆ. ಸಂಚಾರ ದಟ್ಟಣೆಯ ರೈಲು ಮತ್ತು ರಸ್ತೆ ಸಂಪರ್ಕಕ್ಕೆ ಇದೊಂದು ಪರಿಸರಸ್ನೇಹಿ ಪರ್ಯಾಯ ಎಂದೂ ಹೇಳಲಾಗುತ್ತಿದೆ. ಈ ಮಾರ್ಗ ನಿರ್ಮಾಣವಾದರೆ, ತಿರುವನಂತಪುರ-ಕಾಸರಗೋಡು ನಡುವಣ ಪ್ರಯಾಣ ಸಮಯವು ಹತ್ತು ತಾಸಿನಿಂದ ನಾಲ್ಕು ತಾಸಿಗೆ ಇಳಿಯಲಿದೆ.

ಪ್ರಸ್ತಾವಿತ ರೈಲು ಮಾರ್ಗದ ಎರಡೂ ಕಡೆ ರಕ್ಷಣಾ ಗೋಡೆಯು ಯೋಜನೆಯ ಭಾಗವಾಗಿದೆ. ಇದು ರಾಜ್ಯವನ್ನು ಅಕ್ಷರಶಃ ಎರಡು ಭಾಗವಾಗಿ ವಿಭಜಿಸಲಿದೆ. ಜತೆಗೆ, ನೀರಿನ ಸಹಜ ಹರಿವಿಗೆ ತೊಡಕಾಗಲಿದೆ ಎಂದು ಪರಿಸರವಾದಿಗಳು ಹೇಳಿದ್ದಾರೆ.

ಶಬರಿಮಲೆ ವಿಮಾನ ನಿಲ್ದಾಣಕ್ಕೆ ಆಕ್ಷೇಪ

ಶಬರಿಮಲೆ ವಿಮಾನ ನಿಲ್ದಾಣ ಯೋಜನೆಯ ವಿರುದ್ಧದ ಹೋರಾಟವೂ ಬಲವಾಗುತ್ತಿದೆ. ಕೋಟಯಂ ಜಿಲ್ಲೆಯಲ್ಲಿ ಈಚೆಗೆ ಭಾರಿ ಪ್ರವಾಹ ಮತ್ತು ಭೂಕುಸಿತಕ್ಕೆ ಸಿಲುಕಿದ್ದ ಕೂಟ್ಟಕ್ಕಲ್ ಮತ್ತು ಮುಂಡಕ್ಕಯಂ ಪ್ರದೇಶಗಳಿಗೆ, ವಿಮಾನ ನಿಲ್ದಾಣ ಯೋಜನೆಗೆ ಆಯ್ಕೆ ಮಾಡಿಕೊಂಡಿರುವ ಚೆರುವ್ಹಾಲಿ ಎಸ್ಟೇಟ್ ಪ್ರದೇಶವು ಸನಿಹವೇ ಇದೆ. ಹೀಗಾಗಿ ಈ ಯೋಜನೆ ವಿರುದ್ಧ ಹೋರಾಟ ತೀವ್ರತೆ ಪಡೆಯುತ್ತಿದೆ.

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ರೆಸ್ಟೋರೆಂಟ್ ಒಂದರಲ್ಲಿ ಯುವಕನೊಬ್ಬ ತನ್ನ ಗೆಳತಿಯ ಸಾಫ್ಟ್‌ಡ್ರಿಂಕ್ ಟಿನ್‌ಗೆ ಏನನ್ನೋ ಬೆರೆಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ನೋಡಿ ಎಚ್ಚರದಿಂದ ಇರಿ. ಯಾರನ್ನೂ ಏಕಾಏಕಿ ನಂಬಬೇಡಿ. ಈ ಮುಸ್ಲಿಂ ಯುವಕ, ಹಿಂದೂ ಯುವತಿಯನ್

ಪ್ರಜಾ ಮತ
ಜನತಂತ್ರದ ಹಬ್ಬ 2021

ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆ: ಬಹಿರಂಗ ಪ್ರಚಾರಕ್ಕೆ ತೆರೆ

ಶಕ್ತಿ ಪ್ರದರ್ಶಿಸಿದ ಬಿಜೆಪಿ–ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಬುಧವಾರ ಸಂಜೆ 7 ಗಂಟೆಗೆ ತೆರೆಬಿದ್ದಿತು. ಬಿಜೆಪಿಯಿಂದ ಅದ್ಧೂರಿ 'ರೋಡ್ ಷೋ' ನಡೆದರೆ, ಕಾಂಗ್ರೆಸ್‌ನಿಂದ 'ಬೃಹತ್ ಬಹಿರಂಗ ಸಭೆ' ನಡೆಯಿತು. ಆ ಮೂಲಕ ಉಭಯ ಪಕ್ಷಗಳ ನಾಯಕರು ಶಕ್ತಿ ಪ್ರದರ್ಶಿಸಿದರು.

ಹಾನಗಲ್ ಪಟ್ಟಣದ ರಸ್ತೆಗಳಲ್ಲಿ ಬಿಜೆಪಿ ಧ್ವಜ, ಕೇಸರಿ ಮತ್ತು ಕಾಂಗ್ರೆಸ್ ಬಾವುಟಗಳು ರಾರಾಜಿಸಿದವು. ಬೈಕ್ ಮತ್ತು ವಾಹನಗಳಲ್ಲಿ ನೆಚ್ಚಿನ ಪಕ್ಷಗಳಿಗೆ ಜೈಕಾರ ಹಾಕುತ್ತಾ ಕಾರ್ಯಕರ್ತರು ಹರ್ಷೋದ್ಗಾರ ಮಾಡುತ್ತಾ ಸಂಚರಿಸಿದರು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರ ಪಡೆ ಮತ್ತು ವಾಹನಗಳಿಂದ ಹಾನಗಲ್ ಪಟ್ಟಣದ ರಸ್ತೆಗಳು ಕಿಕ್ಕಿರಿದು ತುಂಬಿದ್ದವು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಾನಗಲ್ ಕ್ಷೇತ್ರದ ಮಾಸನಕಟ್ಟಿ, ಕೂಡಲ, ನರೇಗಲ್ಲ, ವಂಶಿ ಫಾರ್ಮ್‌ಹೌಸ್, ಕಾಡಶೆಟ್ಟಿಹಳ್ಳಿ, ಸಾಂವಸಗಿ ಗ್ರಾಮಗಳಲ್ಲಿ ಬಿಡುವಿಲ್ಲದೆ 'ರೋಡ್ ಷೋ' ಮತ್ತು ಸಭೆಗಳನ್ನು ನಡೆಸಿ, ಬಿಜೆಪಿಯತ್ತ ಮತಗಳನ್ನು ಸೆಳೆಯಲು ಕಸರತ್ತು ನಡೆಸಿದರು.

ಹಾನಗಲ್ ಪಟ್ಟಣದ ಕುಮಾರೇಶ್ವರ ವಿರಕ್ತ ಮಠದಿಂದ ನಗರದ ಪ್ರಮುಖ ರಸ್ತೆಗಳಲ್ಲಿ ನಡೆದ ಬಿಜೆಪಿ 'ರೋಡ್‌ಷೋ'ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವರಾದ ಗೋವಿಂದ ಕಾರಜೋಳ, ಬಿ.ಸಿ. ಪಾಟೀಲ, ಡಾ.ಕೆ.ಸುಧಾಕರ್, ಮುನಿರತ್ನ, ಸಂಸದ ಶಿವಕುಮಾರ್ ಉದಾಸಿ, ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ ಪಾಲ್ಗೊಂಡು ಪ್ರಚಾರ ರ‍್ಯಾಲಿಗೆ ರಂಗು ತಂದರು.

ಕಾಂಗ್ರೆಸ್ ನಾಯಕರ ದಂಡು: ಹಾನಗಲ್ ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಕಾಂಗ್ರೆಸ್‌ನಿಂದ ಏರ್ಪಡಿಸಿದ್ದ 'ಬೃಹತ್ ಬಹಿರಂಗ ಸಭೆ'ಗೆ ನಾಯಕರ ದಂಡೇ ಬಂದಿತ್ತು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಶಾಸಕರಾದ ಡಾ.ಜಿ.ಪರಮೇಶ್ವರ, ಜಮೀರ್ ಅಹಮದ್, ಎಚ್. ಕೆ.ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ, ಮಾಜಿ ಸಚಿವ ಮನೋಹರ ತಹಶೀಲ್ದಾರ್ ಸೇರಿದಂತೆ ಹಲವಾರು ನಾಯಕರು 'ಕೈ' ಬಲಪಡಿಸಿ ಎಂದು ಮನವಿ ಮಾಡಿದರು.

ಹಾನಗಲ್ ಕ್ಷೇತ್ರದ ಕಾಡಶೆಟ್ಟಿಹಳ್ಳಿ ಗ್ರಾಮದಲ್ಲಿ ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ರೋಡ್ ಷೋ' ನಡೆಸಿದ ಸಂದರ್ಭ ಕಾರ್ಯಕರ್ತರು ಹೂ ಮಳೆ ಸುರಿಸಿ ಸ್ವಾಗತಿಸಿದರು – ಪ್ರಜಾವಾಣಿ ಚಿತ್ರ

'ನಿಶ್ಶಬ್ದ ಅವಧಿ'

ಅ.30ರಂದು ಮತದಾನ ನಡೆಯಲಿದ್ದು, 72 ಗಂಟೆ ಪೂರ್ವ ಅವಧಿಯನ್ನು 'ನಿಶ್ಶಬ್ದ ಅವಧಿ' ಎಂದು ಜಿಲ್ಲಾ ಚುನಾವಣಾಧಿಕಾರಿ ಘೋಷಿಸಿದ್ದಾರೆ. ಈ ಅವಧಿಯಲ್ಲಿ ಚುನಾವಣಾ ಪ್ರಚಾರ, ಬಹಿರಂಗ ಸಭೆ, ಸಮಾರಂಭಗಳನ್ನು ನಿಷೇಧಿಸಲಾಗಿದೆ. ಮನೆ-ಮನೆ ಪ್ರಚಾರಕ್ಕೆ ಅವಕಾಶ ನೀಡಲಾಗಿದೆ.

ತಾರಾ ಪ್ರಚಾರಕರು ಸೇರಿದಂತೆ ರಾಜಕೀಯ ಮುಖಂಡರು ರಾಜಕೀಯ ಉದ್ದೇಶಕ್ಕಾಗಿ ಕ್ಷೇತ್ರಕ್ಕೆ ಬಂದ ಹೊರಗಿನವರು ಬುಧವಾರ ಸಂಜೆ 7 ಗಂಟೆ ನಂತರ ಕ್ಷೇತ್ರದಲ್ಲಿ ಉಳಿದುಕೊಳ್ಳುವಂತಿಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿ ಆದೇಶಿಸಿದ ಹಿನ್ನೆಲೆಯಲ್ಲಿ ಪಕ್ಷಗಳ ವರಿಷ್ಠರು ಕ್ಷೇತ್ರದಿಂದ ಹೊರನಡೆದರು. ನ.2ರಂದು ಮತ ಎಣಿಕೆ ನಡೆಯಲಿದೆ.

ಸುದ್ದಿ 2 ನಿಮಿಷ

'ಸಿಂದಗಿಯಲ್ಲಿ ಏನು ಅಭಿವೃದ್ಧಿ ಮಾಡಿದ್ದಾರೆ ಹೇಳಲಿ'

ವಿಜಯಪುರ: 'ಎಂ. ಸಿ. ಮನಗೂಳಿ ಸಚಿವ, ಶಾಸಕರಾಗಿದ್ದಾಗ ಈ ಭಾಗವನ್ನು ನೀರಾವರಿ ಮಾಡಿದ್ದಾರೆ, ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಸಿಂದಗಿಯಲ್ಲಿ ಕಾಂಗ್ರೆಸ್ ಪರ ಅಲೆಯಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಇಲ್ಲಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉಪ ಚುನಾವಣೆ ನಡೆಯುತ್ತಿರುವ ಸಿಂದಗಿಯಲ್ಲಿ ಬಿಜೆಪಿಯ ಸುನಾಮಿ ಅಲೆ ಇದೆ' ಎಂಬ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆಗೆ ಈ ರೀತಿ ಪ್ರತಿಕ್ರಿಯಿಸಿದ ಅವರು, 'ಸಿಂದಗಿಯಲ್ಲಿ ಏನು ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ಬೊಮ್ಮಾಯಿ ಹೇಳಲಿ' ಎಂದರು.

'ಬಿಜೆಪಿಯವರಿಗೆ ಹೇಳಿಕೊಳ್ಳಲು ಯಾವುದೇ ಯೋಜನೆಗಳಿಲ್ಲ. ಕಳೆದ ಎರಡು ವರ್ಷದಿಂದ ಏನು ಸಾಧನೆ ಮಾಡಿದ್ದೇವೆ ಎಂದು ಹೇಳಲು ಆಗುತ್ತಿಲ್ಲ ಎಂದು ಕುಟುಕಿದ ಅವರು, 'ಕೇಂದ್ರ ಸರ್ಕಾರ ಜನವಿರೋಧಿಯಾಗಿದೆ. ಬೆಲೆ ಏರಿಕೆ ಗಗನಕ್ಕೇರಿದೆ. ಕರ್ನಾಟಕ ಮತ್ತು ದೇಶದಲ್ಲಿ ಬಿಜೆಪಿ ಆಡಳಿತದಿಂದ ಬೇಸತ್ತಿದ್ದಾರೆ. ಜನರು ಬಿಜೆಪಿಗೆ ಶಾಪ ಹಾಕುತ್ತಿದ್ದಾರೆ' ಎಂದರು.

'ಎರಡೂ ಕಡೆ ಕಾಂಗ್ರೆಸ್--ಬಿಜೆಪಿ ಮಧ್ಯೆ ನೇರ ಸ್ಪರ್ಧೆ ಇದೆ. ಜೆಡಿಎಸ್ ಸ್ಪರ್ಧೆಯಲ್ಲಿ ಇಲ್ಲ. ಅಲ್ಪ-ಸಂಖ್ಯಾತರು ಬುದ್ಧಿವಂತರಿದ್ದಾರೆ. ಜಾತ್ಯತೀತ ಪಕ್ಷ ಅಲ್ಲ ಎಂಬುದು ಅವರಿಗೆ ಗೊತ್ತಿದೆ. ಸಂವಿಧಾನ ಉಳಿಸುವ ಪಕ್ಷಕ್ಕೆ ಅವರು ಮತ ಹಾಕುತ್ತಾರೆ. ಕೋಮುವಾದಿಗಳ ಜೊತೆ ಕೈ ಜೋಡಿಸುವವರಿಗೆ ಅವರು ವೋಟ್ ಹಾಕುವುದಿಲ್ಲ' ಎಂದು ಹೇಳಿದರು.

ಸದಾಶಿವ ಆಯೋಗದ ವರದಿ ಜಾರಿಗೆ ಬದ್ಧ: ಕೇಂದ್ರ ಸಚಿವ

ಕುಷ್ಟಗಿ (ಕೊಪ್ಪಳ ಜಿಲ್ಲೆ): 'ಲಂಬಾಣಿ, ಭೋವಿ ಸೇರಿದಂತೆ ಪರಿಶಿಷ್ಟ ಜಾತಿಗೆ ಸೇರಿರುವ ಇತರೆ ಸಮುದಾಯಗಳಿಗೆ ಅನ್ಯಾಯ ಆಗದ ರೀತಿಯಲ್ಲಿ, ನ್ಯಾ.ಎ.ಜೆ. ಸದಾಶಿವ ಆಯೋಗ ನೀಡಿರುವ ಒಳಮೀಸಲಾತಿ ವರದಿ ಜಾರಿಗೊಳಿಸುತ್ತೇವೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ತಿಳಿಸಿದರು.

ಬುಧವಾರ ಇಲ್ಲಿ ತಾಲ್ಲೂಕಿನ ಮಾದಿಗ ಮಹಾಸಭಾ ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಈ ವಿಚಾರದಲ್ಲಿ ಸಂಘ ಪರಿವಾರ, ಪಕ್ಷ ಮತ್ತು ಇತರೆ ಎಲ್ಲ ಸಮುದಾಯಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ವರದಿ ಜಾರಿಗೊಳಿಸಲಾಗುವುದು' ಎಂದರು.

'ಯಾರಿಗೆ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ನೀಡಬೇಕು ಎನ್ನುವುದರ ಬಗ್ಗೆ ಚರ್ಚಿಸಿ ಎಲ್ಲರಿಗೂ ಸಮಾನ ನ್ಯಾಯ ಒದಗಿಸುವ ಮೂಲಕ ಬಿಜೆಪಿ ತನ್ನ ಬದ್ಧತೆಯನ್ನು ತೋರಲಿದೆ' ಎಂದರು.

ಸಿಂದಗಿ: ದ್ವಿಚಕ್ರ ವಾಹನ ಏರಿದ ಜೆಡಿಎಸ್ ವರಿಷ್ಠ ದೇವೇಗೌಡ

ಮತದಾರರ ಮನವೊಲಿಕೆಗೆ ಕಸರತ್ತು

ಪ್ರಜಾವಾಣಿ ವಾರ್ತೆ

ವಿಜಯಪುರ: ರಾಜಕಾರಣಿಗಳ ಪ್ರತಿಷ್ಠೆ ಹಾಗೂ ಜಿದ್ದಾಜಿದ್ದಿಗೆ ಕಾರಣವಾಗಿರುವ ಸಿಂದಗಿ ವಿಧಾನಸಭಾ ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಬುಧವಾರ ತೆರೆ ಬಿದ್ದಿದೆ.

ಸುಮಾರು ಒಂದು ತಿಂಗಳಿಂದ ಭಾರೀ ಕಾವು ಪಡೆದುಕೊಂಡಿದ್ದ ಸಿಂದಗಿ ಕ್ಷೇತ್ರದಲ್ಲಿ ಬಹಿರಂಗ ಸಭೆ, ಸಮಾರಂಭ, ರ‍್ಯಾಲಿ, ಪಾದಯಾತ್ರೆ ಮೂಲಕ ಮತ ಭೇಟೆಯಲ್ಲಿ ತೊಡಗಿದ್ದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ದಿಗ್ಗಜರು ಕ್ಷೇತ್ರ ಬಿಟ್ಟು ಹೊರ ನಡೆದಿದ್ದಾರೆ.

ಮತದಾನಕ್ಕೆ ಕೇವಲ ಎರಡು ದಿನ ಬಾಕಿ ಉಳಿದ್ದಿದ್ದು, ಕ್ಷೇತ್ರದಲ್ಲಿ ಅಭ್ಯರ್ಥಿಗಳು ಮತ್ತು ಸ್ಥಳೀಯ ಮುಖಂಡರು ಮತದಾರರ ಮನವೊಲಿಕೆಯ ಕೊನೆಯ ಕಸರತ್ತು ಆರಂಭಿಸಿದ್ದಾರೆ. ಇದೀಗ ಮತದಾರರ ಓಲೈಕೆಗಾಗಿ ಕೊನೆಯದಾಗಿ ವಾಮ ಮಾರ್ಗ ಹಿಡಿದಿರುವ ರಾಜಕೀಯ ಪಕ್ಷಗಳಿಂದ ಹಣ ಹಂಚಿಕೆ ಅವ್ಯಾಹತವಾಗಿ ನಡೆಯುತ್ತಿದೆ ಎಂಬ ಬಲವಾದ ಆರೋಪ ಮತದಾರರಿಂದ ಕೇಳಿಬರುತ್ತಿದೆ.

ಸಿಂದಗಿಯಲ್ಲಿ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಪರ ಅದ್ಧೂರಿ ಚುನಾವಣಾ ಪ್ರಚಾರದ ಶೋಭಾಯಾತ್ರೆ ಪಟ್ಟಣದಲ್ಲಿ ನಡೆಯಿತು. ಬಸವೇಶ್ವರ ವೃತ್ತದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಶೋಭಾಯಾತ್ರೆಗೆ ಚಾಲನೆ ನೀಡಿ, 'ಚುನಾವಣೆಯಲ್ಲಿ ಬಿಜೆಪಿ ಹಣ ಹಂಚುತ್ತಿದೆ ಎಂದು ಆರೋಪಿಸುವ ಸಿದ್ಧರಾಮಯ್ಯ ಬಾದಾಮಿ ಕ್ಷೇತ್ರದಲ್ಲಿ ಹಾಗೂ ಡಿ.ಕೆ.ಶಿವಕುಮಾರ ಕನಕಪುರ ಕ್ಷೇತ್ರದಲ್ಲಿ ಯಾವುದರ ಆಧಾರದ ಮೇಲೆ ಗೆದ್ದಿದ್ದಾರೆ? ಉತ್ತರಿಸಲಿ' ಎಂದು ಸವಾಲೆಸೆದರು.

ತೆರೆದ ವಾಹನದಲ್ಲಿ ಅವರೊಂದಿಗೆ ಚುನಾವಣಾ ಉಸ್ತುವಾರಿಗಳಾದ ಸಚಿವ ವಿ.ಸೋಮಣ್ಣ, ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಹಾಗೂ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಎ.ಎಸ್. ಪಾಟೀಲ ನಡಹಳ್ಳಿ, ಸೋಮನಗೌಡ ಪಾಟೀಲ ಸಾಸನೂರ, ಶರಣು ಸಲಗರ, ಅರುಣ ಶಹಾಪುರ, ಚಲನಚಿತ್ರ ನಟ ಶ್ರುತಿ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್. ಎಸ್.ಪಾಟೀಲ ಕೂಚಬಾಳ ಇದ್ದರು.

ದ್ವಿಚಕ್ರ ವಾಹನ ಏರಿದ ದೇವೇಗೌಡರು: ಜೆಡಿಎಸ್ ಅಭ್ಯರ್ಥಿ ನಾಜಿಯಾ ಶಕೀಲ ಅಂಗಡಿ ಪರ ಪಟ್ಟಣದಲ್ಲಿ ನಡೆದ ರೋಡ್ ಶೋ ದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ದ್ವಿಚಕ್ರವಾಹನ ಏರಿದ್ದು ವಿಶೇಷವಾಗಿತ್ತು.

ಇಲ್ಲಿಯ ಸಂಗಮೇಶ್ವರ ದೇವಸ್ಥಾನದಿಂದ ಹೊರಟ ರೋಡ್ ಶೋ ತೆರೆದ ವಾಹನದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ, ಜೆಡಿಎಸ್ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಜಫ್ರುಲ್ಲಾ ಖಾನ್, ಅಭ್ಯರ್ಥಿ ನಾಜಿಯಾ ಅಂಗಡಿ, ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಗೊಲ್ಲಾಳಪ್ಪಗೌಡ ಪಾಟೀಲ, ಮುಖಂಡ ಪ್ರಕಾಶ ಹಿರೇಕುರುಬರ ಇದ್ದರು.

ಕಾಂಗ್ರೆಸ್- ಸಿದ್ದಮ್ಮ ಗೌಡತಿ ಮತಯಾಚನೆ: ಆಲಮೇಲ ಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಪರವಾಗಿ ಬುಧವಾರ ರೋಡ್ ಶೋ ನಡೆಯಿತು. ದಿವಂಗತ ಎಂ.ಸಿ.ಮನಗೂಳಿ ಅವರ ಪತ್ನಿ ಸಿದ್ದಮ್ಮ ಗೌಡತಿ ಮತಯಾಚನೆ ಮಾಡಿದರು. 'ಆಲಮೇಲ ಪಟ್ಟಣದ ಮೇಲೆ ದಿವಂಗತ ಮನಗೂಳಿ ಅವರು ಬಹಳ ಪ್ರೀತಿ ಹೊಂದಿದ್ದರು. ಅವರ ಕಾರ್ಯವನ್ನು ಮುಂದುವರಿಸಲು ಈ ಸಲವೂ ಅವಕಾಶ ಮಾಡಿಕೊಡಬೇಕು' ಎಂದು ಸೆರಗೊಡ್ಡಿ ಮನವಿ ಮಾಡಿದರು.



ಸಿಂದಗಿಯಲ್ಲಿ ಜೆಡಿಎಸ್ ಅಭ್ಯರ್ಥಿ ನಾಜಿಯಾ ಶಕೀಲ್ ಅಂಗಡಿ ಪರ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಬುಧವಾರ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು. ಅಭ್ಯರ್ಥಿ ನಾಜಿಯಾ ಅಂಗಡಿ, ಬಂಡೆಪ್ಪ ಕಾಶೆಂಪೂರ, ಜಫ್ರುಲ್ಲಾಖಾನ್, ಗೊಲ್ಲಾಳಪ್ಪಗೌಡ ಪಾಟೀಲ ಇದ್ದಾರೆ – ಪ್ರಜಾವಾಣಿ ಚಿತ್ರ

ಭಯೋತ್ಪಾದನೆ, ಭ್ರಷ್ಟಾಚಾರ, ನಿರುದ್ಯೋಗ, ಬಡತನ ಇವು ದೇಶಕ್ಕೆ ಕಾಂಗ್ರೆಸ್ ನೀಡಿದ ಕೊಡುಗೆಗಳು
ನಳಿನ್ ಕುಮಾರ್ ಕಟೀಲ್
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಉಲ್ಲಂಘನೆ: 23 ಪ್ರಕರಣ ದಾಖಲು

ವಿಜಯಪುರ: ಸಿಂದಗಿ ಉಪ ಚುನಾವಣೆಯಲ್ಲಿ ಕೋವಿಡ್ ನಿಯಮಾವಳಿಗಳ ಪಾಲನೆಯೇ ಆಗಿಲ್ಲ. ಪರಸ್ಪರ ಅಂತರ, ಮಾಸ್ಕ್, ಸ್ಯಾನಿಟೈಸ್ ಬಳಕೆ ಎಲ್ಲಿಯೂ ಕಂಡುಬಂದಿಲ್ಲ. ಮೂರು ಪಕ್ಷಗಳು ಪೈಪೋಟಿಗೆ ಬಿದ್ದು ಸಭೆ, ಸಮಾರಂಭದಲ್ಲಿ ಅಪಾರ ಜನರನ್ನು ಸೇರಿಸುವ ಮೂಲಕ ಕೋವಿಡ್ ನಿಯಮಾವಳಿಯನ್ನು ಮುರಿದಿವೆ.

ಪ್ರಚಾರದ ವೇಳೆ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿದಂತೆ ಮೂರು ಪಕ್ಷಗಳ ವಿರುದ್ಧ ಕೋವಿಡ್ ನಿಯಮಗಳ ಉಲ್ಲಂಘನೆ ಮತ್ತು ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್, ಕೋವಿಡ್ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಎಂಟು ಪ್ರಕರಣ ಹಾಗೂ ಕೋವಿಡ್ ಮತ್ತು ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ 13 ಪ್ರಕರಣ ಹಾಗೂ ಚುನಾವಣಾ ಮಾದರಿ ನೀತಿ ಸಂಹಿತೆಗೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕೈ ಪಕ್ಷದ ಕಚ್ಚಾಟ, ನಾಯಕಿಗೆ ಆತಂಕ: ಬಿಜೆಪಿ

ಬೆಂಗಳೂರು: 'ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ನಾಯಕರ ಮಧ್ಯೆ ಕಚ್ಚಾಟ ನಡೆಯುತ್ತಿರುವುದು ಎಐಸಿಸಿಯ ಸ್ವಯಂ ಘೋಷಿತ ಅಧ್ಯಕ್ಷೆಯ ಆತಂಕಕ್ಕೆ ಕಾರಣವಾಗಿದೆ' ಎಂದು ರಾಜ್ಯ ಬಿಜೆಪಿ ಟ್ವೀಟ್ ಮಾಡಿದೆ.

'ಸಿದ್ದರಾಮಯ್ಯ ಅವರನ್ನು ದೆಹಲಿಗೆ ಕರೆಸಿಕೊಂಡು ಬುದ್ಧಿ ಹೇಳಿದ ಬಳಿಕವೂ ರಾಜ್ಯ ಕಾಂಗ್ರೆಸ್‌ನಲ್ಲಿ ಆಂತರಿಕ ಕಚ್ಚಾಟ ಮೇರೆ ಮೀರಿದೆ. ಕಾಂಗ್ರೆಸ್ ವೈಚಾರಿಕತೆ ಎಂದರೆ ಭ್ರಷ್ಟಾಚಾರ ಹಾಗೂ ಕುಟುಂಬ ರಾಜಕಾರಣ. ಇದರಿಂದ ಹೊರತಾದ ಚಿಂತನೆಗೆ ಅಲ್ಲಿ ಜಾಗವಿಲ್ಲ. ಚುನಾಯಿತ ಪ್ರತಿನಿಧಿಗಳ ಯೋಚನಾ ಲಹರಿಯನ್ನೇ ಕಾಂಗ್ರೆಸ್ ಹಾಳು ಮಾಡಿದೆ' ಎಂದು ತಿಳಿಸಿದೆ.

'ದಿಕ್ಕು ಕಾಣದ ಕಾಂಗ್ರೆಸ್ ದಿಕ್ಕೆಟ್ಟು ಹೋಗಿದೆ. ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ ನೇಪಥ್ಯಕ್ಕೆ ಸರಿದು ಏಳು ದಶಕಗಳೇ ಸಂದಿವೆ. ಈಗಿರುವುದು ಗಾಂಧಿ ಸರ್‌ನೇಮ್ ಹೈಜಾಕ್ ಮಾಡಿದ ಭ್ರಷ್ಟರ ಮತ್ತು ಕುಟುಂಬವಾದಿಗಳ ಕೂಟ. ಈಗಿರುವುದು 'ಭಾರತ ರತ್ನ' ಪ್ರಶಸ್ತಿಯನ್ನು ಸ್ವಯಂ ಘೋಷಣೆ ಮಾಡಿಕೊಂಡ ನಕಲಿ ಗಾಂಧಿ ಕುಟುಂಬದ ಮಹಾನುಭಾವರ ಪಕ್ಷ' ಎಂದು ಹೇಳಿದೆ.

'ತೈಲ ಬೆಲೆ ಏರಿಕೆ: ಈಗ ಆರ್‌ಎಸ್‌ಎಸ್ ಎಲ್ಲಿದೆ?'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಈ ಹಿಂದೆ ಆರ್‌ಎಸ್‌ಎಸ್ ನವರು ತೈಲ ಬೆಲೆ ಏರಿಕೆಯಾದಾಗ ಬೀದಿಗೆ ಬಂದು, ಕಾಂಗ್ರೆಸ್‌ಗೆ ಬಾಯಿಗೆ ಬಂದಂತೆ ಬಯ್ಯುತ್ತಿದ್ದರು. ಈಗ ಎಲ್ಲಿ ಹೋಗಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಟ್ಲರ್ ರೀತಿಯ ಆಡಳಿತ ದೇಶದಲ್ಲಿದೆ. ತಾವು ಏನೇ ಮಾಡಿದರೂ ಜನರು ಮತ ನೀಡುತ್ತಾರೆ ಎಂದು ಬಿಜೆಪಿ ಭಾವಿಸಿದಂತಿದೆ. ಸಮಯ ಬಂದಾಗ ತಕ್ಕ ಪಾಠ ಕಲಿಸುತ್ತಾರೆ' ಎಂದರು.

'ಮೋದಿ ಅವರು ಎರಡು ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದಿದ್ದರು. ಏಳು ವರ್ಷದ ಅವಧಿಯಲ್ಲಿ ಅವರು 15 ಕೋಟಿ ಉದ್ಯೋಗ ಸೃಷ್ಟಿ ಮಾಡಬೇಕಿತ್ತು. ಆದರೆ, ಬಹುತೇಕರು ಇರುವ ಉದ್ಯೋಗವನ್ನೇ ಕಳೆದುಕೊಂಡಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿಯಿವೆ. ಅವುಗಳನ್ನು ಭರ್ತಿ ಮಾಡಿಕೊಂಡರೆ 62 ಲಕ್ಷ ಮಂದಿಗೆ ಉದ್ಯೋಗ ನೀಡಬಹುದಿತ್ತು' ಎಂದು ಹೇಳಿದರು.

'ಜಿಎಸ್‌ಟಿ ಪರಿಹಾರಕ್ಕೆ ಸಂಬಂಧಿಸಿ ರಾಜ್ಯಕ್ಕೆ ಕೇಂದ್ರದಿಂದ ₹20 ಸಾವಿರ ಕೋಟಿಗೂ ಅಧಿಕ ಮೊತ್ತ ಬರ

ಖಾಸಗಿತನದ ಹಕ್ಕಿನ ಉಲ್ಲಂಘನೆಯಿಂದ ಪ್ರತಿ ಪ್ರಜೆಗೂ ರಕ್ಷಣೆ ಕೊಡಬೇಕಿದೆ: ಸುಪ್ರೀಂ ಕೋರ್ಟ್

'ರಾಷ್ಟ್ರೀಯ ಭದ್ರತೆ ನೆಪ ಸದಾ ಸಮ್ಮತವಲ್ಲ'

ನವದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತೆಯ ವಿಚಾರವನ್ನು ಮುಂದಿರಿಸಿ ನ್ಯಾಯಾಂಗವು ಹಿಂದೆ ಸರಿಯುವಂತೆ ಸರ್ಕಾರವು ಪ್ರತಿ ಬಾರಿಯೂ ಮಾಡುವುದು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ಪ್ರಕರಣದ ತನಿಖೆಗೆ ಮೂವರು ತಜ್ಞರ ಸಮಿತಿ ನೇಮಕದ ಆದೇಶ ಹೊರಡಿಸಿದ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಹೀಗೆ ಹೇಳಿದೆ.

'ಪ್ರಜಾಪ್ರಭುತ್ವ ದೇಶದ ನಾಗರಿಕ ಸಮಾಜದ ಸದಸ್ಯರಿಗೆ ಖಾಸಗಿತನದ ಬಗ್ಗೆ ನಿರೀಕ್ಷೆಗಳು ಇರುತ್ತವೆ. ಖಾಸಗಿತನ ಎನ್ನುವುದು ಪತ್ರಕರ್ತರು ಅಥವಾ ಸಾಮಾಜಿಕ ಹೋರಾಟಗಾರರಿಗೆ ಸಂಬಂಧಿಸಿದ ವಿಚಾರ ಮಾತ್ರ ಅಲ್ಲ. ಖಾಸಗಿತನದ ಹಕ್ಕಿನ ಉಲ್ಲಂಘನೆಯಿಂದ ಭಾರತದ ಪ್ರತಿ ಪ್ರಜೆಗೂ ರಕ್ಷಣೆ ಕೊಡಬೇಕಿದೆ. ಈ ನಿರೀಕ್ಷೆಯ ನಮ್ಮ ಅಯ್ಕೆಗಳು ಮತ್ತು ಸ್ವಾತಂತ್ರ್ಯವನ್ನು ಚಲಾಯಿಸಲು ನಮ್ಮನ್ನು ಸಮರ್ಥರನ್ನಾಗಿಸುತ್ತದೆ' ಎಂದು ಪೀಠವು ಹೇಳಿದೆ.

ರಾಷ್ಟ್ರೀಯ ಭದ್ರತೆಗೆ ಅಪಾಯ ಎಂಬ ಸರ್ಕಾರದ ಹೇಳಿಕೆಯು ನ್ಯಾಯಾಂಗವನ್ನು ಮೂಕಪ್ರೇಕ್ಷಕ ಆಗಿಸುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ದೇಶದಲ್ಲಿ ಜನರ ಮೇಲೆ ಬೇಕಾಬಿಟ್ಟಿ ಗೂಢಚರ್ಯೆಗೆ ಅವಕಾಶ ಇಲ್ಲ ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಅವರೇ

ಎನ್.ವಿ. ರಮಣ

ಮೂವರು ಸದಸ್ಯರ ಪೀಠದ ಪರವಾಗಿ 46 ಪುಟಗಳ ಆದೇಶ ಬರೆದಿದ್ದಾರೆ. ರಾಷ್ಟ್ರೀಯ ಭದ್ರತೆಯು ಪರಿಗಣಿಸಬೇಕಾದ ವಿಚಾರ ಹೌದು. ಪ್ರಾಧಿಕಾರಗಳಿಗೆ ಕೆಲವು ಅಧಿಕಾರಗಳೂ ಇವೆ. ಇಂತಹ ವಿಚಾರಗಳಲ್ಲಿ ನ್ಯಾಯಾಂಗದ ಪರಿಶೀಲನೆಗೆ ಮಿತಿಯೂ ಇದೆ. ಹಾಗಿದ್ದರೂ ರಾಷ್ಟ್ರೀಯ ಭದ್ರತೆಯನ್ನು ಮುಂದಿಟ್ಟು ಸರ್ಕಾರವು ಏನು ಬೇಕಾದರೂ ಮಾಡಲು ಅವಕಾಶ ಇಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ.

ಮಾಹಿತಿ ಕ್ರಾಂತಿ ಯುಗ: ಈಗ ಜನರು ಮಾಹಿತಿ ಕ್ರಾಂತಿಯ ಯುಗದಲ್ಲಿ ಬದುಕುತ್ತಿದ್ದಾರೆ. ಜನರ ಎಲ್ಲ ದತ್ತಾಂಶಗಳು ಅಂತರ್ಜಾಲದಲ್ಲಿ ಅಥವಾ ಡಿಜಿಟಲ್ ರೂಪದಲ್ಲಿ ಸಂಗ್ರಹವಾಗಿರುತ್ತವೆ. ವ್ಯಕ್ತಿಯ ಮೇಲೆ ಗೂಢಚರ್ಯೆ ಆರಂಭವಾದರೆ ಆ ವ್ಯಕ್ತಿಯ ಖಾಸಗಿತನದ ಹಕ್ಕು ಉಲ್ಲಂಘನೆಯಾಗುತ್ತದೆ ಎಂದು ಕೋರ್ಟ್ ಹೇಳಿದೆ.

ತಂತ್ರಜ್ಞಾನವು ನಮ್ಮ ಜೀವನಮಟ್ಟವನ್ನು ಸುಧಾರಿಸಲು ಉಪಯುಕ್ತ ಎಂಬುದು ನಿಜ. ಅದೇ ಹೊತ್ತಿಗೆ, ವ್ಯಕ್ತಿಯ ಪವಿತ್ರವಾದ ಖಾಸಗಿತನವನ್ನು ಉಲ್ಲಂಘಿಸುವುದಕ್ಕೂ ಇದನ್ನು ಬಳಸಿಕೊಳ್ಳಬಹುದಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಎಲ್ಲ ಮೂಲಭೂತ ಹಕ್ಕುಗಳ ಹಾಗೆಯೇ ಖಾಸಗಿತನದ ಹಕ್ಕಿಗೂ ನಿರ್ದಿಷ್ಟ ಮಿತಿಗಳು ಇವೆ ಎಂಬುದು ನಿಜ. ಆದರೆ, ಹೀಗೆ ಹೇರಲಾಗುವ ಯಾವುದೇ ನಿರ್ಬಂಧವು ಸಾಂವಿಧಾನಿಕ ಪರಿಶೀಲನೆಯಲ್ಲಿ ಸಿಂಧು ಎಂದು ಪರಿಗಣಿತವಾಗಬೇಕು ಎಂದು ಪೀಠ ಹೇಳಿದೆ.

'ಮಾಧ್ಯಮದ ಪಾತ್ರದ ದಮನ'

ಪತ್ರಿಕಾ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ 'ಮುಖ್ಯವಾದ ಸ್ತಂಭ'. ಪತ್ರಿಕಾ ಮೂಲಗಳನ್ನು ರಕ್ಷಿಸುವುದು ಮಹತ್ವದ್ದಾಗಿರುವುದರಿಂದ ಪೆಗಾಸಸ್ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವುದು ಅಗತ್ಯವಾಗಿದೆ. ಜತೆಗೆ, ಬೇಹುಗಾರಿಕೆಗೆ ಅನುಸರಿಸಲಾದ ತಂತ್ರಗಳು ವ್ಯಾಪಕ ಪರಿಣಾಮವನ್ನು ಬೀರುವ ಸಾಧ್ಯತೆಯೂ ಇದೆ ಎಂದು ಪೀಠ ಹೇಳಿದೆ.

ವಾಕ್‌ಸ್ವಾತಂತ್ರ್ಯದ ಮೇಲೆ ಆಗುವ ಪ್ರತಿಕೂಲ ಪರಿಣಾಮವು ಸಾರ್ವಜನಿಕ ನಿಗಾ ವ್ಯವಸ್ಥೆಯಾದ ಮಾಧ್ಯಮದ ಪಾತ್ರವನ್ನೇ ದಮನ ಮಾಡುತ್ತದೆ. ಇದು ನಿಖರ ಮತ್ತು ವಿಶ್ವಾಸಾರ್ಹ ಸುದ್ದಿ ಕೊಡುವ ಮಾಧ್ಯಮದ ಸಾಮರ್ಥ್ಯವನ್ನೇ ಕುಗ್ಗಿಸಬಹುದು ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

'ಸುಪ್ರೀಂ ಕೋರ್ಟ್ ಮಹತ್ವದ ಹೆಜ್ಜೆ'

ನವದೆಹಲಿ (ಪಿಟಿಐ): ಇಸ್ರೇಲ್‌ನ ಕುತಂತ್ರಾಂಶ ಪೆಗಾಸಸ್ ಬಳಸಿ ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪದ ಬಗ್ಗೆ ತನಿಖೆಗಾಗಿ, ಮೂವರು ಸೈಬರ್ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಿರುವ ಸುಪ್ರೀಂ ಕೋರ್ಟ್ ಕ್ರಮವನ್ನು 'ಮಹತ್ವದ ಹೆಜ್ಜೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಣ್ಣಿಸಿದ್ದಾರೆ.

ಪೆಗಾಸಸ್ ಬಳಕೆ ಬಗ್ಗೆ ಒಂದೋ ಪ್ರಧಾನಿ ಆದೇಶಿಸಿರಬೇಕು ಅಥವಾ ಗೃಹಸಚಿವರು ಆದೇಶಿಸಿರಬೇಕು. ಅವರ ಹೊರತು ಬೇರಾರಿಗೂ ಆ ಅಧಿಕಾರವಿಲ್ಲ. ಇದು ಕಾನೂನುಬಾಹಿರ ಕೆಲಸ ಹಾಗೂ ಪ್ರಜಾಸತ್ತೆ ಛಿದ್ರಗೊಳಿಸುವ ಕ್ರಮ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

'ಸರ್ಕಾರದ ಹೊರಗಿನವರು ಇದರ ಬಳಕೆಗೆ ಆದೇಶ ನೀಡಲು ಸಾಧ್ಯವಿಲ್ಲ ಅಂದ ಮೇಲೆ ಸರ್ಕಾರವೇ ಅನುಮತಿ ಕೊಡಬೇಕು; ಇನ್ನು, ಇದನ್ನು ಯಾರ ವಿರುದ್ಧ ಬಳಸಲಾಗಿದೆ? ಬೇರೆ ದೇಶದವರಿಗೂ ನಮ್ಮ ದೇಶದ ಜನರ ಬಗ್ಗೆ ಮಾಹಿತಿ ಸಿಕ್ಕಿದೆಯೇ ಎಂಬುದು ನಮ್ಮ ಪ್ರಶ್ನೆ. ಈ ವಿಷಯವಾಗಿಯೇ ವಿರೋಧ ಪಕ್ಷದವರೆಲ್ಲ ಸಂಸತ್ತಿನ ಕಳೆದ ಅಧಿವೇಶನದಲ್ಲೂ ಕೇಳಿದ್ದೆವು. ಮುಂದಿನ ಅಧಿವೇಶನದಲ್ಲೂ ಇದನ್ನು ಪ್ರಶ್ನಿಸಲಿದ್ದೇವೆ' ಎಂದರು.

ಸಮಿತಿ ರಚನೆಯ ನಿರ್ಧಾರ ಸ್ವಾಗತಿಸಿರುವ ಸಿಪಿಎಂ, 'ಈ ಪ್ರಕರಣದಲ್ಲಿ ಗೂಢಚಾರಿಕೆ ನಡೆದಿದೆ ಎನ್ನಲಾದ ವ್ಯಕ್ತಿಗಳ ಅಭಿಪ್ರಾಯವನ್ನೂ ಸಮಿತಿಯು ಆಹ್ವಾನಿಸಬೇಕು. ಕುತಂತ್ರಾಂಶವು ಬೇರೆ ದೇಶಗಳ ಮೇಲೆ ಪರಿಣಾಮ ಮಾಡಿದೆಯೇ ಎಂಬುದನ್ನು ಹೇಳುವುದಕ್ಕಾಗಿ ವಿದೇಶಿ ತಜ್ಞರನ್ನೂ ಆಹ್ವಾನಿಸಬೇಕು' ಎಂದು ಅಭಿಪ್ರಾಯಪಟ್ಟಿದೆ.

ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, 'ಇದು, ಮೋದಿ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ಬಯಲು ಮಾಡಲಿದೆ' ಎಂದಿದ್ದಾರೆ.

'ಸರ್ಕಾರದ ಕುತಂತ್ರವು ಹೊರಬಿದ್ದಿದೆ' ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಪ್ರತಿಕ್ರಿಯಿಸಿದ್ದಾರೆ.

ಪ್ರಮಾಣಪತ್ರಕ್ಕೆ ಅನುಗುಣ ನಿರ್ಧಾರ: ಬಿಜೆಪಿ

ತಜ್ಞರ ಸಮಿತಿ ರಚನೆ ಸಂಬಂಧದ ಸುಪ್ರೀಂ ಕೋರ್ಟ್ ನಿರ್ಧಾರವು, ಸರ್ಕಾರವು ಪ್ರಮಾಣಪತ್ರದಲ್ಲಿ ಹೇಳಿರುವುದಕ್ಕೆ ಅನುಗುಣವಾಗಿಯೇ ಇದೆ ಎಂದಿದೆ ಬಿಜೆಪಿ.

ಪೆಗಾಸಸ್‌ಗೆ ಸಂಬಂಧಪಟ್ಟಂತೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹೆಣೆದ ಕಟ್ಟುಕಥೆಗೆ ಕಡಿವಾಣ ಹಾಕಲು, ತಜ್ಞರ ಸಮಿತಿ ರಚಿಸುವುದು ಸೂಕ್ತ. ಈ ವಿಷಯವಾಗಿ ನಿಜಕ್ಕೂ ಆಗಿದ್ದೇನು ಎಂಬುದನ್ನು ಆ ಮೂಲಕ ತಿಳಿಯಬಹುದು ಎಂದು ಸರ್ಕಾರವು ತನ್ನ ಅಫಿಡವಿಟ್‌ನಲ್ಲಿ ಹೇಳಿತ್ತು ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ.

ಸರ್ಕಾರವು ತನ್ನದೇ ಆದ ಸಮಿತಿ ರಚಿಸಲು ಬಯಸಿತ್ತು. ಆದರೆ, ಅದಕ್ಕೆ ಸುಪ್ರೀಂ ಕೋರ್ಟ್ ಅನುಮತಿ ನೀಡಿರಲಿಲ್ಲ. ಈ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪಾತ್ರಾ, 'ಯಾವ ವ್ಯತ್ಯಾಸವೂ ಆಗದು; ತಜ್ಞರು ತಜ್ಞರೇ' ಎಂದರು.

ಐತಿಹಾಸಿಕ ಕ್ಷಣ: ದುಷ್ಯಂತ್ ದವೆ

ನವದೆಹಲಿ: ಸುಪ್ರೀಂ ಕೋರ್ಟ್ ನಿರ್ಧಾರವನ್ನು ಹಿರಿಯ ವಕೀಲರಾದ ದುಷ್ಯಂತ್ ದವೆ, ರಾಕೇಶ್ ದ್ವಿವೇದಿ, ಗೀತಾ ಲೂಥ್ರಾ ಸ್ವಾಗತಿಸಿದ್ದಾರೆ.

ಇದೊಂದು ಐತಿಹಾಸಿಕ ಕ್ಷಣ ಎಂದು ಬಣ್ಣಿಸಿರುವ ಸುಪ್ರೀಂ ಕೋರ್ಟ್ ವಕೀಲರ ಸಂಘದ ಮಾಜಿ ಅಧ್ಯಕ್ಷ ದವೆ, ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ದೇಶದ ನಾಗರಿಕರ ಮೇಲೆ ಗೂಢಚಾರಿಕೆ ನಡೆಸಲಾಗದು ಎಂಬ ಸಂದೇಶವನ್ನು ಈ ಆದೇಶವು ನೀಡಿದೆ ಎಂದು ಹೇಳಿದ್ದಾರೆ.

'ಅರ್ಜಿದಾರರ ಗೆಲವು' ಎಂದು ಹಲವು ಕಾನೂನು ತಜ್ಞರು ಬಣ್ಣಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಬೆಳಿಗ್ಗೆ 7: ವಚನವಾಣಿ, ಬೆಳಿಗ್ಗೆ 7.30: ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್, ಬೆಳಿಗ್ಗೆ 9: ಪ್ರಚಲಿತ, ಬೆಳಿಗ್ಗೆ 9.30: ಸಂಪಾದಕೀಯ, ಸಂಜೆ 4: ಆಟ ನೋಟ

ಪ್ರಜಾವಾಣಿ ಕನ್ನಡ ಧ್ವನಿ

ಮಿಸಳ್ ಹಾಪ್ಚಾ
ಸಾವಿನ ಮನೆಯಂಗಳದಿಂದ...
https://bit.ly/3BlnvZS

ಸೋನಿಯಾ ಗಾಂಧಿ ಅವರೊಂದಿಗೆ ಮಾತುಕತೆ

'ಬಿಜೆಪಿ ವಿರೋಧಿಸುವ ಸಮಾನ ಮನಸ್ಕ ಪಕ್ಷಗಳ ಸಭೆಯನ್ನು ನೀವೇ ಆಯೋಜಿಸಬೇಕು ಎಂಬುದಾಗಿ ಸೋನಿಯಾ ಗಾಂಧಿಯವರಿಗೆ ನಾನು ಹೇಳಿದೆ'

ಕಾಂಗ್ರೆಸ್‌ನೊಂದಿಗೆ ಮೈತ್ರಿ ಸುಳಿವು ನೀಡಿದ ಲಾಲು

ಪಟ್ನಾ (ಪಿಟಿಐ): ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್‌ನೊಂದಿಗೆ ಪಕ್ಷವು ಮೈತ್ರಿ ಮಾಡಿಕೊಳ್ಳಲು ಸಿದ್ಧವಿದೆ ಎಂಬ ಸುಳಿವನ್ನು ಆರ್‌ಜೆಡಿ ಮುಖ್ಯಸ್ಥ ಲಾಲುಪ್ರಸಾದ್ ಬುಧವಾರ ನೀಡಿದರು.

ಬಿಹಾರದ ತಾರಾಪುರ ಹಾಗೂ ಕುಶೇಶ್ವರ ಅಸ್ತಾನ ವಿಧಾನಸಭಾ ಕ್ಷೇತ್ರಗಳಿಗೆ ಇದೇ 30 ನಡೆಯಲಿರುವ ಉಪಚುನಾವಣೆ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ಪ್ರಚಾರ ಸಭೆಗಳಲ್ಲಿ ಪಾಲ್ಗೊಳ್ಳಲು ತೆರಳುವ ಮುನ್ನ ಅವರು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದೆ. ಬಿಜೆಪಿಯನ್ನು ಸೋಲಿಸಲು ಸಮಾನ ಮನಸ್ಕ ಪಕ್ಷಗಳ ಮೈತ್ರಿ ಅಗತ್ಯ. ನೀವು ರಾಷ್ಟ್ರವ್ಯಾಪಿ ಬೆಂಬಲ ಹೊಂದಿರುವ ಪಕ್ಷವೊಂದರ ನಾಯಕಿಯಾಗಿದ್ದೀರಿ. ಕೂಡಲೇ ಇಂಥ ಪಕ್ಷಗಳ ಸಭೆ ಕರೆಯುವಂತೆ ಅವರಿಗೆ ಮನವಿ ಮಾಡಿದೆ' ಎಂದು ಲಾಲುಪ್ರಸಾದ್ ಹೇಳಿದರು.

ಇತ್ತೀಚೆಗೆ ಕಾಂಗ್ರೆಸ್ ಹಾಗೂ ಆರ್‌ಜೆಡಿ ನಡುವಿನ ಸಂಬಂಧ ಉತ್ತಮವಾಗಿಲ್ಲ.

ಉಪಚುನಾವಣೆ ನಡೆಯುತ್ತಿರುವ ಎರಡೂ ಕ್ಷೇತ್ರಗಳಲ್ಲಿ ಏಕಾಂಗಿಯಾಗಿಯೇ ಸ್ಪರ್ಧಿಸುವುದಾಗಿ ಆರ್‌ಜೆಡಿ ಘೋಷಿಸಿದ ನಂತರ ಉಭಯ ಪಕ್ಷಗಳ ಸಂಬಂಧ ಮತ್ತಷ್ಟೂ ಹಳಸಿದೆ.

ಇಂಥ ಸಂದರ್ಭದಲ್ಲಿ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

ಖಾರ್ಗರ್ ಮಾದಕವಸ್ತು ಪ್ರಕರಣದ ಸಾಕ್ಷಿಯ ಹೇಳಿಕೆ

ಖಾಲಿ ಪುಟಕ್ಕೆ ಸಹಿ: ಮತ್ತೊಂದು ಆರೋಪ

ಸಮೀರ್ ವಾಂಖೆಡೆ ವಿರುದ್ಧ ಸಾಕ್ಷ್ಯಗಳು ಲಭ್ಯವಾಗುವ ವರೆಗೂ ಮಾದಕವಸ್ತು ಪ್ರಕರಣದ ತನಿಖೆ ಅವರೇ ಮುನ್ನಡೆಸಲಿದ್ದಾರೆ
ಧ್ಯಾನೇಶ್ವರ್ ಸಿಂಗ್, ಸಮೀರ್ ವಿರುದ್ಧ ಲಂಚ ಆರೋಪದ ತನಿಖೆ ನಡೆಸುತ್ತಿರುವ ಅಧಿಕಾರಿ

ಆರೋಪದ ಬಗ್ಗೆ ಮಾಹಿತಿ ನೀಡಲು ಎನ್‌ಸಿಬಿ ಅಧಿಕಾರಿಗಳು ಕರೆದಿದ್ದಾರೆ. ಅಲ್ಲಿ ನನಗೆ ಏನು ಬೇಕಾದರೂ ಆಗಬಹುದು. ನನಗೆ ಜೀವ ಬೆದರಿಕೆಯೂ ಇದೆ
ಶೇಖರ್ ಕಾಂಬ್ಳೆ, ಖಾರ್ಗರ್ ಮಾದಕವಸ್ತು ಪ್ರಕರಣದ ಪ್ರಮುಖ ಸಾಕ್ಷಿ

ಮುಂಬೈ (ಪಿಟಿಐ): 'ಇದೇ ಆಗಸ್ಟ್‌ನಲ್ಲಿ ಮುಂಬೈನ ಖಾರ್ಗರ್‌ನಲ್ಲಿ ಮಾದಕವಸ್ತು ಪ್ರಕರಣವೊಂದನ್ನು ಎನ್‌ಸಿಬಿ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಬೇಧಿಸಿದ್ದರು. ಆ ಪ್ರಕರಣದಲ್ಲಿ ನನ್ನನ್ನು ಪ್ರಮುಖ ಸಾಕ್ಷಿಯನ್ನಾಗಿಸಿದ್ದರು. ಆಗ ಸಮೀರ್ ಅವರು, 10-12 ಖಾಲಿ ಪುಟಗಳಿಗೆ ನನ್ನ ಸಹಿ ಹಾಕಿಸಿಕೊಂಡಿದ್ದರು' ಎಂದು ಶೇಖರ್ ಕಾಂಬ್ಳೆ ಎಂಬ ವ್ಯಕ್ತಿ ಆರೋಪಿಸಿದ್ದಾರೆ.

ನವಿ ಮುಂಬೈ ನಿವಾಸಿಯಾದ ಶೇಖರ್ ಅವರು, ಖಾರ್ಗರ್ ಮಾದಕವಸ್ತು ಪ್ರಕರಣದಲ್ಲಿ ಮೊದಲ ಸಾಕ್ಷಿಯಾಗಿದ್ದಾರೆ.

'ಖಾರ್ಗರ್‌ನಲ್ಲಿ ನೈಜೀರಿಯಾ ಪ್ರಜೆಗಳು ಡ್ರಗ್ಸ್ ಪಾರ್ಟಿ ನಡೆಸುತ್ತಿದ್ದಾರೆ ಎಂದು ಮಾಹಿತಿ ಇತ್ತು. ನಾನು ಎನ್‌ಸಿಬಿ ಅಧಿಕಾರಿಗಳಿಗೆ ಮಾಹಿತಿದಾರನಾಗಿ ಕೆಲಸ ಮಾಡಿದ್ದೆ. ನನ್ನನ್ನು ಹೊರತುಪಡಿಸಿ ಸಮೀರ್ ಮತ್ತು ಇನ್ನೂ ಐವರು ಅಧಿಕಾರಿಗಳು ಆ ಜಾಗದ ಮೇಲೆ ದಾಳಿ ನಡೆಸಿದ್ದೆವು. ಆದರೆ ಅಲ್ಲಿ ಇದ್ದವರು ತಪ್ಪಿಸಿಕೊಂಡರು. ನಂತರ ಮತ್ತೊಂದು ಜಾಗದ ಮೇಲೆ ದಾಳಿ ನಡೆಸಲಾಯಿತು' ಎಂದು ಶೇಖರ್ ವಿವರಿಸಿದ್ದಾರೆ.

'ಆ ಜಾಗದಲ್ಲಿ 50 ನೈಜೀರಿಯಾ ಪ್ರಜೆಗಳಿದ್ದರು. ಅವರಲ್ಲಿ ಇಬ್ಬರನ್ನು ಬಂಧಿಸಿ, ಎನ್‌ಸಿಬಿ ಕಚೇರಿಗೆ ಕರೆತರಲಾಯಿತು. ಆನಂತರ ಅವರಲ್ಲಿ ಒಬ್ಬರನ್ನು ಕಳುಹಿಸಲಾಯಿತು. ಇನ್ನೊಬ್ಬನ ವಿರುದ್ಧ ಪ್ರಕರಣ ದಾಖಲಿಸಲಾಯಿತು. ಆತನ ಬಳಿ ಡ್ರಗ್ಸ್ ಇರಲಿಲ್ಲ. ಆದರೂ ಆತನ ಬಳಿ 5 ಗ್ರಾಂನಷ್ಟು ಮಾದಕವಸ್ತು ಇತ್ತು ಎಂದು ಪ್ರಕರಣ ದಾಖಲಿಸಲಾಯಿತು. ಸಮೀರ್ ಅವರು 10-12 ಖಾಲಿ ಪುಟಗಳಿಗೆ ನನ್ನ ಸಹಿ ಮಾಡಿಸಿಕೊಂಡರು. ಪಂಚಾನಾಮೆ ಬಗ್ಗೆ ನಾನು ಪ್ರಶ್ನಿಸಿದೆ. ಸಮೀರ್ ಅವರು ನಾನು ಆಮೇಲೆ ಬರೆದುಕೊಳ್ಳುತ್ತೇನೆ ಎಂದರು' ಎಂದು ಶೇಖರ್ ಆರೋಪಿಸಿದ್ದಾರೆ.

'ನಂತರ ಆ ಪ್ರಕರಣದಲ್ಲಿ ನನ್ನನ್ನು ಮೊದಲ ಸಾಕ್ಷಿಯನ್ನಾಗಿ ಮಾಡಲಾಯಿತು. ಈಗ ಸಚಿವ ನವಾಬ್ ಮಲಿಕ್ ಅವರು ಸಮೀರ್ ಅವರು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ಆರೋಪಿಸಿದ ನಂತರ, ನನಗೂ ನನ್ನ ಪ್ರಕರಣ ನೆನಪಾಯಿತು. ಹೀಗಾಗಿ ಈ ಮಾಹಿತಿ ನೀಡಿದೆ' ಎಂದು ಶೇಖರ್ ಹೇಳಿದ್ದಾರೆ.

ಸಮೀರ್ ವಿರುದ್ಧ 2 ತನಿಖೆ

ಒಂದನೇ ಪುಟದಿಂದ...

ಎನ್‌ಸಿಬಿ ಕೇಂದ್ರ ಕಚೇರಿಯ ಮೂವರು ಅಧಿಕಾರಿಗಳು ಬುಧವಾರ ಮುಂಬೈಗೆ ಭೇಟಿ ನೀಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವೆಡೆ ವಿಚಾರಣೆ ನಡೆಸಿದ್ದಾರೆ.

'ನಾವು ಈಗಷ್ಟೇ ತನಿಖೆ ಆರಂಭಿಸಿದ್ದೇವೆ. ಇದು ಅತ್ಯಂತ ಸೂಕ್ಷ್ಮವಾದ ಪ್ರಕರಣ ಮತ್ತು ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ. ಎಲ್ಲಾ ಆಯಾಮಗಳಲ್ಲಿ ತನಿಖೆ ಮತ್ತು ವಿಚಾರಣೆ ನಡೆಸುತ್ತೇವೆ. ನಂತರ ಮಾಧ್ಯಮಗಳಿಗೆ ಮಾಹಿತಿ ನೀಡುತ್ತೇವೆ' ಎಂದು ಧ್ಯಾನೇಶ್ವರ್ ಸಿಂಗ್ ಹೇಳಿದ್ದಾರೆ.

ಮುಂಬೈ ಪೊಲೀಸರೂ ಸಮೀರ್ ವಿರುದ್ಧ ತನಿಖೆ ಆರಂಭಿಸಿದ್ದಾರೆ. ಸಹಾಯಕ ಆಯುಕ್ತರ ಮಟ್ಟದ ಪೊಲೀಸ್ ಅಧಿಕಾರಿಯು ತನಿಖೆಯನ್ನು ಮುನ್ನಡೆಸಲಿದ್ದಾರೆ. ಆದರೆ ಯಾವ ದೂರಿನ ಆಧಾರದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ ಎಂಬುದರ ಮಾಹಿತಿ ಲಭ್ಯವಾಗಿಲ್ಲ. ಮುಂಬೈ ಪೊಲೀಸರು ಪ್ರಭಾಕರ್ ಸೈಲ್ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ.

ಕೋವಿಡ್: 21 ಜಿಲ್ಲೆಗಳಲ್ಲಿ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 21 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, 282 ಮಂದಿ ಸೋಂಕಿತರಾಗಿದ್ದಾರೆ.

ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.86 ಲಕ್ಷಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.17 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.24 ರಷ್ಟು ವರದಿಯಾಗಿದೆ.

ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 142 ಮ

ಪಿಯು ಕಾಲೇಜು: 3,552 ಅತಿಥಿ ಉಪನ್ಯಾಸಕರ ನೇಮಕ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ (2021- 22) ಸಾಲಿನಲ್ಲಿ 3,552 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಾಗಿದೆ.

2020-21ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಗಳಲ್ಲಿ ವಿವಿಧ ಕಾರಣಗಳಿಂದ ತೆರವಾದ ಒಟ್ಟು 2,832 ಉಪನ್ಯಾಸ ಕರಿಗೆ ಎದುರಾಗಿ 1,835 ಅತಿಥಿ ಉಪನ್ಯಾಸಕರನ್ನು ₹ 9 ಸಾವಿರ ಗೌರವಧನದ ಆಧಾರದಲ್ಲಿ ಫೆಬ್ರುವರಿ ತಿಂಗಳಿನಿಂದ ನೇಮಿಸಿ ಕೊಳ್ಳಲಾಗಿತ್ತು.

ಆದರೆ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 8 ಲಕ್ಷದಿಂದ 9 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಹೀಗಾಗಿ, ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. 10 ಗಂಟೆಯ ಕಾರ್ಯಭಾರಕ್ಕೆ ನೀಡುತ್ತಿದ್ದ ₹ 9 ಸಾವಿರ ಗೌರವಧನವನ್ನು ₹ 12 ಸಾವಿರಕ್ಕೆ ಹೆಚ್ಚಿಸುವಂತೆ ಬೇಡಿಕೆ ಬಂದಿತ್ತು. ಹೀಗಾಗಿ, ₹ 12 ಸಾವಿರ ಗೌರವಧನದಂತೆ 6 ತಿಂಗಳಿಗೆ ₹ 34.09 ಕೋಟಿ ಬಿಡುಗಡೆ ಮಾಡುವಂತೆ ಇಲಾಖೆಯ ನಿರ್ದೇಶಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಆದರೆ, ಸರ್ಕಾರ 3,552 ಅತಿಥಿ ಉಪನ್ಯಾಸಕರಿಗೆ ಮಾಸಿಕ ₹ 9,000 ಗೌರವಧನದಂತೆ ಒಟ್ಟು 8 ತಿಂಗಳಿಗೆ ₹ 25.57 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಜಿ. ರಮಾನಂದ ರೆಡ್ಡಿ

ನಿಧನ- 27-10-2021

ಇವರಿಂದ
ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು
ಶ್ರೀ ವೇಮನ ಸೌಹಾರ್ದ ಕ್ರೆಡಿಟ್
ಕೋ. ಆಪರೇಟಿವ್ ನಿ.,
ವಿಲ್ಸನ್‌ಗಾರ್ಡನ್, ಬೆಂಗಳೂರು-560027

5ನೇ ವರ್ಷದ ಪುಣ್ಯಸ್ಮರಣೆ

ಸವಿನೆನಪು
ದಿ|| ಶ್ರೀಮತಿ ಹೊನ್ನಮ್ಮರವರು

ಸಂಸ್ಥಾಪಕರು : ಪ್ರಜ್ವಲ್ ಕಾನ್ಟೆಂಟ್, ಜೈ ಮಾರುತಿ ಆಸ್ಪತ್ರೆ, ಜೈ ಮಾರುತಿ ಕನ್ವೆಷನ್‌ಹಾಲ್, ಸುಂಕದಕಟ್ಟೆ

ಮರಣ : 27-10-2016

ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಫೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ

ಇಂತಿ ದುಃಖತಪ್ತರು:
ಶ್ರೀ ಹೆಚ್.ಎನ್. ಏಸವರಾಜಯ್ಯ. ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು
ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಿಜೆಪಿ ಶಾಸಕ ಕೃಷ್ಣ ಕಲ್ಯಾಣಿ ಟಿಎಂಸಿಗೆ

ಕೋಲ್ಕತ್ತ (ಪಿಟಿಐ): ರಾಯ್‌ಗಂಜ್‌ನ ಬಿಜೆಪಿ ಶಾಸಕ ಕೃಷ್ಣ ಕಲ್ಯಾಣಿ ಅವರು ಬುಧವಾರ ತೃಣಮೂಲ ಕಾಂಗ್ರೆಸ್ ಸೇರ್ಪಡೆಗೊಂಡರು.

ಕಲ್ಯಾಣಿ ಅವರು ಟಿಎಂಸಿ ಸೇರುತ್ತಿರುವ ಐದನೇ ಬಿಜೆಪಿ ಶಾಸಕ-ರಾಗಿದ್ದಾರೆ. ಇದರಿಂದ ಬಿಜೆಪಿಗೆ ತೀವ್ರ ಹಿನ್ನಡೆಯಾದಂತಾಗಿದೆ.

ಟಿಎಂಸಿಯ ಮಾಜಿ ಉತ್ತರ ದಿನಾಜ್‌ಪುರ ಜಿಲ್ಲಾ ಅಧ್ಯಕ್ಷರಾಗಿದ್ದ ಕಲ್ಯಾಣಿ ಅವರು ಕಳೆದ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ಬಿಜೆಪಿಗೆ ಸೇರಿರಾಯ್‌ಗಂಜ್‌ನಿಂದಸ್ಪರ್ಧಿಸಿದ್ದರು.

ಟಿಎಂಸಿ ಪ್ರಧಾನ ಕಾರ್ಯದರ್ಶಿ ಮತ್ತು ಹಿರಿಯ ರಾಜ್ಯ ಸಚಿವ ಪಾರ್ಥ ಚಟರ್ಜಿ ಅವರು ಕಲ್ಯಾಣಿ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು.

'ಯಾವುದೇ ಸ್ವಾಭಿಮಾನಿ ವ್ಯಕ್ತಿ ಬಿಜೆಪಿಯಲ್ಲಿ ಮುಕ್ತವಾಗಿ ಕೆಲಸ ಮಾಡಲು ಸಾಧ್ಯವಿಲ್ಲ' ಎಂದು ಕಲ್ಯಾಣಿ ಅವರು ಇಲ್ಲಿಯ ಟಿಎಂಸಿ ಕೇಂದ್ರ ಕಚೇರಿಯಲ್ಲಿಸುದ್ದಿಗಾರರಿಗೆತಿಳಿಸಿದರು.

ಆರ್ಥಿಕ ಬೆಳವಣಿಗೆಗೆ ಮೋದಿ ಮಾನವೀಯ ಸ್ಪರ್ಶ : ಅಮಿತ್ ಶಾ

ನವದೆಹಲಿ: 'ಸುಧಾರಣೆಗಳನ್ನು ಚಾರ್ಟ್ ಮತ್ತು ಗ್ರಾಫ್‌ಗಳಿಗೆ ಸೀಮಿತಗೊಳಿಸಿದ ಅರ್ಥ ಶಾಸ್ತ್ರಜ್ಞರು ನೀಡಿದ 'ಶುಷ್ಕ' ವ್ಯಾಖ್ಯಾನಕ್ಕೆ ವಿರುದ್ಧವಾಗಿ, ಅದರ ಪ್ರತಿಫಲವು ಸಾಮಾನ್ಯ ಜನರನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕ ಬೆಳವಣಿಗೆಗೆ ಮಾನವೀಯ ಸ್ಪರ್ಶ ನೀಡಿದ್ದಾರೆ' ಎಂದು ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ.

ರಾಜಕೀಯ ಬದುಕಿನಲ್ಲಿ ಚುನಾಯಿತ ಆಡಳಿತಗಾರರಾಗಿ ಮೋದಿಯವರ 20 ವರ್ಷಗಳ ನೆನಪಿಗಾಗಿ ರಾಮಭಾವು ಮ್ಹಾಲಗಿ ಪ್ರಬೋಧಿನಿ ಆಯೋಜಿಸಿದ್ದ 'ಪ್ರಜಾ-ಪ್ರಭುತ್ವವನ್ನು ನೀಡುವುದು: ನರೇಂದ್ರ ಮೋದಿ, ಸರ್ಕಾರದ ಮುಖ್ಯಸ್ಥರಾಗಿ ಎರಡು ದಶಕಗಳು' ಎಂಬ ವಿಷಯ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಹಲವು ಕಾಂಗ್ರೆಸ್ಸಿಗರು ಸಂಪರ್ಕದಲ್ಲಿ: ಅಮರಿಂದರ್ ಸಿಂಗ್

'ಹೆಸರು, ಚಿಹ್ನೆ ಅಂತಿಮಗೊಳ್ಳುತ್ತಿದ್ದಂತೆ ಹೊಸ ರಾಜಕೀಯ ಪಕ್ಷ ಘೋಷಣೆ'

ಅಮರಿಂದರ್ ಸಿಂಗ್

ಚಂಡೀಗಡ (ಪಿಟಿಐ): ಅನೇಕ ಕಾಂಗ್ರೆಸ್ ನಾಯಕರು ತಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಬುಧವಾರ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ತಮ್ಮ ಮೊದಲ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು.

'ನಾನೊಂದು ಹೊಸ ಪಕ್ಷವನ್ನು ಕಟ್ಟುತ್ತಿದ್ದು ಈಗಲೇ ಹೆಸರು ಹೇಳಲು ಸಾಧ್ಯವಿಲ್ಲ. ಚುನಾವಣಾ ಆಯೋಗವು ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ಅನುಮೋದಿಸಿದ ನಂತರವಷ್ಟೆ ಹೇಳಬಲ್ಲೆ. ಅದಕ್ಕಾಗಿ ನಾವು ಕಾಯೋಣ' ಎಂದುಅವರುಹೇಳಿದರು.

ಮುಖ್ಯಾಂಶಗಳು

- ರೈತರ ಸಮಸ್ಯೆ ಪರಿಹರಿಸಲು ಅಮಿತ್ ಶಾ ಭೇಟಿ-ಸಿಂಗ್
- ರಾಜೀನಾಮೆ ನಂತರ ಮೊದಲ ಸುದ್ದಿಗೋಷ್ಠಿ
- ಕಾಂಗ್ರೆಸ್ ನಾಯಕರು ಹೊರಬರುವ ವಿಶ್ವಾಸ

ಕೇಂದ್ರದ ಮೂರು ಹೊಸ ಕೃಷಿ ಕಾನೂನುಗಳ ವಿರುದ್ಧ ಪ್ರತಿಭಟಿಸುತ್ತಿರುವ ರೈತರ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನವನ್ನು ಮುಂದುವರಿಸಲು ತಾವು ಗುರುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡುವುದಾಗಿ ಇದೇ ವೇಳೆ ಅವರು ಹೇಳಿದರು.

ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರೊಂದಿಗಿನ ತೀವ್ರ ಸಂಘರ್ಷದ ನಡುವೆ ಸಿಂಗ್ ಅವರು ಪಂಜಾಬ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಿಂಗ್ ಅವರು, ಕಾಂಗ್ರೆಸ್‌ನ ಅನೇಕ ನಾಯಕರು ತಮ್ಮ ಸಂಪರ್ಕದಲ್ಲಿದ್ದಾರೆ. ಸಮಯ ಬಂದಾಗ ಅವರು ಅಲ್ಲಿಂದ ಬಹಿರಂಗವಾಗಿಯೇ ಹೊರಬರುತ್ತಾರೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಇನ್ನೂ ರಾಜೀನಾಮೆ ನೀಡದಿರುವ ಬಗ್ಗೆ ಉತ್ತರಿಸಿದ ಅವರು, 'ನಾನು ಕಾಂಗ್ರೆಸ್‌ನಲ್ಲಿ 50 ವರ್ಷ ಕಳೆದಿದ್ದೇನೆ. ಇನ್ನೂ 10 ದಿನ ಉಳಿಯುವುದರಿಂದ ಯಾವ ವ್ಯತ್ಯಾಸ-ವಾಗುತ್ತದೆ? ಎಂದು ಪ್ರಶ್ನಿಸಿದರು.

ಮುಂದಿನ ವರ್ಷದ ಆರಂಭದಲ್ಲಿ ಪಂಜಾಬ್‌ನಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ.

ಹಬ್ಬಕ್ಕೆ ಖರೀದಿ... ಮುಂಬೈನ ಮಾರುಕಟ್ಟೆಯೊಂದರಲ್ಲಿ ಬುಧವಾರ ದೀಪಾವಳಿ ಹಬ್ಬಕ್ಕೂ ಮುನ್ನ ಜನರು ಖರೀದಿಯಲ್ಲಿ ತೊಡಗಿದ್ದರು -ಪಿಟಿಐ ಚಿತ್ರ

'ಮುಂದೊಂದು ದಿನ ಇಡೀ ಕಾಶ್ಮೀರ ನಮ್ಮದು'

ಭಾರತೀಯ ಪಡೆಗಳ ಬದ್ಗಾಮ್ ಲ್ಯಾಂಡಿಂಗ್‌ನ 75ನೇ ವಾರ್ಷಿಕೋತ್ಸವ ನಿಮಿತ್ತ ಕಾಶ್ಮೀರದ ಶ್ರೀನಗರದಲ್ಲಿ ಬುಧವಾರ ಭಾರತೀಯ ಸೈನಿಕರು ಸೈನ್ಯದ ಲ್ಯಾಂಡಿಂಗ್‌ನ ಮರುಸೃಷ್ಟಿ ಪ್ರದರ್ಶಿಸಿದರು (ಎಎಫ್‌ಪಿ ಚಿತ್ರ)

ಶ್ರೀನಗರ (ಪಿಟಿಐ): ಪಾಕ್ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ವಶಪಡಿಸಿಕೊಳ್ಳುವ ಯಾವುದೇ ಯೋಜನೆ ಸದ್ಯಕ್ಕೆ ಇಲ್ಲ. ಆದರೆ, ಮುಂದೊಂದು ದಿನ ಭಾರತವು ಇಡೀ ಕಾಶ್ಮೀರವನ್ನು ತನ್ನ-ದಾಗಿಸಿಕೊಳ್ಳುವ ವಿಶ್ವಾಸವಿದೆ ಎಂದು ವಾಯುಪಡೆಯ ಉನ್ನತ ಅಧಿಕಾರಿ ಯೊಬ್ಬರು ಬುಧವಾರ ಹೇಳಿದ್ದಾರೆ.

ಭಾರತೀಯ ಪಡೆಗಳ ಬದ್ಗಾಮ್ ಲ್ಯಾಂಡಿಂಗ್‌ನ 75ನೇ ವಾರ್ಷಿಕೋತ್ಸವದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ವೆಸ್ಟರ್ನ್ ಏರ್ ಕಮಾಂಡ್‌ನ ಏರ್ ಆಫಿರ್ಸ್ ಕಮಾಂಡಿಂಗ್ ಇನ್ ಚೀಫ್ (ಎಒಸಿ-ಇನ್-ಸಿ) ಏರ್ ಮಾರ್ಷಲ್ ಅಮಿತ್ ದೇವ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಪಿಒಕೆಯಲ್ಲಿರುವ ನೆಲೆಸಿರುವ ಜನರನ್ನು ಪಾಕಿಸ್ತಾನಿಗಳು ನ್ಯಾಯಯುತವಾಗಿಯೇನು ನಡೆಸಿಕೊಳ್ಳುತ್ತಿಲ್ಲ ಎಂದು ಹೇಳಿದರು.

'ಭಾರತೀಯ ವಾಯುಪಡೆ ಮತ್ತು ಸೇನೆಯು ನಡೆಸಿದ ಎಲ್ಲಾ ಚಟುವಟಿಕೆಗಳು (1947ರ ಅಕ್ಟೋಬರ್ 27ರಂದು) ಕಾಶ್ಮೀರದ ಈ ಭಾಗದ ಸ್ವಾತಂತ್ರ್ಯ ಖಾತ್ರಿಪಡಿಸುವಲ್ಲಿ ಕಾರಣವಾಯಿತು. ಮುಂದೊಂದು ದಿನ ಪಾಕ್ ಆಕ್ರಮಿತ ಕಾಶ್ಮೀರವೂ ಕಾಶ್ಮೀರದ ಈ ಭಾಗಕ್ಕೆ ಸೇರುತ್ತದೆ. ಮುಂಬರುವ ವರ್ಷಗಳಲ್ಲಿ ನಾವು ಇಡೀ ಕಾಶ್ಮೀರ ಹೊಂದುತ್ತೇವೆ ಎಂಬ ಖಾತ್ರಿ ನನಗಿದೆ' ಎಂದು ಅವರು ಹೇಳಿದರು.

ಪಿಒಕೆ ವಶಪಡಿಸಿಕೊಳ್ಳುವ ಯೋಜನೆ ಇದೆಯೇ ಎಂದು ಸುದ್ದಿಗಾರರು ಕೇಳಿದಾಗ, 'ಸದ್ಯಕ್ಕೆ ಯಾವುದೇ ಯೋಜನೆ ಇಲ್ಲ' ಎಂದು ಏರ್ ಮಾರ್ಷಲ್ ದೇವ್ ಸ್ಪಷ್ಟಪಡಿಸಿದರು.

'(ಇಡೀ) ಕಾಶ್ಮೀರ ಒಂದೇ, ರಾಷ್ಟ್ರವೂ ಒಂದೇ. ಎರಡೂ ಕಡೆಯ ಜನರು ಅದೇ ಭಾವನೆಯಲ್ಲಿದ್ದಾರೆ. ರಾಷ್ಟ್ರಗಳ ಒಂದುಗೂಡುವಿಕೆಗೆ ಇತಿಹಾಸವು ಸಾಕ್ಷಿಯಾಗಲಿದೆ. ರಾಷ್ಟ್ರ ಒಗ್ಗೂಡಿಸಲು ಸದ್ಯಕ್ಕೆ ನಮ್ಮ ಬಳಿ ಯಾವುದೇ ಯೋಜನೆ ಇಲ್ಲ. ಆದರೆ, ರಾಷ್ಟ್ರ ಬೆಸೆಯಲು ದೇವರ ಇಚ್ಛೆ ಯಾವಾಗಲೂ ಇದ್ದೇ ಇರುತ್ತದೆ. ಏಕೆಂದರೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಜನರನ್ನು ಪಾಕಿಸ್ತಾನಿಗಳು ನ್ಯಾಯಯುತವಾಗಿ ನಡೆಸಿಕೊಳ್ಳುತ್ತಿಲ್ಲ' ಎಂದು ಅವರು ಹೇಳಿದರು.

ಪಾಕಿಸ್ತಾನಿ ಬುಡಕಟ್ಟು ಜನರ ದಾಳಿಯ ನಂತರ ಅಂದಿನ ಮಹಾರಾಜ ಹರಿ ಸಿಂಗ್ ಅವರು ಭಾರತದೊಂದಿಗೆ ಕಾಶ್ಮೀರ ಸೇರ್ಪಡೆಯ ಒಪ್ಪಂದಕ್ಕೆ ಸಹಿ ಹಾಕಿದ ಒಂದು ದಿನದ ನಂತರ, 1947ರ ಅ. 27ರಂದು ಭಾರತೀಯ ಸೈನಿಕರು ಕಾಶ್ಮೀರಕ್ಕೆ ಬಂದಿಳಿದಿದ್ದರು.

ಸಾಬರಮತಿ ಆಶ್ರಮದ ಪುನರ್ ಅಭಿವೃದ್ಧಿಗೆ ವಿರೋಧ

ಗುಜರಾತ್ ಹೈಕೋರ್ಟ್‌ಗೆ ತುಷಾರ್ ಗಾಂಧಿ ಪಿಐಎಲ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಲ್ಲಿನ ಸಾಬರಮತಿ ಆಶ್ರಮದ ಉದ್ದೇಶಿತ ಪುನರ್ ಅಭಿವೃದ್ಧಿಯನ್ನು ವಿರೋಧಿಸಿ ಮಹಾತ್ಮಾ ಗಾಂಧಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ಅವರು ಗುಜರಾತ್ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ದೀಪಾವಳಿ ರಜೆಯ ನಂತರ ಹೈಕೋರ್ಟ್‌ನಲ್ಲಿ ಈ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

'ಪುನರ್ ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳ ಅತಿಯಾದ ಪಾಲ್ಗೊಳ್ಳುವಿಕೆ ಕಂಡು ಬರುತ್ತಿದೆ. ಹಾಗೂ ಅನೇಕ ವರ್ಷಗಳಿಂದ ಹಲವು ಸಂಘಟನೆಗಳಿಂದ ಸಂರಕ್ಷಿಸಲಾಗಿರುವ ಈ ಆಶ್ರಮದ ಸ್ವರೂಪವೇ ಬದಲಾದಲ್ಲಿ, ಗಾಂಧೀಜಿ ಅವರ ತತ್ವಾದರ್ಶಗಳು ಮಹತ್ವ ಕಳೆದುಕೊಳ್ಳಬಹುದು' ಎಂದು ಅರ್ಜಿದಾರರು ಕಳವಳ ವ್ಯಕ್ತಪಡಿಸಿದ್ದಾರೆ.

ಆಶ್ರಮದ ಪುನರ್ ಅಭಿವೃದ್ಧಿ ಯೋಜನೆಯಿಂದ ಗಾಂಧೀಜಿಯವರ ಕಲ್ಪನೆ, ಆಶ್ರಮದ ಸ್ವಾಯತ್ತತೆ ಹಾಗೂ ಸ್ಥಾಪನೆಯ ಉದ್ದೇಶಕ್ಕೆ ಯಾವ ರೀತಿ ಧಕ್ಕೆಯಾಗಲಿದೆ ಎಂಬುದರ ಕುರಿತು ಸುದೀರ್ಘ ಸಮಾಲೋಚನೆ ನಡೆಸಲಾಗಿದೆ. ಅಲ್ಲದೆ, ಅಗತ್ಯ ದಾಖಲೆಗಳನ್ನು ಸಂಗ್ರಹಿಸಿದ ಬಳಿಕವೇ ಪಿಐಎಲ್ ಸಲ್ಲಿಸಲಾಗಿದೆ ಎಂದು 61 ವರ್ಷ ವಯಸ್ಸಿನ ತುಷಾರ್ ಗಾಂಧಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಗುಜರಾತ್ ಸರ್ಕಾರ, ನವದೆಹಲಿಯಲ್ಲಿರುವ ಗಾಂಧಿ ಸ್ಮಾರಕ ನಿಧಿ, ಸಾಬರಮತಿ ಆಶ್ರಮ ಸಂರಕ್ಷಣೆ ಮತ್ತು ಸ್ಮಾರಕ ಟ್ರಸ್ಟ್, ಸಾಬರಮತಿ ಆಶ್ರಮ ಗೋಶಾಲಾ ಟ್ರಸ್ಟ್, ಹರಿಜನ ಆಶ್ರಮ ಟ್ರಸ್ಟ್, ಹರಿಜನ ಸೇವಕ ಸಂಘ ಮತ್ತು ಖಾದಿ ಗ್ರಾಮೋದ್ಯೋಗ ಪ್ರಯೋಗ ಸಮಿತಿ, ಸಾಬರಮತಿ ನದಿ ಅಭಿವೃದ್ಧಿ ನಿಗಮ ಹಾಗೂ ಅಹಮದಾಬಾದ್ ಮಹಾನಗರ ಪಾಲಿಕೆಗಳ ವಿರುದ್ಧ ಪಿಐಎಲ್ ಸಲ್ಲಿಸಲಾಗಿದೆ.

ಮಹಾತ್ಮಾ ಗಾಂಧೀಜಿ ಅವರು 30 ಎಕರೆ ಪ್ರದೇಶದಲ್ಲಿ ಸ್ಥಾಪಿಸಿರುವ ಈ ಆಶ್ರಮವನ್ನು ₹ 1,200 ಕೋಟಿ ವೆಚ್ಚದಡಿ ಪುನರ್ ಅಭಿವೃದ್ಧಿಪಡಿಸುವ ಯೋಜನೆ ಕೈಗತ್ತಿಕೊಳ್ಳುವ ಮೂಲಕ, ಅದರ ಮೂಲ ಚಹರೆಯನ್ನೇ ಬದಲಿಸಲಾಗುತ್ತಿದೆ ಎಂದು ಅನೇಕ ಸಂಘಟನೆಗಳು ಆರೋಪಿಸಿವೆ.

ನೂತನ ಗಡಿ ಕಾಯ್ದೆ: ಚೀನಾ ಕ್ರಮಕ್ಕೆ ಭಾರತ ಟೀಕೆ

ನವದೆಹಲಿ (ಪಿಟಿಐ): ನೂತನ ಗಡಿ ಕಾನೂನನ್ನು ರೂಪಿಸಿರುವ ಚೀನಾದ ಕ್ರಮವನ್ನು ಭಾರತ ಬುಧವಾರ ಟೀಕಿಸಿದೆ.

'ಚೀನಾ ಕೈಗೊಂಡಿರುವ ಈ ಏಕಪಕ್ಷೀಯ ನಿರ್ಧಾರ ಕಳವಳಕಾರಿ. ಇದು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹಾಗೂ ಗಡಿ ನಿರ್ವಹಣೆ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

'ನೂತನ ಗಡಿ ಕಾಯ್ದೆಯ ನೆಪದಲ್ಲಿ ಎರಡೂ ದೇಶಗಳ ನಡುವಿನ ಗಡಿಯಲ್ಲಿನ ಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಿಸಲು ಚೀನಾ ಮುಂದಾಗದು ಎಂಬ ನಿರೀಕ್ಷೆಯನ್ನು ಭಾರತ ಹೊಂದಿದೆ' ಎಂದು ಅವರು ಹೇಳಿದ್ದಾರೆ.

'ಗಡಿಯಲ್ಲಿ ಶಾಂತಿ ಕಾಪಾಡಿ-ಕೊಳ್ಳುವುದಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳ ನಡುವೆ ಈಗಾಗಲೇ ಏರ್ಪಟ್ಟಿರುವ ಮಾತುಕತೆ ಮೇಲೆ ನೂತನ ಕಾಯ್ದೆಯಡಿ ಕೈಗೊಳ್ಳುವ ಕ್ರಮಗಳು ಪರಿಣಾಮ ಬೀರುವುದಿಲ್ಲ' ಎಂದೂ ಅವರು ಪ್ರತಿಪಾದಿಸಿದರು.

ತ್ರಿಪುರಾ: ಕೆಲವೆಡೆ ಉದ್ವಿಗ್ನ ಪರಿಸ್ಥಿತಿ, ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ದಾಳಿಯ ಪರಿಣಾಮ ತ್ರಿಪುರಾದ ಕೆಲವು ಭಾಗಗಳಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ.

ತ್ರಿಪುರಾದ ಎರಡು ಉಪವಿ

11 ಕ್ರೀಡಾಪಟುಗಳಿಗೆ ಮೇಜರ್ ಧ್ಯಾನಚಂದ್ ಖೇಲ್ ರತ್ನ; 35 ಮಂದಿಗೆ ಅರ್ಜುನ ಪ್ರಶಸ್ತಿ

ನೀರಜ್, ಲವ್ಲಿನಾಗೆ ಖೇಲ್‌ರತ್ನ: ಶಿಫಾರಸು

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್ ನೀರಜ್ ಚೋಪ್ರಾ ಸೇರಿದಂತೆ 11 ಕ್ರೀಡಾಪಟುಗಳಿಗೆ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪುರಸ್ಕಾರ ನೀಡಲು ಶಿಫಾರಸು ಮಾಡಲಾಗಿದೆ.

ಟೋಕಿಯೊದಲ್ಲಿ ಬೆಳ್ಳಿ ಪದಕ ಜಯಿಸಿದ್ದ ಕುಸ್ತಿಪಟು ರವಿ ದಹಿಯಾ, ಕಂಚಿನ ಪದಕ ಜಯಿಸಿದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್, ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್, ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್, ಭಾರತ ಫುಟ್‌ಬಾಲ್ ತಂಡದ ನಾಯಕ ಸುನೀಲ್ ಚೆಟ್ರಿ ಅವರೂ ಈ ಪಟ್ಟಿಯಲ್ಲಿದ್ದಾರೆ. ಚೆಟ್ರಿ ಈ ಗೌರವಕ್ಕೆ ಆಯ್ಕೆಯಾಗಿರುವ ಭಾರತದ ಮೊದಲ ಫುಟ್‌ಬಾಲ್ ಆಟಗಾರರಾಗಿದ್ದಾರೆ.

ನೀರಜ್ ಚೋಪ್ರಾ

ಮಿಥಾಲಿ ರಾಜ್ | ಲವ್ಲಿನಾ | ಅವನಿ ಲೇಖರಾ | ಪ್ರಮೋದ್ | ಕೃಷ್ಣ ನಾಗರ್

ಪಿ.ಆರ್. ಶ್ರೀಜೇಶ್ | ರವಿ ದಹಿಯಾ | ಸುಮಿತ್ ಅಂಟಿಲ್ | ಸುನೀಲ್ ಚೆಟ್ರಿ | ಮನೀಷ್

ಪ್ಯಾರಾಲಿಂಪಿಕ್ಸ್ ಪದಕ ವಿಜೇತರಾದ ಶೂಟರ್ ಅವನಿ ಲೇಖರಾ, ಮನೀಷ್ ನರ್ವಾಲ್, ಜಾವೆಲಿನ್ ಥ್ರೋ ಅಥ್ಲೀಟ್ ಸುಮಿತ್ ಅಂಟಿಲ್, ಬ್ಯಾಡ್ಮಿಂಟನ್ ಆಟಗಾರರಾದ ಪ್ರಮೋದ್ ಭಗತ್, ಕೃಷ್ಣ ನಾಗರ್ ಅವರಿಗೂ ಖೇಲ್‌ರತ್ನ ಪ್ರದಾನ ಮಾಡುವಂತೆ ಶಿಫಾರಸು ಮಾಡಲಾಗಿದೆ.

ಆಯ್ಕೆ ಸಮಿತಿಯು ಬುಧವಾರ ಶಿಫಾರಸುಗಳನ್ನು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಸಲ್ಲಿಸಿದೆ.

ಹೋದ ಸಲ ಐವರಿಗೆ ಈ ಪ್ರಶಸ್ತಿ ನೀಡಲಾಗಿತ್ತು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ನಾಲ್ವರು ಸೇರಿದ್ದರು. ಆದರೆ ಈ ಬಾರಿ 11 ಮಂದಿಗೆ ಪ್ರಶಸ್ತಿ ನೀಡಲು ಶಿಫಾರಸು ಮಾಡಲಾಗಿದೆ.

ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ಹೋದ ಆಗಸ್ಟ್‌ನಲ್ಲಿಯೇ ಪ್ರಕಟಿಸಬೇಕಿತ್ತು. ಆದರೆ, ಪ್ಯಾರಾಲಿಂಪಿಕ್ಸ್ (ಆ. 24 ರಿಂದ ಸೆ 5) ಮುಗಿದ ಮೇಲೆ ಸಾಧಕರನ್ನು ಗುರುತಿಸಿ ಆಯ್ಕೆ ಮಾಡಲು ಪ್ರಕ್ರಿಯೆಯನ್ನು ಮುಂದೂಡಲಾಗಿತ್ತು.

ಕನ್ನಡಿಗ ಸುಹಾಸ್‌ಗೆ ಅರ್ಜುನ

ಅರ್ಜುನ ಪ್ರಶಸ್ತಿಗಾಗಿ 35 ಸಾಧಕರನ್ನೂ ಈ ಸಮಿತಿಯು ಶಿಫಾರಸು ಮಾಡಿದೆ. ಹೋದ ವರ್ಷ 27 ಕ್ರೀಡಾಪಟುಗಳಿಗೆ ನೀಡಲಾಗಿತ್ತು.

ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಪದಕ ಜಯಿಸಿರುವ, ಕನ್ನಡಿಗ ಸುಹಾಸ್ ಯತಿರಾಜ್, ಟೇಬಲ್ ಟೆನಿಸ್ ಆಟಗಾರ್ತಿ ಭಾವಿನಾ ಪಟೇಲ್, ಹೈಜಂಪ್ ಅಥ್ಲೀಟ್ ನಿಶಾದ್ ಕುಮಾರ, ಟೋಕಿಯೊದಲ್ಲಿ ಕಂಚಿನ ಪದಕ ಜಯಿಸಿದ ಭಾರತ ಹಾಕಿ ತಂಡದ ಆಟಗಾರರು ಮತ್ತು ಕ್ರಿಕೆಟಿಗ ಶಿಖರ್ ಧವನ್ ಅವರಿಗೆ ಪ್ರಶಸ್ತಿ ನೀಡಲು ಶಿಫಾರಸು ಮಾಡಲಾಗಿದೆ.



ಸುಹಾಸ್ ಯತಿರಾಜ್

ಸುಹಾಸ್ ಉತ್ತರ-ಪ್ರದೇಶದಲ್ಲಿ ಐಎಎಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್: ಕುಶಾಗ್ರ ಮಿಂಚು

ಮತ್ತೆ ದಾಖಲೆ ಬರೆದ ಶ್ರೀಹರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ದೆಹಲಿಯ ಕುಶಾಗ್ರ ರಾವತ್ ರಾಜ್ಯ ಈಜು ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನವೂ ದಾಖಲೆ ನಿರ್ಮಿಸಿದರು.

ಪುರುಷರ 100 ಮೀಟರ್ಸ್ ಫ್ರೀಸ್ಟೈಲ್ ವಿಭಾಗದಲ್ಲಿ ಶ್ರೀಹರಿ ನಟರಾಜ್ ಮತ್ತು 800 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಕುಶಾಗ್ರ ಪಾರಮ್ಯ ಮೆರೆದರು.

ಬುಧವಾರ 49.94 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಶ್ರೀಹರಿ ತಮ್ಮದೇ ದಾಖಲೆ ಉತ್ತಮಪಡಿಸಿಕೊಂಡರು. ಈ ಹಿಂದೆ ಅವರು 50.17 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ್ದರು. ಕುಶಾಗ್ರ 8 ನಿಮಿಷ 8.32 ಸೆಕೆಂಡುಗಳಲ್ಲಿ ಗುರಿ ತಲುಪಿ ತಮ್ಮದೇ ಹೆಸರಿನಲ್ಲಿದ್ದ ದಾಖಲೆ ಮುರಿದರು. ಭೋಪಾಲ್‌ನಲ್ಲಿ 2019ರಲ್ಲಿ ನಡೆದ ಕೂಟದಲ್ಲಿ ಅವರು ಮೇಲುಗೈ ಸಾಧಿಸಿದ್ದರು.

ಮೊದಲ ದಿನ ಪುರುಷರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಶ್ರೀಹರಿ ಮತ್ತು ಕುಶಾಗ್ರ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ದಾಖಲೆ ನಿರ್ಮಿಸಿದ್ದರು.

ಎರಡನೇ ದಿನದ ಫಲಿತಾಂಶಗಳು: ಪುರುಷರ 800 ಮೀಟರ್ಸ್ ಫ್ರೀಸ್ಟೈಲ್: ಕುಶಾಗ್ರ ರಾವತ್ (ದೆಹಲಿ)-1. ಕಾಲ: 8:08.32, ಅನೀಶ್ ಎಸ್.ಗೌಡ (ಕರ್ನಾಟಕ)-2, ವೇದಾಂತ್ ಮಾಧವನ್ (ಮಹಾರಾಷ್ಟ್ರ)-3; 200 ಮೀ ಮೆಡ್ಲೆ: ಶಾನ್ ಗಂಗೂಲಿ (ಕರ್ನಾಟಕ)-1. ಕಾಲ: 2:07.37, ಶಿವ ಎಸ್ (ಕರ್ನಾಟಕ)-2, ರಾಬಿನ್ ಸಿಂಗ್ (ಆರ್‌ಎಸ್‌ಪಿಬಿ)-3; 100 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಕರ್ನಾಟಕ)-1. ಕಾಲ: 49.94, ಆನಂದ್ ಎ.ಎಸ್ (ಎಸ್‌ಎಸ್‌ಸಿಬಿ)-2, ತನಿಷ್ ಜಾರ್ಜ್ ಮ್ಯಾಥ್ಯೂ (ಕರ್ನಾಟಕ)-3; 50 ಮೀ ಬ್ರೆಸ್ಟ್‌ಸ್ಟ್ರೋಕ್: ಧನುಷ್ ಎಸ್ (ತಮಿಳುನಾಡು)-1.ಕಾಲ: 29.27,ವೈಷ್ಣವ್ ಹೆಗಡೆ (ಎಸ್‌ಎಸ್‌ಸಿಬಿ)-2, ಲೋಹಿತ್ ಎಂ (ಆರ್‌ಎಸ್‌ಪಿಬಿ)-3. ಮಹಿಳೆಯರ 1500 ಮೀಟರ್ಸ್ ಫ್ರೀಸ್ಟೈಲ್: ಪ್ರಾಚಿ ಟೋಕಾಸ್ (ದೆಹಲಿ)-1. ಕಾಲ: 17:47.28, ರಿಚಾ ಮಿಶ್ರಾ (ಪೊಲೀಸ್)-2, ವೃತ್ತಿ ಅಗರವಾಲ್ (ತೆಲಂಗಾಣ)-3; 200 ಮೀ ಮೆಡ್ಲೆ: ಅಪೇಕ್ಷಾ ಫೆರ್ನಾಂಡಿಸ್ (ಮಹಾರಾಷ್ಟ್ರ)-1. ಕಾಲ: 2:26.28, ದಿಶಾ ಭಂಡಾರಿ (ಉತ್ತರಪ್ರದೇಶ)-2, ಜೇಡಿಡ (ಕರ್ನಾಟಕ)-3; 100 ಮೀ ಫ್ರೀಸ್ಟೈಲ್: ಶಿವಾಂಗಿ ಸಮ (ಅಸ್ಸಾಂ)-1. ಕಾಲ: 59.07, ಅವಂತಿಕಾ ಚವಾಣ್ (ಆರ್‌ಎಸ್‌ಪಿಬಿ)-2, ಶಿವಾನಿ ಕಟಾರಿಯ (ಹರಿಯಾಣ)-3; 50 ಮೀ ಬ್ರೆಸ್ಟ್‌ಸ್ಟ್ರೋಕ್: ಚಾಹತ್ ಅರೋರ (ಪಂಜಾಬ್)-1. ಕಾಲ: 33.86, ಅಪೇಕ್ಷಾ ಫೆರ್ನಾಂಡಿಸ್ (ಮಹಾರಾಷ್ಟ್ರ)-2, ಮಾನವಿ ವರ್ಮಾ (ಕರ್ನಾಟಕ)-3. 4x50 ಮೀ ಫ್ರೀಸ್ಟೈಲ್: ಕರ್ನಾಟಕ-1. ಕಾಲ: 1:41.73, ಮಹಾರಾಷ್ಟ್ರ-2, ಆರ್‌ಎಸ್‌ಪಿಬಿ-3.

200 ಮೀಟರ್ಸ್ ಮೆಡ್ಲೆಯಲ್ಲಿ ಮೊದಲಿಗರಾದ ಕರ್ನಾಟಕದ ಶಾನ್ ಗಂಗೂಲಿ ಮುನ್ನುಗ್ಗಿದ ಪರಿ –ಪ್ರಜಾವಾಣಿ ಚಿತ್ರ/ಎಸ್‌ಕೆ.ದಿನೇಶ್

ವಾಟರ್ ಪೋಲೊ: ಕರ್ನಾಟಕಕ್ಕೆ ಸೋಲು

ಕರ್ನಾಟಕ ತಂಡ ವಾಟರ್ ಪೋಲೊದಲ್ಲಿ ಮಹಿಳಾ ವಿಭಾಗದ್ದೂ ಸೇರಿದಂತೆ ದಿನದ ಮೂರು ಪಂದ್ಯಗಳಲ್ಲೂ ಸೋಲನುಭವಿಸಿತು. ನೆಟ್ಟಕಲ್ಲಪ್ಪ ಈಜು-ಕೇಂದ್ರದಲ್ಲಿ ನಡೆಯುತ್ತಿರುವ ಸ್ಪರ್ಧೆಗಳ ಪುರುಷರ ವಿಭಾಗದ ಪಂದ್ಯಗಳಲ್ಲಿ ಕರ್ನಾಟಕ ತಂಡ ಆರ್‌ಎಸ್‌ಪಿಬಿ ಮತ್ತು ಮಹಾರಾಷ್ಟ್ರ ವಿರುದ್ಧ ಸೋತಿತು. ಮಹಿಳಾ ವಿಭಾಗದಲ್ಲಿ ಮಹಾರಾಷ್ಟ್ರಕ್ಕೆ ಮಣಿಯಿತು.

ನವೆಂಬರ್ 7ರಂದು ಚೆಸ್ ಟೂರ್ನಿ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯು ನವೆಂಬರ್ 7ರಂದು ಚೆಸ್ ಟೂರ್ನಿಯನ್ನು ಆಯೋಜಿಸಲಿದೆ.

ಏಳು, ಒಂಬತ್ತು, 11, 14 ವರ್ಷದೊಳಗಿನವರು ಹಾಗೂ ಮುಕ್ತ ವಿಭಾಗದಲ್ಲಿ ನಡೆಯುವ ಈ ಟೂರ್ನಿಯು ಹೊಸಕೋಟೆ ತಾಲ್ಲೂಕಿನ ಚನ್ನಸಂದ್ರ ಮುಖ್ಯರಸ್ತೆಯಲ್ಲಿರುವ ಶ್ರೀ ಸಾಯಿ ಪ್ಯಾಲೇಸ್ ಸಭಾಭವನದಲ್ಲಿ ನಿಗದಿಯಾಗಿದೆ.

ಹೆಸರು ನೋಂದಾಯಿಸಲು ನವೆಂಬರ್ 5 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ www.karnatakachess.com ವೆಬ್‌ಸೈಟ್ ಅಥವಾ ಸಂಸ್ಥೆಯ ಕಾರ್ಯದರ್ಶಿ ಎ. ಚಿದಾನಂದ (ಮೊಬೈಲ್ ಸಂಖ್ಯೆ 9663405589) ಅವರನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಶ್ರೀಕಾಂತ್, ಸೈನಾ ಅಭಿಯಾನ ಅಂತ್ಯ

ಸಿಂಧು, ಲಕ್ಷ್ಯ ಸೇನ್ ಗೆಲುವಿನ ಆರಂಭ

ಪ್ಯಾರಿಸ್ (ಪಿಟಿಐ): ಪ್ಯಾರಿಸ್ (ಪಿಟಿಐ): ಭಾರತದ ಪಿ.ವಿ ಸಿಂಧು ಹಾಗೂ ಲಕ್ಷ್ಯ ಸೇನ್ ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ. ಆದರೆ ಕಿದಂಬಿ ಶ್ರೀಕಾಂತ್ ಹಾಗೂ ಸೈನಾ ನೆಹ್ವಾಲ್ ಅಭಿಯಾನ ಅಂತ್ಯವಾಯಿತು.

ಎರಎಉ ಬಾರಿ ಒಲಿಂಪಿಕ್ಸ್ ಪದಕ ಗೆದ್ದಿರುವ ಸಿಂಧು, ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ 21-15, 21-18ರಿಂದ ಡೆನ್ಮಾರ್ಕ್‌ನ ಡಾವಲ್ ಜೇಕಬ್‌ಸನ್ ಅವರ ಸವಾಲು ಮೀರಿದರು.

ಇನ್ನೊಂದು ಪಂದ್ಯದಲ್ಲಿ ಜಪಾನ್‌ನ ಸಯಕಾ ತಕಹಶಿ ಎದುರು ಕಣಕ್ಕಿಳಿದಿದ್ದ ಸೈನಾ 11-21, 2-9ರಿಂದ ಹಿನ್ನಡೆಯಲ್ಲಿದ್ದ ವೇಳೆ ಪಂದ್ಯದಿಂದ ಹಿಂದೆ ಸರಿದರು.

ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಲಕ್ಷ್ಯ 21-10, 21-16ರಿಂದ ನ್ಯಾಟ್ ಎನ್‌ಗುಯೆನ್ ಅವರನ್ನು ಮಣಿಸಿದರು. ಸೌರಭ್ ವರ್ಮಾ ಕೂಡ 22-20, 21-19ರಿಂದ ಬ್ರೆಜಿಲ್‌ನ ಯಗೊರ್ ಕೊಯ್ಲೊ ಎದುರು ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು.

ಪಿ.ವಿ.ಸಿಂಧು– ಪಿಟಿಐ ಸಂಗ್ರಹ ಚಿತ್ರ

ಕಿದಂಬಿ ಶ್ರೀಕಾಂತ್ ವೀರೋಚಿತ ಹೋರಾಟ ತೋರಿದರು. ಅಗ್ರಶ್ರೇಯಾಂಕದ ಆಟಗಾರ, ಜಪಾನ್ ಕೆಂಟೊ ಮೊಮೊಟಾ ಎದುರು ಎಡವಿದರೂ ಅವರ ಛಲದ ಆಟ ಮನಗೆದ್ದಿತು. ಶ್ರೀಕಾಂತ್ ಅವರು ಮೊದಲ ಸುತ್ತಿನ ಹಣಾಹಣಿಯಲ್ಲಿ 18-21 22-20 21-19ರಂದ ಮೊಮೊಟಾ ಅವರಿಗೆ ಮಣಿದರು. ಡೆನ್ಮಾರ್ಕ್ ಓಪನ್‌ನಲ್ಲೂ ಶ್ರೀಕಾಂತ್ ಅವರು ಜಪಾನ್ ಆಟಗಾರನಿಗೆ ಸೋತಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೋಡಿಯು ಎರಡನೇ ಸುತ್ತಿಗೆ ಮುನ್ನಡೆಯಿತು. ಭಾರತದ ಜೋಡಿಯು ಕೇವಲ 37 ನಿಮಿಷಗಳ ಹಣಾಹಣಿಯಲ್ಲಿ 21-19, 21-15ರಿಂದ ಡೆನ್ಮಾರ್ಕ್‌ನ ಮಥಿಯಾಸ್ ಥಿರಿ ಮತ್ತು ಮೈ ಸುರ್ರೊ ಎದುರು ಜಯಭೇರಿ ಮೊಳಗಿಸಿದರು.

ಅಶ್ವಿನಿ-ಸಾತ್ವಿಕ್ ಅವರಿಗೆ ಮುಂದಿನ ಸುತ್ತಿನಲ್ಲಿ ಇಂಡೊನೇಷ್ಯಾದ ಪ್ರವೀಣ್ ಜೋರ್ಡಾನ್ ಮತ್ತು ಮೆಲಾಟಿ ದೀವಾ ಒಕ್ತಾವಿಯಂಟಿ ಸವಾಲು ಎದುರಾಗುವ ಸಾಧ್ಯತೆಯಿದೆ.

ಟೆನಿಸ್: ಸೆಮಿಗೆ ಗುರ್ಲೀನ್ ಕೌರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಶ್ರೇಯಾಂಕದ ಸಂಸ್ಕೃತಿ ಲಾಲ್ ಅವರಿಗೆ ಸೋಲುಣಿಸಿದ ಗುರ್ಲೀನ್ ಕೌರ್ ಖನುಜಾ, ಕೆಎಸ್‌ಎಲ್‌ಟಿಎ-ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಕಾಲಿಟ್ಟರು.

ಇಲ್ಲಿನ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನಲ್ಲಿ ಬುಧವಾರ, 12 ವರ್ಷದ ಗುರ್ಲೀನ್ 6-4, 7-6 (2) ರಿಂದ ಸಂಸ್ಕೃತಿ ಅವರನ್ನು ಮಣಿಸಿದರು. ಗುರ್ಲೀನ್ ಇಲ್ಲಿ ಎಂಟನೇ ಶ್ರೇಯಾಂಕ ಪಡೆದಿದ್ದಾರೆ.

ಬಾಲಕಿಯರ ವಿಭಾಗದ ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ದಿಶಾ ಕುಮಾರ್ 6-3, 6-3ರಿಂದ ಇಂದುಶಾ ನಿಮಕಾಯಲ ಎದುರು, ಅವ್ವಲ್ ವಿವೇಕಾನಂದನ್ 5-7, 6-4, 6-0ರಿಂದ ಪೂಜಾ ನಾಗರಾಜ್ ವಿರುದ್ಧ, ಅರ್ಜಾನ್ ಕೊರಾಕಿವಾಲಾ 6-2, 6-0ರಿಂದ ಆದ್ಯಾ ಚೌರಾಸಿಯಾ ಎದುರು ಗೆದ್ದು ನಾಲ್ಕರ ಘಟ್ಟವನ್ನು ತಲುಪಿದರು.

ಬಾಲಕರ ಸಿಂಗಲ್ಸ್ ಎಂಟರಘಟ್ಟದ ಹಣಾಹಣಿಗಳಲ್ಲಿ ಅಭ್ರದೀಪ್ ಭಟ್ಟಾಚಾರ್ಯ 6-7 (6), 6-4, 6-2ರಿಂದ ಆದಿತ್ಯ ನಾರಾಯಣನ್ ಎದುರು, ಅರಿಹಂತ್ ಕೌಲ್ 6-1, 6-3ರಿಂದ ಆಹಿಲ್ ಆಯಾಜ್ ವಿರುದ್ಧ, ಯಶ್ ಪಂಚಾಕ್ಷರಿ 1-6, 6-4, 6-1ರಿಂದ ಕ್ರಿಸ್ಟೊ ಬಾಬು ವಿರುದ್ಧ ಮತ್ತು ದಕ್ಷಿಶ್ ಆರ್ಯನ್ ಬಸವರಾಜು 6-2, 7-5ರಿಂದ ಅನಂತ್ ಕೃಷ್ಣನ್ ಅವರನ್ನು ಮಣಿಸಿದರು.

ಗುರ್ಲೀನ್ ಕೌರ್ ಖನುಜಾ ಆಟದ ವೈಖರಿ



ಷೇರುಪೇಟೆ ವಹಿವಾಟು 206

ಇಂದಿನ ಅಂತ್ಯ 61,143

61,350 ಹಿಂದಿನ ಅಂತ್ಯ

61800 61600 61400 61200 61000 60800

10:00 12:00 14:00 16:00

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	18,268
ಇಂದಿನ ಅಂತ್ಯ	18,210
▼	57
ದಿನದ ಗರಿಷ್ಠ	18,342

ವಿನಿಮಯ ದರ	
$ ಡಾಲರ್	75.03
£ ಪೌಂಡ್	103.26
€ ಯುರೊ	87
¥ ಯೆನ್ (100ಕ್ಕೆ)	65.93

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಎಲ್‌ಪಿಜಿ ಬೆಲೆ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ಮಾರಾಟದಿಂದ ಕಂಪನಿಗಳಿಗೆ ಆಗುತ್ತಿರುವ ನಷ್ಟವು ಪ್ರತಿ ಸಿಲಿಂಡರ್‌ಗೆ ₹ 100ಕ್ಕಿಂತ ಹೆಚ್ಚಾಗಿರುವ ಕಾರಣ, ಎಲ್‌ಪಿಜಿ ಬೆಲೆಯನ್ನು ಮುಂದಿನ ವಾರದಲ್ಲಿ ಹೆಚ್ಚಿಸುವ ಸಾಧ್ಯತೆ ಇದೆ. ದರವನ್ನು ಹೆಚ್ಚಿಸಬೇಕೇ, ಹೆಚ್ಚಿಸುವುದಾದರೆ ಅದರ ಪ್ರಮಾಣ ಎಷ್ಟಿರಬೇಕು ಎಂಬುದು ಕೇಂದ್ರ ಸರ್ಕಾರ ನೀಡುವ ಅನುಮತಿಯನ್ನು ಆಧರಿಸಿ ಇರಲಿದೆ.

ಬೆಲೆ ಹೆಚ್ಚಿಸುವುದಕ್ಕೆ ಕೇಂದ್ರವು ಅನುಮತಿ ನೀಡಿದರೆ, ಜುಲೈ ನಂತರದಲ್ಲಿ ಐದನೆಯ ಬಾರಿ ಬೆಲೆ ಏರಿಕೆ ಮಾಡಿದಂತೆ ಆಗುತ್ತದೆ. ಅಕ್ಟೋಬರ್ 6ರಂದು ಎಲ್‌ಪಿಜಿ ಬೆಲೆಯನ್ನು ₹ 15ರಷ್ಟು ಹೆಚ್ಚಿಸಲಾಗಿತ್ತು. 14.2 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯು ಜುಲೈ ನಂತರದಲ್ಲಿ ₹ 90ರಷ್ಟು ಜಾಸ್ತಿ ಆಗಿದೆ.

ಪ್ರತಿ ಸಿಲಿಂಡರ್‌ಗೆ ತಗಲುವ ವೆಚ್ಚವನ್ನು ಗ್ರಾಹಕರಿಂದ ಪಡೆಯಲು ಸರ್ಕಾರಿ ಸ್ವಾಮ್ಯದ ಎಲ್‌ಪಿಜಿ ಮಾರಾಟ ಕಂಪನಿಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿಲ್ಲ. ವೆಚ್ಚ ಹಾಗೂ ಮಾರಾಟ ದರದ ನಡುವಿನ ಅಂತರವನ್ನು ತುಂಬಿಕೊಳ್ಳಲು ಕೇಂದ್ರ ಸರ್ಕಾರವು ಸಬ್ಸಿಡಿಯನ್ನು ಕೂಡ ನೀಡಿಲ್ಲ ಎಂದು ಮೂಲಗಳು ವಿವರಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ಬೆಲೆಯು ಹೆಚ್ಚಳ ಕಂಡ ನಂತರ ಕಂಪನಿಗಳಿಗೆ ಪ್ರತಿ ಎಲ್‌ಪಿಜಿ ಸಿಲಿಂಡರ್ ಮಾರಾಟದಿಂದ ₹ 100ಕ್ಕಿಂತ ಹೆಚ್ಚು ನಷ್ಟ ಉಂಟಾಗುತ್ತಿದೆ. ಸೌದಿ ಎಲ್‌ಪಿಜಿ ದರದಲ್ಲಿ ಶೇಕಡ 60ರಷ್ಟು ಹೆಚ್ಚಳವಾಗಿದ್ದು, ಈ ತಿಂಗಳಲ್ಲಿ ಅದು ಪ್ರತಿ ಟನ್‌ಗೆ 600 ಅಮೆರಿಕನ್ ಡಾಲರ್‌ಗೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಪ್ರತಿ ಬ್ಯಾರೆಲ್‌ಗೆ 85.42 ಡಾಲರ್‌ಗೆ ತಲುಪಿದೆ.

'ಎಲ್‌ಪಿಜಿ ಬೆಲೆಯನ್ನು ಈಗಲೂ ನಿಯಂತ್ರಣದಲ್ಲಿ ಇರಿಸಲಾಗಿದೆ. ಅಂದರೆ, ಮಾರುಕಟ್ಟೆಯಲ್ಲಿ ಗ್ರಾಹಕರು ಅದಕ್ಕೆ ಪಾವತಿಸುವ ಬೆಲೆ ಎಷ್ಟಿರಬೇಕು ಎಂಬುದನ್ನು ಕೇಂದ್ರ ಸರ್ಕಾರ ತೀರ್ಮಾನಿಸಬಹುದು. ಕಂಪನಿಗಳು ಎಲ್‌ಪಿಜಿ ಸಿಲಿಂಡರ್‌ಅನ್ನು ಗ್ರಾಹಕರಿಗೆ ನಷ್ಟದಲ್ಲಿ ಮಾರಾಟ ಮಾಡಿದರೆ, ನಷ್ಟದ ಮೊತ್ತವನ್ನು ಕೇಂದ್ರವು ಭರಿಸಿಕೊಡಬೇಕು' ಎಂದು ಮೂಲಗಳು ವಿವರಿಸಿವೆ.

ಕೇಂದ್ರ ಸರ್ಕಾರವು ಹಿಂದಿನ ವರ್ಷ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಹಂತ ಹಂತವಾಗಿ ಹೆಚ್ಚಿಸುವ ಮೂಲಕ ಅದರ ಮಾರಾಟ ದರವನ್ನು ಉತ್ಪಾದನಾ ವೆಚ್ಚಕ್ಕೆ ಸಮನಾಗಿಸಿ ಸಬ್ಸಿಡಿಯನ್ನು ಇಲ್ಲವಾಗಿಸಿದೆ.

ಈಗ ಕಂಪನಿಗಳಿಗೆ ಆಗುತ್ತಿರುವ ನಷ್ಟವನ್ನು ಭರಿಸಲು ಸರ್ಕಾರವು ಮುಂದಾಗದೆ ಇದ್ದರೆ, ಮಾರಾಟ ದರವನ್ನು ಹೆಚ್ಚಿಸಬೇಕಾಗುತ್ತದೆ. ಆದರೆ, ಒಂದೇ ಬಾರಿಗೆ

ಬಾಂಗ್ಲಾದೇಶಕ್ಕೆ ಕಾಡಿದ ನಿರಾಸೆ; ಮೋಯಿನ್ ಅಲಿ, ಜೇಸನ್ ರಾಯ್ ಮಿಂಚು

ಇಂಗ್ಲೆಂಡ್‌ಗೆ ಎರಡನೇ ಜಯ

ಅಬುಧಾಬಿ (ಪಿಟಿಐ): ಮೋಯಿನ್ ಅಲಿ ಬೌಲಿಂಗ್ ಮತ್ತು ಜೇಸನ್ ರಾಯ್ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಅಮೋಘ ಜಯ ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ 8 ವಿಕೆಟ್‌ಗಳಿಂದ ಗೆದ್ದಿತು. ಏಯಾನ್ ಮಾರ್ಗನ್ ಬಳಗಕ್ಕೆ ಟೂರ್ನಿಯಲ್ಲಿ ಇದು ಸತತ ಎರಡನೇ ಜಯವಾಗಿದೆ. ಇದರೊಂದಿಗೆ ಮೊದಲ ಗುಂಪಿನಲ್ಲಿ ತಂಡವು ನಾಲ್ಕು ಅಂಕಗಳಿಸಿ ಅಗ್ರಸ್ಥಾನಕ್ಕೇರಿದೆ.

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಇಂಗ್ಲೆಂಡ್‌ನಮೋಯಿನ್ ಅಲಿ (18ಕ್ಕೆ2) ಅವರ ದಾಳಿಯ ಮುಂದೆ ಬಾಂಗ್ಲಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 124 ರನ್ ಗಳಿಸಲಷ್ಟೇ ಶಕ್ತವಾಯಿತು. ಅಲಿಗೆ ಟೈಮಲ್ ಮಿಲ್ಸ್ (27ಕ್ಕೆ3) ಉತ್ತಮ ಜೊತೆ ನೀಡಿದರು.

ಇದಕ್ಕುತ್ತರವಾಗಿಇಂಗ್ಲೆಂಡ್ 2 ವಿಕೆಟ್‌ಗಳ ನಷ್ಟಕ್ಕೆ 126 ರನ್ ಗಳಿಸಿತು. ಇನ್ನೂ 5.5 ಓವರ್‌ಗಳಿರುವಂತೆಯೇ ಜಯಭೇರಿ ಬಾರಿಸಿತು. 28 ರನ್ ಗಳಿಸಿದ ಡೇವಿಡ್ ಮಲಾನ್ ಮತ್ತು 8 ರನ್ ಗಳಿಸಿದ ಜಾನಿ ಬೆಸ್ಟೊ ಅಜೇಯರಾಗುಳಿದರು.

ಸಾಧಾರಣ ಮೊತ್ತವನ್ನು ರಕ್ಷಿಸಿಕೊಳ್ಳುವ ಯಾವ ಪ್ರಯತ್ನವೂ ಬಾಂಗ್ಲಾ ಬೌಲರ್‌ಗಳಿಂದ ಕಂಡುಬರಲಿಲ್ಲ. ಇಂಗ್ಲೆಂಡ್‌ನ ಆರಂಭಿಕ ಜೋಡಿ ರಾಯ್ ಮತ್ತು ಬಟ್ಲರ್ (18ರನ್) ಕೇವಲ ನಾಲ್ಕು ಓವರ್‌ಗಳಲ್ಲಿ 37 ರನ್ ಗಳಿಸಿದರು.

ಎಡಗೈ ಸ್ಪಿನ್ನರ್ ನಸೂಮ್ ಅಹಮದ್ ಅವರ ಬೌಲಿಂಗ್‌ನಲ್ಲಿ ಬಟ್ಲರ್ ಔಟಾದಾಗ ಈ ಜೊತೆಯಾಟ ಮುರಿಯಿತು. ಆದರೆ, ರಾಯ್ ಆಟಕ್ಕೆ ಕಡಿವಾಣ ಹಾಕಲು ಸಾಧ್ಯವಾಗಲಿಲ್ಲ. ರಾಯ್ ಮತ್ತು ಡೇವಿಡ್ ಮಲಾನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 73 ರನ್‌ಗಳನ್ನು ಕಲೆಹಾಕಿದರು. 13ನೇ ಓವರ್‌ನಲ್ಲಿ ರಾಯ್ ಔಟಾದಾಗ ತಂಡ ಗೆಲುವಿನ ಸನಿಹಕ್ಕೆ ಬಂದು ನಿಂತಿತ್ತು.

ಮಲಾನ್ ಮತ್ತು ಜಾನಿ ಹೆಚ್ಚಿನ ವಿಕೆಟ್ ಪತನಕ್ಕೆ ಅವಕಾಶ ಕೊಡದೇ ತಂಡವನ್ನು ಜಯದ ಗಡಿ ಮುಟ್ಟಿಸಿದರು.

ಬಾಂಗ್ಲಾ ಬ್ಯಾಟಿಂಗ್ ಪಡೆಗೆ ಆರಂಭದಲ್ಲಿಯೇ ಮೋಯಿನ್ ಅಲಿ ಪೆಟ್ಟುಕೊಟ್ಟರು. ಇದರಿಂದಾಗಿ ತಂಡವು 73 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಮುಷ್ಫಿಕುರ್ ರಹೀಂ (29ರನ್) ಅವರೊಬ್ಬರದ್ದೇ ಗರಿಷ್ಠ ವೈಯಕ್ತಿಕ ಸ್ಕೋರ್ ಆಯಿತು.

ಜೇಸನ್ ರಾಯ್ ಬ್ಯಾಟಿಂಗ್ ವೈಖರಿ– ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ: 9ಕ್ಕೆ 124 (20 ಓವರ್)

ಲಿಟನ್ ಸಿ ಲಿವಿಂಗ್‌ಸ್ಟನ್ ಬಿ ಅಲಿ 9 (8 ಎ, 4x2), ನಯೀಮ್ ಸಿ ವೋಕ್ಸ್ ಬಿ ಅಲಿ 5 (7 ಎ), ಶಕೀಬ್ ಸಿ ರಶೀದ್ ಬಿ ವೋಕ್ಸ್ 4 (7 ಎ), ಮುಷ್ಫಿಕುರ್ ಎಲ್‌ಬಿಡಬ್ಲ್ಯು ಬಿ ಲಿವಿಂಗ್‌ಸ್ಟನ್ 29 (30 ಎ, 4x3), ಮಹಮ್ಮದುಲ್ಲ ಸಿ ವೋಕ್ಸ್ ಬಿ ಲಿವಿಂಗ್‌ಸ್ಟನ್ 19 (24 ಎ, 4x1), ಅಫೀಫ್ ರನೌಟ್ (ಮಿಲ್ಸ್/ಬಟ್ಲರ್) 5 (6 ಎ, 4x1), ನೂರುಲ್ ಸಿ ಬಟ್ಲರ್ ಬಿ ಮಿಲ್ಸ್ 16 (18 ಎ), ಮೆಹದಿ ಸಿ ವೋಕ್ಸ್ ಬಿ ಮಿಲ್ಸ್ 11 (10 ಎ, 4x2), ನಾಸುಮ್ ಔಟಾಗದೆ 19 (9 ಎ, 4x1, 6x2), ಮುಸ್ತಫಿಜುರ್ ರೆಹಮಾನ್ ಬಿ ಮಿಲ್ಸ್ 0 (1 ಎ).

ಇತರೆ (ಬೈ 1, ಲೆಗ್ ಬೈ 1, ವೈಡ್ 5) 7

ವಿಕೆಟ್ ಪತನ: 1-14 (ಲಿಟನ್ ದಾಸ್, 2.2), 2-14 (ಮೊಹಮ್ಮದ್ ನಯೀಮ್, 2.3), 3-26 (ಶಕೀಬ್ ಅಲ್ ಹಸನ್, 5.2), 4-63 (ಮುಷ್ಫಿಕುರ್ ರಹೀಂ, 10.4), 5-73 (ಅಫೀಫ್ ಹೊಸೇನ್, 12.4), 6-83 (ಮೊಹಮ್ಮದುಲ್ಲ, 14.5), 7-98 (ಮೆಹದಿ ಹಸನ್, 17.1), 8-124 (ನೂರುಲ್ ಹಸನ್, 19.5), 9-124 (ಮುಸ್ತಫಿಜುರ್ ರೆಹಮಾನ್, 19.6)

ಬೌಲಿಂಗ್: ಮೋಯಿನ್ ಅಲಿ 3-0-18-2, ಕ್ರಿಸ್ ವೋಕ್ಸ್ 4-0-12-1, ಆದಿಲ್ ರಶೀದ್ 4-0-35-0, ಕ್ರಿಸ್ ಜೋರ್ಡಾನ್ 2-0-15-0, ಟೈಮಲ್ ಮಿಲ್ಸ್ 4-0-27-3, ಲಿಯಾಮ್ ಲಿವಿಂಗ್‌ಸ್ಟೋನ್ 3-0-15-2

ಇಂಗ್ಲೆಂಡ್: 2 ಕ್ಕೆ 126 (14.1 ಓವರ್)

ಜೇಸನ್ ಸಿ ನಾಸುಮ್ ಬಿ ಷರೀಫುಲ್ 61 (38 ಎ, 4x5, 6x3), ಬಟ್ಲರ್ ಸಿ ನಯೀಮ್ ಬಿ ನಾಸುಮ್ 18 (18 ಎ, 4x1, 6x1), ಮಲಾನ್ ಔಟಾಗದೆ 28 (25 ಎ, 4x3), ಬೇಸ್ಟೊ ಔಟಾಗದೆ 8 (4 ಎ, 4x1))

ಇತರೆ (ಲೆಗ್ ಬೈ 6, ವೈಡ್ 5) 11

ವಿಕೆಟ್ ಪತನ: 1-39 (ಜೋಸ್ ಬಟ್ಲರ್, 4.5), 2-112 (ಜೇಸನ್ ರಾಯ್, 12.5)

.ಬೌಲಿಂಗ್: ಶಕೀಬ್ ಅಲ್ ಹಸನ್ 3-0-24-0, ಮುಸ್ತಫಿಜುರ್ ರೆಹಮಾನ್ 3-0-23-0, ಶೊರಿಫುಲ್ ಇಸ್ಲಾಂ 3.1-0-26-1, ನಾಸುಮ್ ಅಹಮ್ಮದ್ 3-0-26-1, ಮೆಹದಿ ಹಸನ್ 2-0-21-0

ಫಲಿತಾಂಶ: ಇಂಗ್ಲೆಂಡ್‌ಗೆ 8 ವಿಕೆಟ್‌ಗಳ ಜಯ.

ಮೋಯಿನ್ ಅಲಿ (ಎಡ) ಹಾಗೂ ಏಯಾನ್ ಮಾರ್ಗನ್– ರಾಯಿಟರ್ಸ್ ಚಿತ್ರ

ಪಿಟಿವಿಯಲ್ಲಿ ಮುಖಭಂಗ: ಅಖ್ತರ್‌ಗೆ ಬೆಂಬಲ

ಕರಾಚಿ (ಪಿಟಿಐ): ಟ್ವೆಂಟಿ-20 ವಿಶ್ವಕಪ್ ಟೂರ್ನಿಯ ನ್ಯೂಜಿಲೆಂಡ್ ಎದುರಿನ ಪಾಕಿಸ್ತಾನದ ಪಂದ್ಯದ ನಂತರ ಟಿವಿ ಕಾರ್ಯಕ್ರಮದಿಂದ ಪಾಕಿಸ್ತಾನದ ಮಾಜಿ ವೇಗದ ಬೌಲರ್ ಶೊಯೆಬ್ ಅಖ್ತರ್ ಹೊರನಡೆದಿದ್ದಾರೆ.

ಮಂಗಳವಾರ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಪಾಕಿಸ್ತಾನ ಐದು ವಿಕೆಟ್‌ಗಳ ಜಯ ಗಳಿಸಿತ್ತು. ರಾಷ್ಟ್ರೀಯ ಚಾನಲ್ 'ಪಿಟಿವಿ'ಯಲ್ಲಿ ಪಂದ್ಯದ ನಂತರ ವಿಶ್ಲೇಷಣೆ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ತಮಗೆ ಅವಮಾನ ಮಾಡಲಾಗಿದೆ ಎಂದು ಅಖ್ತರ್ ದೂರಿದ್ದಾರೆ.

ಚರ್ಚೆಯ ನಡುವೆ ಕಾರ್ಯಕ್ರಮ ನಿರೂಪಕ, ಪಿಟಿಐ ಕ್ರೀಡಾ ವಿಭಾಗದ ನೌಮನ್ ಎತ್ತಿದ ಪ್ರಶ್ನೆಯೊಂದಕ್ಕೆ ಉತ್ತರ ನೀಡದೇ ವೇಗದ ಬೌಲರ್ ಹ್ಯಾರಿಸ್ ರವೂಫ್ ಅವರನ್ನು ಹೊಗಳಿದ ಮತ್ತು ರವೂಫ್ ಬೆಳಕಿಗೆ ಬರಲು ಕಾರಣವಾದ ಪಾಕಿಸ್ತಾನ ಸೂಪರ್ ಲೀಗ್ ಫ್ರಾಂಚೈಸ್ ಲಾಹೋರ್ ಖಲಂದರ್‌ನ ಕೋಚ್

ಶೋಯೆಬ್ ಅಖ್ತರ್

ಆ ಖಿ ಬ್ ಬಗ್ಗೆ ಅಖ್ತರ್ ಮಾತನಾಡಿದ್ದರು.

ಇದರಿಂದ ಕೋಪಗೊಂಡ ನೌಮನ್ ದಿಢೀರ್ ಆಗಿ ಅಖ್ತರ್ ಅವರನ್ನು ಅಲ್ಲಿಂದ ತೊಲಗುವಂತೆ ಸೂಚಿಸಿದ್ದರು. ತಬ್ಬಿಬ್ಬಾದ ಅಖ್ತರ್ ಉತ್ತರ ನೀಡಲು ಮುಂದಾಗುತ್ತಿದ್ದಂತೆ 'ಬ್ರೇಕ್ ನಂತರ ಸಿಗೋಣ' ಎಂದು ನೌಮನ್ ಘೋಷಿಸಿದ್ದರು.

ಮೈಕ್ರೋಫೋನ್ ಕಿತ್ತೆಸೆದು ಅಖ್ತರ್ ಹೊರನಡೆದಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ವಾಪಸ್ ಕರೆಯಲು ಟಿವಿಯ ಕ್ರೀಡಾ ವಿಭಾಗದ ಪರವಾಗಿ ಕಾರ್ಯಕ್ರಮದ ಆತಿಥ್ಯ ವಹಿಸಿದ್ದ ನೌಮನ್ ನಿಯಾಜ್ ಮುಂದಾಗಲಿಲ್ಲ. ಅಖ್ತರ್ ಹೊರಹೋದದ್ದರ ಕಡೆಗೆ ಗಮನವನ್ನೂ ನೀಡದೆ ಏನೂ ನಡೆಯಲಿಲ್ಲ ಎಂಬಂತೆ ಸಹಜವಾಗಿ ಕಾರ್ಯಕ್ರಮ ಮುಂದುವರಿಸಿದ್ದಾರೆ. ಇದರ ಬೆನ್ನಲ್ಲೇ ಚಾನಲ್‌ನ ಕ್ರಿಕೆಟ್ ತಜ್ಞ ಹುದ್ದೆಗೆ ಅಖ್ತರ್ ರಾಜೀನಾಮೆ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಇತರ ತಜ್ಞರಾದ ವಿವಿಯನ್ ರಿಚರ್ಡ್ಸ್, ಡೇವಿಡ್ ಗೋವರ್, ರಶೀದ್ ಲತೀಫ್, ಉಮರ್ ಗುಲ್, ಆಖಿಬ್ ಜಾವೇದ್ ಮತ್ತು ಪಾಕ್ ಕ್ರಿಕೆಟ್ ಆಟಗಾರ್ತಿ ಸನಾ ಮಿರ್ ಅವರು ಈ ಘಟನೆಯಿಂದ ತಬ್ಬಿಬ್ಬಾಗಿದ್ದರು. ಸಾಮಾಜಿಕ ತಾಣಗಳಲ್ಲಿ ಅನೇಕ ಮಂದಿ ಅಖ್ತರ್ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದು ನೌಮನ್ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದ್ದಾರೆ.

ವಿವಾದವನ್ನು ಅಷ್ಟಕ್ಕೇ ಮುಗಿಸಲು ಅಖ್ತರ್ ಸಿದ್ಧರಿದ್ದರು. ಆದರೆ ಕಾರ್ಯಕ್ರಮದ ಮುಂದಿನ ಭಾಗದಲ್ಲಿ ನೌಮನ್ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದ್ದರು. ಅಖ್ತರ್ 46 ಟೆಸ್ಟ್ ಮತ್ತು 163 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ನಮೀಬಿಯಾ ಜಯಭೇರಿ

ಅಬುಧಾಬಿ: ಆಲ್‌ರೌಂಡ್ ಆಟವಾಡಿದ ನಮೀಬಿಯಾ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12 ಹಂತದ ಪಂದ್ಯದಲ್ಲಿ ಜಯ ಗಳಿಸಿತು. ಶೇಕ್ ಜಯೇದ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎರಡನೇ ಗುಂಪಿನ ಪಂದ್ಯದಲ್ಲಿ ನಮೀಬಿಯ ನಾಲ್ಕು ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ತಂಡವನ್ನು ಮಣಿಸಿತು.

ಪರಿಣಾಮಕಾರಿ ಬೌಲಿಂಗ್ ಮತ್ತು ಅಮೋಘ ಫೀಲ್ಡಿಂಗ್ ಮೂಲಕ ಎದುರಾಳಿಗಳನ್ನು 109 ರನ್‌ಗಳಿಗೆ ನಿಯಂತ್ರಿಸಿದ ನಮೀಬಿಯಾ 19.1 ಓವರ್‌ಗಳಲ್ಲಿ ಗುರಿ ಮುಟ್ಟಿತು. ಆರಂಭಿಕ ಬ್ಯಾಟರ್ ಕ್ರೇಗ್ ವಿಲಿಯಮ್ಸ್ ಮತ್ತು ಆರನೇ ಕ್ರಮಾಂಕದ ಜೆ.ಜೆ. ಸ್ಮಿತ್ ಗೆಲುವಿನ ರೂವಾರಿಯಾದರು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ ಆರಂಭದಲ್ಲೇ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಕೆಳಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಮೈಕೆಲ್ ಲೀಸ್ಕ್ ಮತ್ತು ಕ್ರಿಸ್ ಗ್ರೀವ್ಸ್ ತಂಡದ ಗೌರವ ಉಳಿಸಿದರು.

ಮೊದಲ ಓವರ್‌ನ ಮೊದಲ ಮೂರು ಎಸೆತಗಳಲ್ಲಿ ಎರಡು ವಿಕೆಟ್ ಉರುಳಿಸಿದ ಎಡಗೈ ವೇಗಿ ರೂಬೆನ್ ಟ್ರಂಪೆಲ್‌ಮ್ಯಾನ್ ಅವರು ಸ್ಕಾಟ್ಲೆಂಡ್‌ಗೆ ಆರಂಭದಲ್ಲೇ ಆಘಾತ ನೀಡಿದರು.

ಎರಡನೇ ಎಸೆತದಲ್ಲಿ ಜಾರ್ಜ್ ಮುನ್ಸಿ ಅವರನ್ನು ಬೌಲ್ಡ್ ಮಾಡಿದ ರೂಬೆನ್ ಮೂರನೇ ಎಸೆತದಲ್ಲಿ ಕಲಂ ಮೆಕ್‌ಲೀಡ್ ಅವರ ವಿಕೆಟ್ ಕಬಳಿಸಿದರು. ಆರಂಭಿಕ ಬ್ಯಾಟರ್ ಮ್ಯಾಥ್ಯೂ ಕ್ರಾಸ್ ತಾಳ್ಮೆಯಿಂದ ಬ್ಯಾಟ್ ಬೀಸಿ ರನ್ ಕಲೆ ಹಾಕಿದರು. ಆದರೆ ನಾಲ್ಕನೇ ಕ್ರಮಾಂಕದ ರಿಚಿ ಬೆರಿಂಗ್ಟನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಯಲ್ಲಿ ಕೆಡವಿದ ರೂಬೆನ್ ಎದುರಾಳಿಗಳನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದರು. ಲೀಸ್ಕ್ ಜೊತೆಗೂಡಿದ ಕ್ರೇಗ್ ವಲೇಸ್ ಅವರಿಗೆ 15 ರನ್‌ಗಳ ಜೊತೆಯಾಟ ಆಡಲಷ್ಟೇ ಸಾಧ್ಯವಾಯಿತು. ನಂತರ ಲೀಸ್ಕ್ ಮತ್ತು ಗ್ರೀವ್ಸ್ ಆಟ ರಂಗೇರಿತು. ಅವರಿಬ್ಬರು 36 ರನ್‌ಗಳನ್ನು ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 8ಕ್ಕೆ 109 (ಮ್ಯಾಥ್ಯೂ ಕ್ರಾಸ್ 19, ಮೈಕೆಲ್ ಲೀಸ್ಕ್ 44, ಕ್ರಿಸ್ ಗ್ರೀವ್ಸ್ 25; ರೂಬೆನ್ ಟ್ರಂಪೆಲ್‌ಮ್ಯಾನ್ 17ಕ್ಕೆ3, ಜಾನ್ ಫ್ರೈಲಿಂಕ್ 10ಕ್ಕೆ2, ಜೆ.ಜೆ.ಸ್ಮಿತ್ 20ಕ್ಕೆ1, ಡೇವಿಡ್ ವೀಸ್ 22ಕ್ಕೆ1). ನಮೀಬಿಯ: 19.1 ಓವರ್‌ಗಳಲ್ಲಿ 6ಕ್ಕೆ 115 (ಕ್ರೇಗ್ ವಿಲಿಯಮ್ಸ್ 23, ಮೈಕೆಲ್ ವ್ಯಾನ್ ಲಿಂಗೆನ್ 18, ಡೇವಿಡ್ ವೀಸ್ 16, ಜೆ.ಜೆ.ಸ್ಮಿತ್ 32; ಬ್ರಾಡ್ ವ್ಹೀಲ್ 14ಕ್ಕೆ1, ಸಫಿಯಾನ್ ಷರೀಪ್ 21ಕ್ಕೆ1, ಕ್ರಿಸ್ ಗ್ರೀವ್ಸ್ 22ಕ್ಕೆ1, ಮಾರ್ಕ್ ವ್ಯಾಟ್ 22ಕ್ಕೆ1, ಮೈಕೆಲ್ ಲೀಸ್ಕ್ 12ಕ್ಕೆ2). ಫಲಿತಾಂಶ: ನಮೀಬಿಯಗೆ 4 ವಿಕೆಟ್‌ಗಳ ಜಯ.

ರೂಬೆನ್ ಟ್ರಂಪೆಲ್‌ಮ್ಯಾನ್ –ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾ–ಲಂಕಾ ಕದನ ಕುತೂಹಲ

ಶ್ರೀಲಂಕಾ ಸ್ಪಿನ್ನರ್ ಮಹೀಶ್ ತೀಕ್ಷಣ ಗಾಯದಿಂದ ಗುಣಮುಖ

ದುಬೈ: ಶ್ರೀಲಂಕಾ ವಿರುದ್ಧದ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಗುಂಪು ಒಂದರ ಸೂಪರ್ 12 ಹಂತದ ಪಂದ್ಯದಲ್ಲಿ ಆಸ್ಟ್ರೇಲಿಯಾ ಗೆಲುವಿನ ಲಯ ಮುಂದುವರಿಸುವ ಹಂಬಲದಲ್ಲಿದೆ.

ಮೊದಲ ಪಂದ್ಯಗಳಲ್ಲಿ ಭರ್ಜರಿ ಜಯ ಗಳಿಸಿರುವ ಈ ಎರಡು ತಂಡಗಳು ಗುರುವಾರ ಮುಖಾಮುಖಿಯಾಗಲಿದ್ದು ಕುತೂಹಲ ಮೂಡಿಸಿದೆ.

ಎ ಗುಂಪಿನ ಮೂರೂ ಪಂದ್ಯಗಳಲ್ಲಿ ಜಯ ಗಳಿಸಿರುವ ಶ್ರೀಲಂಕಾ ಗುಂಪು ಒಂದರ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶದ ಸವಾಲಿನ ಮೊತ್ತ ಬೆನ್ನತ್ತಿ ಜಯ ಗಳಿಸಿತ್ತು. ದಕ್ಷಿಣ ಆಫ್ರಿಕಾವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕಿ ಆಸ್ಟ್ರೇಲಿಯಾ ಐದು ವಿಕೆಟ್‌ಗಳಿಂದ ಗೆದ್ದಿತ್ತು.

ಆಸ್ಟ್ರೇಲಿಯಾದ ಡೇವಿಡ್ ವಾರ್ನರ್ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲೂ ರನ್ ಗಳಿಸಲು ವಿಫಲರಾಗಿದ್ದರು. ನಾಯಕ ಆ್ಯರನ್ ಫಿಂಚ್ ಕೂಡ ಬೇಗ ಔಟಾಗಿದ್ದರು. ಸ್ಟೀವ್ ಸ್ಮಿತ್ ಲಯಕ್ಕೆ ಮರಳಿರುವುದು ತಂಡದಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

ಜೋಶ್ ಹ್ಯಾಜಲ್‌ವುಡ್ –ರಾಯಿಟರ್ಸ್ ಚಿತ್ರ

ಟ್ವೆಂಟಿ-20 ರ‍್ಯಾಂಕಿಂಗ್

ಆಸ್ಟ್ರೇಲಿಯಾ	6
ಶ್ರೀಲಂಕಾ	9

ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ
ಆಸ್ಟ್ರೇಲಿಯಾ	30	17	13	-
ಶ್ರೀಲಂಕಾ	39	26	12	1

ಮಹೀಶ್ ತೀಕ್ಷಣ –ಎಎಫ್‌ಪಿ ಚಿತ್ರ

ಟ್ವೆಂಟಿ-20ಯಲ್ಲಿ ಮುಖಾಮುಖಿ

ಪಂದ್ಯಗಳು	16
ಆಸ್ಟ್ರೇಲಿಯಾ ಜಯ	8
ಶ್ರೀಲಂಕಾ ಗೆಲುವು	8

ಗಾಯದ ಸಮಸ್ಯೆಯಿಂದಾಗಿ ಹಿಂದಿನ ಪಂದ್ಯದಲ್ಲಿ ಆಡದೇ ಇದ್ದ ಶ್ರೀಲಂಕಾದ ಸ್ಪಿನ್ನರ್ ಮಹೀಶ್ ತೀಕ್ಷಣ ಈ ಪಂದ್ಯಕ್ಕೆ ಲಭ್ಯವಿದ್ದಾರೆ. ಇದು ತಂಡದಲ್ಲಿ ಭರವಸೆ ತಂದಿದೆ. ಲೆಗ್ ಸ್ಪಿನ್ನರ್ ಆಲ್‌ರೌಂಡರ್ ವಾನಿಂದು ಹಸರಂಗ ಅವರ ಮೇಲೆಯೂ ತಂಡ ನಿರೀಕ್ಷೆ ಇದೆ.

ಐಪಿಎಲ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದ ಆಸ್ಟ್ರೇಲಿಯಾದ ವೇಗಿ ಜೋಶ್ ಹ್ಯಾಜಲ್‌ವುಡ್ ದಕ್ಷಿಣ ಆಫ್ರಿಕಾ ಎದುರು ಎರಡು ವಿಕೆಟ್ ಗಳಿಸಿದ್ದು ಮಿಷೆಲ್ ಸ್ಟಾರ್ಕ್ ಒಳಗೊಂಡ ಬೌಲಿಂಗ್ ವಿಭಾಗಕ್ಕೆ ಬಲ ತುಂಬಿದ್ದಾರೆ. ಚರಿತ್ ಅಸಲಂಕ, ಪಥುಮ್ ನಿಸಾಂಕ ಮತ್ತು ಆವಿಷ್ಕಾ ಫರ್ನಾಂಡೊ ಅವರನ್ನು ಒಳಗೊಂಡ ಲಂಕಾ ಬ್ಯಾಟಿಂಗ್ ವಿಭಾಗಕ್ಕೆ ಹ್ಯಾಜಲ್‌ವುಡ್ ಮತ್ತು ಸ್ಟಾರ್ಕ್ ಸವಾಲಾಗಬಲ್ಲರು.

ಆರಂಭ: ರಾತ್ರಿ 7.30 ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಶ್ವ ಬಾಕ್ಸಿಂಗ್: ಎರಡನೇ ಸುತ್ತಿಗೆ ನಿಶಾಂತ್

ಬೆಲ್‌ಗ್ರೇಡ್ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಕಣಕ್ಕಿಳಿದಿರುವ ಭಾರತದ ನಿಶಾಂತ್ ದೇವ್ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ. ಇದರೊಂದಿಗೆ ದೇಶದ ಒಟ್ಟು ಏಳು ಮಂದಿ ಮೊದಲ ಸುತ್ತಿನ ತಡೆ ದಾಟಿದ್ದು, ಅಜೇಯ ಓಟ ಮುಂದುವರಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ 71 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ನಿಶಾಂತ್ ಬುಧವಾರ ಮೊದಲ ಸುತ್ತಿನ ಬೌಟ್‌ನಲ್ಲಿ 5-0ಯಿಂದ ಲಾಸ್ಲೊ ಕೊಬಾಕ್ ಅವರಿಗೆ ಸೋಲಿನ ರುಚಿ ತೋರಿಸಿದರು. ಮುಂದಿನ ಸುತ್ತಿನಲ್ಲಿ ಅವರಿಗೆ ಮಾರಿಷಸ್‌ನ ಮೆರ್ಯೆನ್ ಕ್ಲೇರ್ ಸವಾಲು ಎದುರಾಗಿದೆ.

ಸುಮಿತ್ (75 ಕೆಜಿ), ನರೇಂದ್ರ ಬೆರ್ವಾಲ್ (+92 ಕೆಜಿ) ಕೂಡ ಮಂಗಳವಾರ ರಾತ್ರಿ ನಡದ ಬೌಟ್‌ಗಳಲ್ಲಿ ವಿಜಯ ಸಾಧಿಸಿ ಮುನ್ನಡೆದರು. ಸುಮಿತ್ 5-0ಯಿಂದ ಜಮೈಕಾದ ಡ್ಯಾಮನ್ ಓನಿಲ್ ಎದುರು ಗೆದ್ದರೆ, ನರೇಂದರ್ 4-1ರಿಂದ ಪೋಲೆಂಡ್‌ನ ಆಸ್ಕರ್ ಸಫರಿಯಾನ್ ಸವಾಲು ಮೀರಿದರು.

ಸುಮಿತ್ ಅವರು ಮುಂದಿನ ಸುತ್ತಿನಲ್ಲಿ ತಜಿಕಿಸ್ತಾನದ ಅಬ್ದುಲ್‌ಮಲಿಕ್ ಬೊಲ್ಟಯೆವ್ ಎದುರು, ನರೇಂದರ್ ಅವರು ಸಿಯಾರಾ ಲಿಯೋನ್‌ನ ಮೊಹಮ್ಮದ್ ಕೆಂಡೆಹ್ ಎದುರು ಸ್